vouchers. It is stated that the Administrator, Secretary and Clerk were responsible for these mis-appropriations and bogus expenditure of Town Panchayats funds of Rattihalli, Hirekerur Taluk, Dharwar District.

Now, all the three officials i.e. the Administrator, Tressurer and Clerk have been placed under suspension. I have received telegram just now.

SRI B. G. BANAKAR.—I thank the Hon'ble Minister.

## BUDGET ESTIMATES FOR 1976-77

### Demands for Grants Demand Nos. 18, 19, 27, 54, 55 and 41

SRI H. M. CHANNABASAPPA (Minister for Public Works) Sir On the recommendation of the Governor, I beg to move :

"that a sum not exceeding Rs. 24,06,99,000 be granted to the Government to defray the charges which will come in course of payment during the financial year ending 31st day of March 1977 in respect of Demand No. 18 "Public Works (Excluding Construction)"

"That a sum not exceeding Rs. 8,60,93,000 be granted to the Government to defray the charges which will come in course of payment during the financial year ending 31st day of March 1977 in respect of Demand No. 19 "Buildings"

"That a sum not exceeding Rs 9,07,00,000 be granted to the Government to defray the charges which will come in course of payment during the financial year ending 31st day of March 1977 in respect of Demand No 27 "Public Health Engineering."

"That a sum not exceeding Rs. 73, 63, 000 be granted to the Government to defray the charges which will come in course of payment during the financial year ending 31st day of March 1977 in respect of Demand No. 54 "Ports and Water Transport Services".

"That a sum not exceeding Rs 26, 83, 00,000 be granted to the Government to defray the charges which will come in course of payment during the financial year ending 31st day of March 1977 in respect of Demand No. 55 "Roads and Bridges".

SRI S. B. NAGARAL (Minister of State for Minor Irrigation).— On the recommedation of the Governor, I beg to move :

"That a sum not exceeding Rs. 14, 82, 50.000 be granted to the Government to defray the charges which will come in course of payment during the financial year ending 31st day of March 1977 in respect of Demand No. 41"Minor Irrigation".

MADAM SPEAKER.—Motion Moved :

"That a sum not exceeding Rs. 24 06 99 000 be granted to the Government to defray the charges which will come in cousee of payment during the financihal year ending 31st day of March 1977 in respect of Demand No. 18 "Public Works (Excluding Construction)"

All the other Demands are also before the House.

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಇಲಾಖಾ ಸಚಿವರು ಮತ್ತು ಸಣ್ಣ ನೀರಾವರಿ ಖಾತೆಯ ಸಚಿವರು ಮಂಡಿಸಿರತಕ್ಕಂಥಾ ಬೇಡಿಕೆಗಳನ್ನು ವಿರೋಧಿಸಿ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರು ಮಂಡಿಸಿರತಕ್ಕಂಥಾ ಬೇಡಿಕೆಗಳನ್ನು ವಿರೋಧ ಮಾಡುತ್ತೇನೆ ಎನ್ನತಕ್ಕಂಥಾ ಮಾತನ್ನು ಹೇಳಿದಾಗ ಅವರು ಮಾಡಿದಂಥಾ ಒಳ್ಳೆಯ ಕೆಲಸಗಳೆಲ್ಲವನ್ನೂ ವಿರೋಧ ಮಾಡುತ್ತೇನೆ ಅಂತಲ್ಲ. ನಾನು ಕೆಲವು ವಿಷಯಗಳ ಬಗ್ಗೆ ಮಾನ್ಯ ಚೆನ್ನಬಸಪ್ಪನವರನ್ನು ವಂದಿಸುತ್ತೇನೆ. ಕೆಲವು ವಿಷಯಗಳ ಬಗ್ಗೆ ಅವರಿಗೆ ಶಹಭಾಸ್‌ಗಿರಿಯನ್ನೂ ಕೂಡ ಕೊಡಬಹುದು. ಅನೇಕ ಸಾರಿ ಈ ಸದನದಲ್ಲಿ ಮಾನ್ಯ ಚೆನ್ನಬಸಪ್ಪನವರ ಬಗ್ಗೆ ನನ್ನ ಅನುಭವದಲ್ಲಿ ಹೇಳುವುದಾದರೆ ಈ ಸದನದಲ್ಲಿ ಅವರನ್ನು ಬಹಳ ಚತುರರು, ನಿಪುಣರು, ಬುದ್ಧಿವಂತರು ಹಾಗೂ ಅಗಾಧವಾದಂಥ ಅನುಭವ ಇರತಕ್ಕಂಥಾ ಇವರ ಕೈಯ್ಯಲ್ಲಿ ಈ ಲೋಕೋಪಯೋಗಿ ಇಲಾಖೆ ಒಳ್ಳೆಯ ಕೆಲಸ ಮಾಡುತ್ತದೆ ಎನ್ನುವ ಮಾತನ್ನು ಈ ಸಭೆಯಲ್ಲಿ ವ್ಯಕ್ತಪಡಿಸಿದ್ದೇವೆ. ಅದೇ ಸಂದರ್ಭದಲ್ಲಿ ನಾವು ಕೆಲವು ಪ್ರಮುಖವಾದ ಘಟನೆಗಳನ್ನೂ ಕೂಡ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಇಂತಹ ವಿಷಯಗಳಲ್ಲಿ ಮಾನ್ಯ ಸಚಿವರು ಕಾನೂನಿನ ಚೌಕಟ್ಟಿನಲ್ಲೇ ತೀವ್ರವಾದಂಥಾ, ಸರಿಯಾದಂಥಾ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಅವರು ವಿಫಲ ಹೊಂದಿದ್ದಾರೆ ಅನ್ನುವ ಅಪವಾದನೆಯನ್ನೂ ಕೂಡ ಮಾಡಿದ್ದೇವೆ. ನಿಮ್ಮನ್ನು ಅಭಿನಂದಿಸುವುದಕ್ಕೆ ಕಾರಣಗಳು ಇವೆ. ಅದು ಯಾವುದೆಂದರೆ ತಾವು ಈ ಬಗ್ಗೆ ಏನು ಒಂದು ಪಾಲಿಸಿ ಡಿಸಿಷನ್ ತೆಗೆದುಕೊಂಡಿದ್ದೀರಿ ಅದು ಬಹಳ ಒಳ್ಳೆಯ ತೀರ್ಮಾನಗಳೇ. ಉದಾಹರಣೆ ಹೇಳುವುದಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆ ಸಂಪರ್ಕಗಳನ್ನು ಕಲ್ಪಿಸಿಕೊಡತಕ್ಕಂಥಾದ್ದು ಏನು ಇವೆ ಅದರ ಬಗ್ಗೆ ಹಣವನ್ನು ಜಾಸ್ತಿ ಮಾಡಿದ್ದೀರಾ, ಜಾಸ್ತಿ ವ್ಯಾಲಿಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಾ? ಬಹಳ ಸಂತೋಷ ಈ ಕಾರಣದ ಆಧಾರದ ಮೇಲೆ ಅಧಕ್ಷರ ಮೂಲಕ ತಮಗೆ ವಂದನೆಯನ್ನರ್ಪಿಸುತ್ತೇನೆ. ಮತ್ತು ಇನ್ನೊಂದು ಉದಾಹರಣೆ ಹೇಳುವುದಾದರೆ ೧೯೭೧-೭೨ನೇ ಇಸವಿಯಲ್ಲಿ ಯಾವುದಾದರೂ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಎಸ್ಟಿಮೇಟ್ ಆಗಿದ್ದು ಅದು ಪುನ; ರಿವೈಸ್ಡ್ ಆದರೆ, ಅದಕ್ಕೆ ಹಣ ಜಾಸ್ತಿ ಬೇಕಾಗಿತ್ತು. ಇಂಥಾದ್ದು ಮಂಜೂರಾತಿ ಆಗಬೇಕಾಗಿದ್ದರೆ ಯಾವಾಗಲೂ ಅದು ಸರ್ಕಾರಕ್ಕೆ ಬರಬೇಕಾಗಿತ್ತು. ಈಗ ಅದರ ಬಗ್ಗೆ ಸಾಂಕ್ಷನ್ ಮಾಡುವ ಅಧಿಕಾರವನ್ನು ಚೀಫ್ ಇಂಜನೀಯರ್‌ಗೆ ಕೊಟ್ಟಿದ್ದೀರಿ. ಉದಾಹರಣೆಗೆ ಸಿ ಅಂಡ್ ಬಿ ಚೀಫ್ ಇಂಜನೀಯರ್‌ಗೆ ಈ ಒಂದು ಅಧಿಕಾರ ಕೊಟ್ಟಿದ್ದೀರಿ. ಈ ಬಗ್ಗೆ ತಾವು ಏನು ಒಂದು ನೀತಿ ಇಟ್ಟುಕೊಂಡು ತೀರ್ಮಾನ ತೆಗೆದುಕೊಂಡಿದ್ದೀರಿ. ತ್ವರಿತವಾಗಿ ಕೆಲಸಗಳನ್ನು ಮುಂದುವರೆಸುವುದಕ್ಕೆ ಈ ಒಂದು ತೀರ್ಮಾನ ತೆಗೆದುಕೊಂಡಿರುವುದು ಬಹಳ ಸಂತೋಷ.

ಇನ್ನೂ ಬ್ರಿಡ್ಜಸ್ ಕಾರ್ಪೊರೇಷನ್ ಬಗ್ಗೆ ಹೇಳುವುದಾದರೆ ರೋಡ್ಸ್ ಅಂಡ್ ಬ್ರಿಡ್ಜಸ್‌ಗೆ ಒಂದು ಫಂಡನ್ನು ಕ್ರಿಯೇಟ್ ಮಾಡಿದ್ದೀರಿ. ಅದಕ್ಕೆ ಯಾವರೀತಿ ತೆರಿಗೆ ಹಾಕಬೇಕು ಎನ್ನುವುದನ್ನು ಯೋಚನೆ ಮಾಡುತ್ತಿದ್ದೀರಿ. ಅದಕ್ಕೆ ತೆರಿಗೆ ಹಾಕಿ ಹಣ ಬಂದರೂ ಕೂಡ ನೀವು ಅಷ್ಟು ಬ್ರಿಡ್ಜಸ್‌ಗಳನ್ನೂ ತೆಗೆದುಕೊಳ್ಳುತ್ತೀರಿ ಅಂತ ಹೇಳುವುದಕ್ಕಾಗುವುದಿಲ್ಲ. ಕೆಲವೊಂದು ಮಾತ್ರ ಮಾಡುತ್ತೀರಿ. ಈ ಬ್ರಿಡ್ ಕಾರ್ಪೊರೇಷನ್ ಮಾಡಿದ ಕೂಡಲೇ ಅಷ್ಟು ಬ್ರಿಡ್ಜಸ್‌ಗಳನ್ನು ತೆಗೆದುಕೊಂಡು ಕೆಲಸ ಮಾಡುತ್ತಾರೆ ಅನ್ನುವ ಅರ್ಥವಲ್ಲ. ಮಾನ್ಯ ಚೆನ್ನಬಸಪ್ಪನವರು ಈ ಬ್ರಿಡ್ಜ್ ಕಾರ್ಪೊರೇಷನ್ ಮಾಡಿದ ತತಕ್ಷಣವೇ ಎಲ್ಲಾ ಬ್ರಿಡ್ಜ್‌ಸ್‌ಗಳನ್ನೂ ಕಟ್ಟುತ್ತೇವೆ ಎಂದು ಅವರು ಭಾವನೆ ಮಾಡುವುದಾದರೆ ದಯಾಮಾಡಿ ಆ ಭಾವನೆ ಮಾಡುವುದು ಬೇಡ. ಏತಕ್ಕೆಂದರೆ ಸರ್ಕಾರಕ್ಕೆ ಸೇರಿರತಕ್ಕಂಥಾ ಈ ಇಲಾಖೆಗಳು ಈ ಜವಾಬ್ದಾರಿಯನ್ನು ಹೊತ್ತಿರತಕ್ಕಂಥಾ ಸಂದರ್ಭದಲ್ಲಿ ಈ ಕೆಲಸವನ್ನು ಮಾಡುವ ಶಕ್ತಿ ಇದ್ದೇ ಇದೆ. ಎಷ್ಟೋ ಸಾರಿ ಅವರು ಈ ಸದನದಲ್ಲಿ ಕಾಲ ಮಿತಿ ಉಳ್ಳಂಥ ಕೆಲವು ಕಾರ್ಯಕ್ರಮಗಳನ್ನು ಮಾಡುತ್ತೇವೆ ಅಂತ ಭರವಸೆಯನ್ನು ಕೊಟ್ಟು ಅದರಲ್ಲಿ ವಿಫಲರಾಗಿರತಕ್ಕಂಥಾ ನಿದರ್ಶನಗಳು ಬೇಕಾದಷ್ಟು ಇವೆ. ಈಗ ಬರೀ

ಬ್ರಿಡ್ಜಸ್ ಕಟ್ಟುತ್ತೇವೆ ಎಂದು ಒಂದು ಕಾರ್ಪೊರೇಷನ್ ಮಾಡುವುದಾದರೆ ಈ ಒಂದು ಕಾರ್ಪೊರೇಷನ್ ಆದ ಕೂಡಲೇ ಎಲ್ಲಾ ಬ್ರಿಡ್ಜಸ್‌ಗಳನ್ನೂ ಕಟ್ಟುತ್ತೇವೆ ಎಂದು ಹೇಳುವುದಾದರೆ ಅವರು ಹೇಳತಕ್ಕಂಥಾ ರೀತಿಯಲ್ಲಿ ಕಾಲ ಮಿತಿ ಉಳ್ಳಂಥಾ ಕಾರ್ಯಕ್ರಮ ಅಂತ ಏನು ಒಂದು ಮಾತನಾಡುತ್ತಾರೆ ಆ ಪ್ರಕಾರ ಕಟ್ಟುವುದಾದರೆ ಬಹಳ ಸಂತೋಷ ಇನ್ನೊಂದು ಕಡೆ ಹೇಳುವುದಾದರೆ ಇದು ಹೇಗೆ ಆಗುತ್ತದೆ ಅನ್ನುವುದರಲ್ಲಿ ಅಪನಂಬಿಕೆ ಬರುತ್ತದೆ. ಹಲವಾರು ವರ್ಷಗಳ ಅನುಭವದಿಂದ ಇದು ಆಗುತ್ತದೆಯೋ ಅನ್ನುವುದರಲ್ಲಿ ಅಪನಂಬಿಕೆ ಬರುತ್ತದೆ ಆದುದರಿಂದ ಮಾನ್ಯ ಅಧ್ಯಕ್ಷರೇ, ಇಂತಹ ಒಂದು ಕಾರ್ಪೊರೇಷನ್ ಮಾಡಿದ ಮಾತ್ರಕ್ಕೇನೇ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿನ ಸಂಪರ್ಕ ಸಾಧನೆಗೋಸ್ಕರ ರಸ್ತೆಗಳನ್ನು ಮಾಡತಕ್ಕಂಥಾ ಕೆಲಸವೇ ಆಗಲಿ ಮಾಡುತ್ತೇವೆ ಅಂತ ಹೇಳಿದರೆ ಅದು ಸಾಧನೆಯಾಗುವುದಿಲ್ಲ. ಮುಖ್ಯವಾಗಿ ತಾವು ಈ ಬಗ್ಗೆ ಏನು ಒಂದು ಪಾಲಿಸಿ ಡಿಸಿಷನ್ ತೆಗೆದುಕೊಂಡಿದ್ದೀರೋ ಅದು ಮತ್ತು ಈ ವರದಿಯಲ್ಲಿ ಹೇಳಿರುವುದನ್ನೂ ನಾನು ಸ್ವಾಗತ ಮಾಡುತ್ತೇನೆ. ಆದರೆ ಕಾಲ ಮಿತಿ ಉಳ್ಳಂಥಾ ಕಾರ್ಯಕ್ರಮ ಅಂತ ಏನು ಹೇಳುತ್ತೀರೋ ಆ ಬಗ್ಗೆ ಹೇಳುವುದಾದರೆ ಉದಾಹರಣೆಗೆ ಈವೊತ್ತು ೧೦ ಕೋಟಿ ರೂಪಾಯಿ ಹಣದಲ್ಲಿ ೧೦ ಕೆಲಸಗಳನ್ನು ಆಗಬೇಕು ಅಂತ ಇದ್ದರೆ ಅದಕ್ಕೆ ಕಾಲ ಒಂದು ವರ್ಷ, ಅಥವಾ ಎರಡು ವರ್ಷ ಅಥವಾ ಮೂರು ವರ್ಷ ಅಂತ ನಿಗದಿ ಮಾಡಿದ್ದರೆ ಆ ಕಾಲದಲ್ಲೇ ಆ ಕೆಲಸ ಮುಗಿದು ಹೋಗಬೇಕು. ಕೆಲವು ಸಾರಿ ಹಣ ಖರ್ಚಾಗುತ್ತದೆ, ಆದರೆ ಕೆಲಸವೇ ಮುಗಿದಿರುವುದಿಲ್ಲ. ತಾವು ಇದಕ್ಕೆ ಎಷ್ಟೋ ಸಂದರ್ಭದಲ್ಲಿ ಉತ್ತರ ಕೊಟ್ಟಿದ್ದೀರಿ. ತಮಗೆ ಗೊತ್ತಿರುವ ಹಾಗೆ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಹಲವಾರು ವಿಷಯಗಳ ಬಗ್ಗೆ ಇಂಥಾ ಹಗರಣ ನಡೆದಿದೆ. ಒಂದು ಎಸ್ಟಿಮೇಟ್ ತಯಾರು ಮಾಡಿ, ಆ ಬಗೆ ಕೆಲಸ ತೆಗೆದುಕೊಳ್ಳುವುದಕ್ಕೆ ತಡವಾದರೆ ಸರ್ಕಾರದ ಮೇಲೆ ಒಂದು ಹೆಚ್ಚಿನ ಹೊರೆ ಬೀಳುತ್ತದೆ, ಈ ವಿಷಯದಲ್ಲಿ ಎಷ್ಟೋ ಸಾರಿ ಈ ಸದನದಲ್ಲಿ ಚರ್ಚೆ ಮಾಡಲಿಲ್ಲವೇ? ಇಂಥಾ ಕೆಲಸಗಳಿಗೆ ಹೆಚ್ಚಿನ ಹಣ ಕಂಟ್ರಾಕ್ಟರಿಗೆ ಕೊಟ್ಟಿರುವುದು ನೋಡಿಲ್ಲವೇ? ಈ ದೃಷ್ಟಿಯಿಂದ ಹೇಳುವುದಾದರೆ ತಮ್ಮ ವಾರ್ಷಿಕ ವರದಿಯಲ್ಲಿ ಇಂತಹ ಒಂದು ನೀತಿ ಪ್ರಶ್ನೆಯನ್ನು ಏನು ತೀರ್ಮಾನ ಮಾಡಿದ್ದೀರಿ ಅವರ ಬಗ್ಗೆ ಹೇಳುವುದಾದರೆ ಅದರ ಜೊತೆಯಲ್ಲೇ ಒಂದು ಕಾಲ ಮಿತಿ ಉಳ್ಳತಕ್ಕಂಥಾ ಕಾರ್ಯಕ್ರಮವನ್ನೂ ಕೂಡ ತೋರಿಸಬೇಕಾಗಿತ್ತು. ಹಾಗೆಯೇ ನಿಮ್ಮ ಶಕ್ತಿ ಮತ್ತು ನಿಮ್ಮ ಹೊಣೆಗಾರಿಕೆ ಹಾಗೂ ನಿಮ್ಮ ಒಂದು ಜವಾಬ್ದಾರಿ ಏನಿದೆ ಎಂದು ಅದರಲ್ಲಿ ತೋರಿಸಿದ್ದರೆ ಶ್ರೀಮಾನ್ ಚೆನ್ನಬಸಪ್ಪನವರಿಗೆ ಶಹಭಾಸ್‌ಗಿರಿ ಕೊಡುತ್ತಿದ್ದೆವು ಮತ್ತು ದೇಶದ ಜನತೆ ನಿಮ್ಮ ಕೆಲಸಕಾರ್ಯಗಳನ್ನು ಮೆಚ್ಚಿಕೊಳ್ಳುತ್ತಾರೆ. ಮಾನ್ಯ ಅಧ್ಯಕ್ಷರೇ, ಉದಾಹರಣೆ ಹೇಳುವುದಾದರೆ ನಿಮ್ಮ ಒಂದು ಲೆಕ್ಕಾಚಾರದ ಪ್ರಕಾರ ಸುಮಾರು ೬೦ ಸಾವಿರ ಕಿಲೋ ಮೀಟರ್ ಅಷ್ಟು ರಸ್ತೆಗಳನು ಪಬ್ಲಿಕ್ ವರ್ಕ್ಸ್ ಡಿಪಾರ್ಟಮೆಂಟಿನವರು ತೆಗೆದುಕೊಂಡಿದ್ದಾರೆ. ಬರಬರುತ್ತಾ ಈ ರಸ್ತೆಗಳು ಇನ್ನೂ ಜಾಸ್ತಿಯಾಗುತ್ತದೆ ಎತಕ್ಕೆಂದರೆ ತಾಲ್ಲೂಕು ಬೋರ್ಡ್‌ಗೆ ಸೇರಿರುವ ರಸ್ತೆಗಳನ್ನು ಮಾಡಿಸಬೇಕಾದರೆ ಅವರ ಹತ್ತಿರ ಹಣ ಇಲ್ಲ, ಹಾಗೆಯೇ ಪಂಚಾಯಿತಿಗೆ ಸೇರಿರುವ ರಸ್ತೆಗಳನ್ನು ಮಾಡಿಸಬೇಕಾದರೆ ಅವರ ಹತ್ತಿರವೂ ಹಣ ಇಲ್ಲ, ಆ ರಸ್ತೆಗಳೆಲ್ಲಾ ಬರಬರುತ್ತಾ ಪಿಡಬ್ಲ್ಯುಡಿ ಇಲಾಖೆಗೆ ಸೇರುತ್ತದೆ. ಇದರಿಂದ ಈ ಇಲಾಖೆಗೆ ಹೆಚ್ಚು ರಸ್ತೆಗಳು ಸೇರುವಂತಾಗುತ್ತದೆ. ರೂರಲ್ ಕಮ್ಯೂನಿಕೇಷನ್ ರೋಡ್ಸ್‌ನಲ್ಲಿ ತಾಲ್ಲೂಕು ಬೋರ್ಡ್ ರಸ್ತೆಗಳಿಗೆ ತಾವು ಹಿಂದೆ ಏನು ಕೆಲಸಗಳನ್ನು ಮಾಡಿಸಿದಿರಿ ಎಂದರೆ ಕಾಲುವೆಗಳನ್ನು ಹೊಡೆದು, ಮಣ್ಣು ಕೆಲಸಗಳನು ಮಾಡಿಸಿ ಜೆಲ್ಲಿ ಹಾಕುತ್ತೇವೆ ಅಂತ ಜೆಲ್ಲಿಯನ್ನೂ ಸಹ ಹೊಡಿಸಿಬಿಟ್ಟಿರಿ. ಕೊನೆಗೂ ಆ ಕೆಲಸಗಳು ಪೂರ್ತಿ ಆಗಲಿಲ್ಲ, ಎಂ.ಎಲ್.ಎ. ಮೀಟಿಂಗ್ ಕರೆದರೂ ಕೂಡ ಆ ಕೆಲಸಗಳು ಪೂರ್ತಿಯಾಗಲಿಲ್ಲ. ಆ ಬಗ್ಗೆ ಎಷ್ಟೋ ಸಾರಿ ಈ ಸದನದಲ್ಲಿ ಚರ್ಚೆಯಾಗಿದೆ. ಹೀಗಿರುವಾಗ ಈ ಸಾರಿ ಇದಕ್ಕೆ ಒಂದು ದೊಡ್ಡ ರೂಪು ಕೊಟ್ಟು ಈ ಕೆಲಸವನ್ನು ಮಾಡುತ್ತೇವೆ ಅಂತ ಈ ಬಡ್ಜೆಟ್‌ನಲ್ಲಿ ಹೆಚ್ಚು ಹಣ ತೋರಿಸಿ ತಮ್ಮ ಮೆಚ್ಚುಗೆಯನ್ನು ತೋರಿಸಿದ್ದೀರಿ ಬಹಳ ಸಂತೋಷ, ಆದುದರಿಂದ ಈಗಲಾದರೂ ಕೂಡ ಈ ಹಣವನ್ನು ಸರಿಯಾದ ರೀತಿಯಲ್ಲಿ ಸದ್ವಿನಿಯೋಗ ಮಾಡಬೇಕು ಎಂದು ಹೇಳುತ್ತೇನೆ. ಏತಕ್ಕೆಂದರೆ ತಮ್ಮ ಇಲಾಖೆ ಬಗ್ಗೆ ವಿಪರೀತ ಆರೋಪಗಳು ಇದ್ದಾವೆ. ಮಾನ್ಯ ಅಧ್ಯಕ್ಷರೇ, ಇದರಲ್ಲಿ ಏನಾದರೂ ಹಿಂದೆ ಮಾಡಿದ ಹಾಗೆ ಮಾಡಿದರೆ ಒಂದು ದೊಡ್ಡ ಹಗರಣ ನಡೆಯುತ್ತದೆ. ನೀವು ಮಾರ್ಚಿ ತಿಂಗಳಿನಲ್ಲಿ ಇದಕ್ಕೆ ಎಷ್ಟು ಹಣ ಬೇಕೋ ಅಂದರೆ ೨ ಲಕ್ಷವೋ ೩ ಲಕ್ಷವೋ ೬ ಲಕ್ಷವೋ, ೧೦ ಲಕ್ಷವೋ ಹಣವನ್ನು ತೆಗೆದುಕೊಂಡು ಈ ಡಿಮ್ಯಾಂಡ್‌ನ್ನು ಪಾಸ್ ಮಾಡಿಸಿಕೊಂಡು ಆ ಕೆಲಸಗಳನ್ನು ಮಾರ್ಚಿ ೩೦ನೇ ತಾರೀಖು ಒಳಗೇನೇ ಮುಗಿಸಬೇಕು ಎಂದರೆ ಇದು ಅಭಾಸದ ಪ್ರಶ್ನೆಯಾಯಿತು. ಆದಕ್ಕೆ ನಾನು ಹೇಳುವುದು ಈ ಇಲಾಖೆ ನಡೆಸತಕ್ಕಂಥಾ ಜವಾಬ್ದಾರಿ ಜನ ಹೇಳತಕ್ಕಂಥಾ ಮಾತೇ ಇದು, ಮಾನ್ಯ ಸಚಿವರಿಗೆ ಕೇಳಿದರೆ ಎಷ್ಟು ಹಣ ಬೇಕೋ ಅಷ್ಟು ಕೊಡುತ್ತೇವೆ

ಎಂದು ಹೇಳುತ್ತಾರೆ. ಅಸಿಸ್ಟೆಂಟ್ ಇಂಜನೀಯರ್ ಅವರನ್ನು ಕೇಳಿದರೆ ನಮಗೆ ಜೆಲ್ಲಿ ಸಿಕ್ಕುವುದಿಲ್ಲ, ವೆಹಿಕಲ್ಸ್ ಕೂಡ ಸಿಕ್ಕುವುದಿಲ್ಲ. ಕಂಟ್ರಾಕ್ಟರ್ಸ್ ನೋಡಿದರೆ ಅಂತಹ ಶಕ್ತಿಯುತವಾದ ಕಂಟ್ರಾಕ್ಟರ್ಸ್ ಸಿಕ್ಕುವುದಿಲ್ಲ ಎಂದು ಹೇಳುತ್ತಾರೆ. ಅವರ ಹತ್ತಿರ ಡಿಪಾರ್ಟ್‌ಮೆಂಟ್ ವೆಹಿಕಲ್ಸ್ ಕೂಡ ಇರುವುದಿಲ್ಲ. ಈಗ ನಿಮ್ಮ ಇಲಾಖೆಗೆ ಜಾಸ್ತಿ ಹಣ ಕೊಡುತ್ತಿದ್ದೇವೆ. ಈ ಸಾಲಿನಲ್ಲಾದರೂ ಹೆಚ್ಚು ಕೆಲಸಗಳು ಆಗುವುದಕ್ಕೆ ಪ್ರಯತ್ನ ಮಾಡಿ. ಅದಕ್ಕಾಗಿ ನಾನು ೨-೩ ಪ್ರಮುಖವಾದ ಸಲಹೆಗಳನ್ನು ಕೊಡುತ್ತೇನೆ. ಈ ಸಲಹೆಗಳನ್ನು ತಾವು ಒಪ್ಪದೇ ಹೋದರೆ ಅದಕ್ಕಾಗಿ ಬೇಕಾದಂಥಾ ಸಲಕರಣೆಗಳನ್ನು ನೀವು ತಯಾರು ಮಾಡದೇ ಹೋದರೆ, ನಿಮ್ಮ ಕೆಲಸಕಾರ್ಯಗಳು ಸ್ಥಗಿತವಾಗುತ್ತದೆ ಎಂದು ಹೇಳುತ್ತೇನೆ ಈ ಬಗ್ಗೆ ನನ್ನ ಮೊದಲನೇ ಸಲಹೆ ಏನೆಂದರೆ ಜೆಲ್ಲಿ ಹೊಡೆಯುವಂಥಾ ಕೇಂದ್ರದ ಯೂನಿಟ್ ಒಂದನ್ನು ಜಾಸ್ತಿ ಮಾಡಬೇಕು ಎಂದು ಹೇಳುತ್ತೇನೆ. ಉದಾಹರಣೆಗೆ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನಲ್ಲಿ ಚಂದ್ರಗುತ್ತಿಯಲ್ಲಿ ಒಂದು ದೊಡ್ಡ ಸ್ಟೋನ್ ಕ್ವಾರಿ ಇದೆ. ಅಲ್ಲಿಗೆ ಒಂದು ಮೆಷಿನರಿ ಹಾಕಿ.

10-00 A. M.

ತಮ್ಮ ಇಲಾಖೆಯವರೇ ಈ ಸ್ಥಳವನ್ನು ಸರ್ಟಿಫೈ ಮಾಡಿ ಇಟ್ಟುಕೊಂಡಿದ್ದಾರೆ. ಅಂತಹ ಕಡೆಯಲ್ಲಿ ಜೆಲ್ಲಿ ತಯಾರು ಮಾಡತಕ್ಕಂಥ ಮಿಷಿನರಿಗಳನ್ನು ಹಾಕಬೇಕು; ಮತ್ತು ಕರ್ನಾಟಕ ರಾಜ್ಯದ ಬೇರೆಬೇರೆ ಕಡೆಗಳಲ್ಲಿಯೂ ಸಹ ಇಂತಹ ಕೇಂದ್ರಗಳಿವೆ; ಅಲ್ಲಿಯೂ ಕೂಡ ಜೆಲ್ಲಿ ತಯಾರು ಮಾಡತಕ್ಕಂಥ ಯಂತ್ರಗಳನ್ನು ಸ್ಥಾಪನೆ ಮಾಡಬೇಕು. ಜೊತೆಗೆ ಅದನ್ನು ಸಾಗಿಸಲು ವಾಹನಗಳನ್ನು ತಮ್ಮ ಇಲಾಖೆಯವರು ಇಟ್ಟುಕೊಳ್ಳಬೇಕು; ಈ ಕೆಲಸಗಳಿಗೆಲ್ಲಾ ತಾವು ಕಂಟ್ರಾಕ್ಟರ್‌ಗಳನ್ನು ನಂಬಿಕೊಂಡರೆ ಕೆಲಸ ಜಾಗ್ರತೆಯಾಗುವುದಿಲ್ಲ. ತಾವು ಹಳೆಯ ಪದ್ಧತಿಯನ್ನು ಬಿಟ್ಟು ಹೊಸ ಪದ್ಧತಿಯನ್ನು ಜಾರಿಗೆ ತರದಿದ್ದರೆ, ಈಗ ತಾವು ಹಾಕಿಕೊಂಡಿರುವ ಯೋಜನೆಗಳೆಲ್ಲಾ ವಿಫಲವಾಗುತ್ತವೆಯೇ ಹೊರತು ಸಫಲತೆಯನ್ನು ಹೊಂದುವುದಿಲ್ಲ ಮತ್ತು ಮಾನ್ಯ ಚೆನ್ನಬಸಪ್ಪನವರಿಗೂ ಸಹ ಕೆಟ್ಟ ಹೆಸರು ಬರುತ್ತದೆ. ನಮ್ಮ ದೇಶದಲ್ಲಿ ಕಂಟ್ರಾಕ್ಟರ್‌ಗಳು ಬೇಕಾದಷ್ಟು ಮಂದಿ ಇದ್ದಾರೆ; ಆದರೆ ಅವರೇನಿದ್ದರೂ ಮಣ್ಣಿನ ಕೆಲಸ ಮಾಡಲು, ಕೆರೆಯ ಕೆಲಸ ಮಾಡಲು ಮುಂದೆ ಬರುತ್ತಾರೆಯೇ ಹೊರತು ರೋಡಿಗೆ ಟಾರ್ ಹಾಕುವಂತಹ ಕೆಲಸವನ್ನು ಮಾಡಲು ಮುಂದೆ ಬರುವುದಿಲ್ಲ: ಏಕೆಂದರೆ ಅವರ ಹತ್ತಿರ ಸಾಕಷ್ಟು ಮಿಷಿನರಿಗಳಿರುವುದಿಲ್ಲ; ಆದಕಾರಣ ಅವರು ಮಣ್ಣಿನ ಕೆಲಸ ಮಾಡಲು ಮುಂದೆ ಬರುತ್ತಾರೆ; ಇರತಕ್ಕಂಥ ಮಣ್ಣಿನ ಮೇಲೆ ಸ್ವಲ್ಪ ಹೊಸ ಮಣ್ಣನ್ನು ಹಾಕಿ ಪ್ಲಾಸ್ಟಿಕ್ ಸರ್ಜರಿ ತರಹ ಕೆಲಸ ಮಾಡುವುದರಲ್ಲ ಅವರು ಬಹಳ ಬುದ್ಧಿವಂತರು. ಇಂತವರನ್ನೆಲ್ಲಾ ಇಷ್ಟರವರೆಗೆ ಮಾನ್ಯ ಚೆನ್ನಬಸಪ್ಪನವರು ಮಟ್ಟ ಹಾಕಬೇಕಾಗಿತ್ತು; ಆದರೆ ಆ ಕೆಲಸ ತಾವು ಇನ್ನೂ ಮಾಡಿಲ್ಲ. ತಾವು ಅದನ್ನು ಮಾಡದಿದ್ದರೆ ತಮಗಿರತಕ್ಕಂಥ ಒಂದು ದೊಡ್ಡ ಹೆಸರು ಕೆಡುತ್ತದೆಂದು ಹೇಳುತ್ತೇನೆ. ಒಂದು ರೀತಿಯಲ್ಲಿ ನೋಡುವುದಾದರೆ, ನಾವೆಲ್ಲಾ ತಮ್ಮನ್ನು ದೊಡ್ಡವರು, ಅನುಭವವಿರುವವರು ಎಂದು ಹೊಗಳಿಕೊಂಡು ಬಂದು, ನಾವೇ ನಿಮ್ಮನ್ನು ಈ ಒಂದು ಮಟ್ಟಕ್ಕೆ ತಂದಿದ್ದೇವೆಂದು ಹೇಳಬೇಕಾಗುತ್ತದೆ. ಇನ್ನು ಮುಂದಾದರೂ ಸಹ ಬ್ಲಾಕ್ ಟಾಪಿಂಗ್ ವಿಷಯದಲ್ಲಿಯೇ ಆಗಲೀ, ಮೇಜರ್ ವರ್ಕ್ಸ್ ವಿಷಯದಲ್ಲಿಯೇ ಆಗಲೀ, ಇಲಾಖೆಯವರೇ ಆ ಕೆಲಸಗಳನ್ನು ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಮತ್ತು ಈ ಬಗ್ಗೆ ಒಂದು ಹೊಸ ವ್ಯವಸ್ಥೆಯನ್ನು ರೂಪಿಸಬೇಕೆಂದು ಹೇಳುತ್ತೇನೆ.

ಇನ್ನು ಬ್ರಿಡ್ಜಸ್ ಬಗ್ಗೆ ಹೇಳುವುದಾದರೆ, ಇವುಗಳನ್ನು ಕಟ್ಟುವ ಕೆಲಸವನ್ನು ಕರ್ನಾಟಕ ಸ್ಟೇಟ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ವಹಿಸಿದ್ದೀರಿ. ಇದು ಒಂದು ಸರ್ಕಾರೀ ಸಂಸ್ಥೆಯಾದ ಕಾರಣ ಈ ಕೆಲಸ ಚೆನ್ನಾಗಿ ಆಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಈ ಕಾರ್ಪೊರೇಷನ್ ಅವರೇ ಸೇತುವೆಗಳ ಕೆಲಸ ಮಾಡುವುದರಿಂದ ಇನ್ನು ಮುಂದೆ ಟೆಂಡರ್ ಬೇಸಿಸ್ ಮೇಲೆ ಕೆಲಸ ಮಾಡುವ ಪ್ರಶ್ನೆ ಬರುವುದೇ ಇಲ್ಲ: ಸರ್ಕಾರದವರು ಅವರಿಗೆ ಈ ಕೆಲಸ ಮಾಡಲು ಸಾಕಷ್ಟು ಅಡ್ವಾನ್ಸ್ ಕೊಟ್ಟರೆ ಅವರು ಕೆಲಸಗಳನ್ನು ಜಾಗ್ರತೆ ಮಾಗಿಸಲು ಅವಕಾಶವಾಗುತ್ತದೆ. ಈ ರೀತಿ ಕಾರ್ಪೊರೇಷನ್ ಮೂಲಕ ಕೆಲಸ ಮಾಡಿಸುವುದನ್ನು ನಾನು ಸಂತೋಷದಿಂದ ಸ್ವಾಗತ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಒಟ್ಟು ಎಷ್ಟು ಸೇತುವೆಗಳು ಬೇಕಾಗಿದೆ ಎಂಬುದನ್ನು ಕಂಡುಹಿಡಿಯಲು ಸರ್ಕಾರದವರು ಒಂದು ಕಮಿಟಿಯನ್ನು ನೇಮಕ ಮಾಡಿದ್ದರ ಮೇರೆಗೆ ಅವರು ಆ ಬಗ್ಗೆ ಸರ್ವೆ ನಡೆಸಿ, ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯ ಪ್ರಕಾರ 5,100

ಸೇತುವೆಗಳಾಗಬೇಕಾಗಿದೆ; ಆದಕ್ಕಾಗಿ 55 ಕೋಟಿ ರೂ ಖರ್ಚಾಗಬಹುದೆಂದು ತಿಳಿಸಿದ್ದಾರೆ. ಇವುಗಳ ಪೈಕಿ 20 ಅಡಿಯಿಂದ ನೂರು ಅಡಿಗಳವರೆಗೆ ಕಟ್ಟಬೇಕಾಗುವ ಸೇತುವೆಗಳು 4 480 ಇದ್ದು, ಅವುಗಳನ್ನು ಕಟ್ಟಿ ಮುಗಿಸಲು 33 ಕೋಟಿ ರೂ. ಬೇಕಾಗುತ್ತದೆಂದು ಮತ್ತು ನೂರು ಅಡಿಗಳಿಗಿಂತ ಹೆಚ್ಚು ಉದ್ದದ 620 ಸೇತುವೆಗಳನ್ನು ಕಟ್ಟಬೇಕಾಗಿದ್ದು, ಅದಕ್ಕೆ 24 ಕೋಟಿ ರೂಪಾಯಿಗಳಷ್ಟು ವೆಚ್ಚ ತಗಲುತ್ತದೆಂದು ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಈ ಸಲದ ಬಡ್ಜೆಟ್‌ನಲ್ಲಿ ಕೆಲವು ಸೇತುವೆಗಳನ್ನು ಸೇರಿಸಿದ್ದೀರಿ; ಆ ರೀತಿ ಸೇರಿಸುವಾಗ ಪ್ರಾಮುಖ್ಯತೆಯ ಆಧಾರದ ಮೇಲೆ ಸೇರಿಸಿಲ್ಲವೆಂದು ಹೇಳಬಹುದು; ಈ ಮಾತನ್ನು ಹೇಳುವಾಗ ನಾನು ಎಲ್ಲ ಸೇತುವೆಗಳನ್ನು ಮಲೆನಾಡಿನಲ್ಲಿಯೇ ತೆಗೆದುಕೊಳ್ಳಿ ಎಂದು ಹೇಳುವುದಿಲ್ಲ; ಆದರೆ ಎಲ್ಲಿ ಅತಿ ಹೆಚ್ಚಿನ ಅವಶ್ಯಕತೆ ಇದೆಯೋ ಅಲ್ಲಿ ಮೊದಲು ತೆಗೆದುಕೊಳ್ಳಬೇಕೆಂದು ನಾನು ಹೇಳುವುದು. ಇದಕ್ಕೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಚಂದ್ರಗುತ್ತಿ ಮತ್ತು ಸಿದ್ದಾಪುರದ ನಡುವೆ ಕತಿವಾಯಿ ಎಂಬ ಒಂದು ಹಳ್ಳವಿದೆ. ಆ ಹಳ್ಳಕ್ಕೆ ಒಂದು ಸೇತುವೆಯನ್ನು ಕಟ್ಟಿಸಿದರೆ, ಅದು ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಅಂದರೆ ಶಿವಮೊಗ್ಗ ಜಿಲ್ಲೆಗೂ ಮತ್ತು ಕಾರವಾರ ಜಿಲ್ಲೆಗೂ ಸಂಪರ್ಕ ಕಲ್ಪಿಸುತ್ತದೆ; ಆದಕಾರಣ ಈ ಸೇತುವೆ ಕೆಲಸ ಆಗಬೇಕೆಂದು ನಾನು ತಮ್ಮನ್ನು ಸ್ವತಃ ಬಂದು ನೋಡಿ ಹೇಳಿದ್ದೇನೆ. ಆ ಸಮಯದಲ್ಲಿ ತಾವು ಚೀಫ್-ಇಂಜಿನಿಯರ್ ಅವರನ್ನು ಕರೆಸಿ, ಈ ಬ್ರಿಡ್ಜ್ ಕಾರ್ಪೊರೇಷನ್ ಆದಮೇಲೆ ಇದಕ್ಕೆ ಟಾಪ್-ಪ್ರಯಾರಿಟಿ ಕೊಟ್ಟು ತೆಗೆದುಕೊಳ್ಳಬೇಕೆಂದು ತಿಳಿಸಿದ್ದೀರಿ; ಆದರೂ ಸಹ ಈ ಸಲದ ಬಡ್ಜೆಟ್‌ನಲ್ಲಿ ಇದನ್ನು ಸೇರಿಸದಿರುವುದಕ್ಕೆ ಕಾರಣವೇನು? ನಮಗೆ ಸ್ವಾತಂತ್ರ್ಯ ಬಂದಾಗಿನಿಂದಲೂ ಸಹ ಆ ಭಾಗದ ಜನರು ಈ ಸೇತುವೆ ಕೆಲಸವಾಗಬೇಕೆಂದು ಕೇಳುತ್ತಿದ್ದಾರೆ. ಅಲ್ಲದೆ ಚಂದ್ರಗುತ್ತಿ ಒಂದು ದೊಡ್ಡ ಯಾತ್ರಾಸ್ಥಳವಾಗಿದ್ದು ಲಕ್ಷಾಂತರ ಜನರು ಅಲ್ಲಿಗೆ ಬಂದು ಸೇರುತ್ತಾರೆ; ಇಷ್ಟೆಲ್ಲಾ ಪ್ರಾಮುಖ್ಯತೆ ಇದ್ದರೂ ಸಹ ಅದನ್ನು ಬಡ್ಜೆಟ್‌ನಲ್ಲಿ ಸೇರಿಸದಿರಲು ಕಾರಣವೇನು? ಇದಕ್ಕಿಂತಲೂ ಪ್ರಾಮುಖ್ಯವಾಗಿ ಆಗಬೇಕಾದಂಥ ಸೇತುವೆಗಳಿದ್ದರೆ, ಅವುಗಳ ಕೆಲಸವನ್ನು ಮೊದಲು ತೆಗೆದು ಕೊಳ್ಳಿ; ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ; ಆದರೆ ಇದನ್ನು ಯಾವ ಕಾರಣದಿಂದ ಬಡ್ಜೆಟ್‌ನಲ್ಲಿ ಸೇರಿಸದೆ ಕೈಬಿಡಲಾಯಿತು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು; ಈಗ ಜನರು ಹೇಳುತ್ತಿರುವ ಕಡೆಯಲ್ಲಿ ಟೆಕ್ನಿಕಲ್ ಒಪೀನಿಯನ್ ಪ್ರಕಾರ ಅದನ್ನು ಕಟ್ಟಲು ಸಾಧ್ಯವಾಗದಿದ್ದರೆ, ಬೇರೆ ಕಡೆಯಲ್ಲಿ ಬೇಕಾದರೂ ಕಟ್ಟಿಸಿ; ಆದರೆ ಅದನ್ನು ಜಾಗ್ರತೆ ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದಕ್ಕೆ ಒಂದು ಲಕ್ಷ ರೂ. ಖರ್ಚಾಗಬಹುದು, ಅಥವಾ ಈಗಿನ ದರಗಳ ಪ್ರಕಾರ 2–3 ಲಕ್ಷ ರೂ. ಖರ್ಚಾಗಬಹುದು; ಇಂತಹ ಒಂದು ಪ್ರಾಮುಖ್ಯವಾದಂಥ ಕೆಲಸ ಮಾಡಿಸಿಕೊಡಿ ಎಂದು ನಾನು ತಮಗೆ ಎಷ್ಟು ಸಲ ಕಾಗದ ಬರೆಯಬೇಕು ಎಂಬುದು ನನಗೆ ಅರ್ಥವಾಗುತ್ತಿಲ್ಲ; ನನಗೆ ಪತ್ರ ಬರೆಯುವುದೊಂದೇ ಕೆಲಸವೆಂದು ತಾವು ಏನಾದರು ತಿಳಿದುಕೊಂಡಿದ್ದೀರೇನು? ಆ ಕೆಲಸದ ಬಗ್ಗೆ ನಾನು ತಮ್ಮ ಹತ್ತಿರ ಬಂದು ಇನ್‌ಫ್ಲೂಯೆನ್ಸ್ ಮಾಡಬೇಕೇ? ಆ ಭಾಗದ ಜನರೂ ಸಹ ತಮ್ಮನ್ನು ಬಂದು ಕಂಡಿದ್ದಾರೆ. ಮತ್ತು ಅದರ ಪ್ರಾಮುಖ್ಯತೆಯ ಬಗ್ಗೆ ತಮಗೆ ತಿಳಿಸಿದ್ದಾರೆ. ಈ ಕಾರಣದಿಂದ ಈ ಸಲದ ಬಡ್ಜೆಟ್‌ನಲ್ಲಿಯೇ ಅದನ್ನು ಸಹ ಸೇರಿಸಿ ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಮಲೆನಾಡು ಪ್ರದೇಶದಲ್ಲಿರತಕ್ಕಂಥ ಪಶ್ಚಿಮ ಕರಾವಳಿಯ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದವರು ಒಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಅದರಲ್ಲಿ ಮಲೆನಾಡು ಭಾಗದ ಅನೇಕ ತಾಲ್ಲೂಕ್‌ಗಳು ಸೇರಿವೆ. ಆ ಕಾರ್ಯಕ್ರಮಕ್ಕೆ ಕೇಂದ್ರದವರು ಹಣ ಕೊಡುವುದರ ಜೊತೆಗೆ ರಾಜ್ಯದವರೂ ಸಹ ಹಣ ಕೊಡುತ್ತಾರೆ; ಇದರ ಜೊತೆಗೆ ರೋಡ್ಸ್ ಅಂಡ್ ಬ್ರಿಡ್ಜಸ್ ಫಂಡ್‌ನ್ನು ಸಹ ಆ ಭಾಗಕ್ಕೆ ಹೆಚ್ಚು ಒದಗಿಸಿ ಸಣ್ಣ ಸಣ್ಣ ಸೇತುವೆಗಳನ್ನು ಕಟ್ಟಿಸಿಕೊಡಬೇಕೆಂದು ಹೇಳುತ್ತೇನೆ. ಮಲೆನಾಡು ಭಾಗದಲ್ಲಿ ಏರು, ತಗ್ಗು ಮತ್ತು ದಿಣ್ಣೆಗಳು ಜಾಸ್ತಿ; ಮಳೆಗಾಲದಲ್ಲಿ 7–8 ದಿವಸಗಳ ಕಾಲ ನೀರು ನಿಲ್ಲುವುದರಿಂದ ಪ್ರಯಾಣ ಮಾಡುವುದೇ ಕಷ್ಟವಾಗುತ್ತದೆ. ಆದಕಾರಣ 10, 2 ಅಥವಾ 25 ಸಾವಿರ ರೂಪಾಯಿಗಳ ವೆಚ್ಚದಲ್ಲಿ ಆಗತಕ್ಕಂಥ ಸಣ್ಣ ಸಣ್ಣ ಸೇತುವೆಗಳನ್ನು ಅಗತ್ಯವಿರುವ ಕಡೆಗಳಲ್ಲಿ ಕಟ್ಟಿಸಿದರೆ ಸಂಚಾರಕ್ಕೆ ಬಹಳ ಅನುಕೂಲ ವಾಗುತ್ತದೆಂದು ಹೇಳುತ್ತೇನೆ. ನನ್ನ ಹೋಬಳಿಗೆ ಸಂಬಂಧಪಟ್ಟಂತೆ ಐದಾರು ಸೇತುವೆ

ಗಳಾಗಬೇಕೆಂದು ಒಂದು ಲಿಸ್ಟ್‌ನ್ನು ಸಹ ಕೊಟ್ಟಿದ್ದೇನೆ. ಅವು ರೆಕಮೆಂಡ್ ಆಗಿ ಚೀಫ್ ಇಂಜಿನಿಯರ್ ಕಛೇರಿಯಲ್ಲಿರುವುದನ್ನು ನಾನು ನೋಡಿದ್ದೇನೆ. ಆದಕಾರಣ ಅವುಗಳನ್ನು ಜಾಗ್ರತೆ ಮಾಡಿಸಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಈ ಸಲ ಮಲೆನಾಡಿನ ಭಾಗಕ್ಕೆ 25 ಪರ್ಸೆಂಟ್ ವೇಟೇಜ್ ಕೊಟ್ಟಿದ್ದಾರೆ. ಇದು ಈ ಹಿಂದೆ ಯಾವಾಗಲೂ ಇರಲಿಲ್ಲ; ಈ ಸಲ ಕೊಟ್ಟಿದ್ದಾರೆ. ಈಗ ನಮ್ಮ ಮಲೆನಾಡಿನ ಭಾಗದಲ್ಲಿ ಒಂದು ರಸ್ತೆಯನ್ನು ಸಹ ಕಾಣದಂಥ ಹಳ್ಳಿಗಳಿವೆ; ಅಂತಹ ಗ್ರಾಮಗಳಿಗೆ ಮೊದಲು ಸಂಪರ್ಕ ವ್ಯವಸ್ಥೆ ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ಮತ್ತು ಸಂಚಾರಕ್ಕೆ ಅನುಕೂಲ ಕಲ್ಪಿಸಲು ಸಣ್ಣಪುಟ್ಟ ಸೇತುವೆಗಳನ್ನು ಕಟ್ಟಿಸಲು ಹೆಚ್ಚಿನ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ. ಈ ಕೆಲಸವನ್ನು ತಾವು ಪಂಚಾಯಿತಿಗಳಿಗೆ ಮತ್ತು ತಾಲ್ಲೂಕ್‌ಬೋರ್ಡಿನವರಿಗೇ ಬಿಟ್ಟರೆ, ಅದು ಜಾಗ್ರತೆ ಆಗುವುದಿಲ್ಲ; ಕೆಲವು ಪಂಚಾಯಿತಿಗಳಿಗೆ ದೀಪದ ಬಿಲ್‌ನ್ನು ಕಟ್ಟುವುದಕ್ಕೆ ಸಾಧ್ಯವಾಗದೆ, ತೊಂದರೆ ಪಡುತ್ತಿದ್ದಾರೆ. ಅಂತಹ ಕಡೆಗಳಲ್ಲಿ ದೀಪಗಳನ್ನು ಡಿಸ್‌ಕನೆಕ್ಟ್ ಮಾಡಿದ್ದಾರೆ. ಈ ಕಾರಣದಿಂದ ರಾಜ್ಯದಲ್ಲಿರತಕ್ಕಂಥ ಎಲ್ಲ ರಸ್ತೆಗಳ ಕೆಲಸವನ್ನು ಲೋಕೋಪಯೋಗಿ ಇಲಾಖೆಯವರೇ ವಹಿಸಿಕೊಳ್ಳಬೇಕೆಂದು ಹೇಳುತ್ತೇನೆ; ಅದು ಸಾಧ್ಯವಾಗದಿದ್ದರೆ ತಾಲ್ಲೂಕ್‌ಬೋರ್ಡಿನವರಿಗೆ ಮತ್ತು ಪಂಚಾಯಿತಿಯವರಿಗೆ ಹೆಚ್ಚಿನ ಫಂಡ್ಸ್‌ನ್ನು ಕೊಡಿ; ಆದರೆ ಈಗಿನ ಪರಿಸ್ಥಿತಿಯಲ್ಲಿ ಅವರಿಗೆ ಒಂದು ರಸ್ತೆಯ ಕೆಲಸವನ್ನು ಮಾಡಿಸುವುದಕ್ಕೂ ಸಾಧ್ಯವಾಗುತ್ತಿಲ್ಲ; ತಮಗೆ ಒಂದೇ ವರ್ಷದಲ್ಲಿ ಎಲ್ಲ ರಸ್ತೆಗಳನ್ನು ಮಾಡಿಸುವುದಕ್ಕೆ ಸಾಧ್ಯವಾಗದಿದ್ದರೂ ಸಹ ಹಂತಹಂತವಾಗಿಯಾದರೂ ಮಾಡಿ ಮುಗಿಸಬೇಕೆಂದು ಹೇಳುತ್ತೇನೆ. ಎಲ್ಲ ಕೆಲಸವೂ ಕೇಂದ್ರೀಕರಣವಾಗಬಾರದೆಂಬ ತತ್ವವನ್ನು ನಾನು ಒಪ್ಪಿಕೊಂಡರೂ ಸಹ, ಈ ಕೆಲಸವನ್ನು ಮಾಡಿಸಲು ಆ ಸ್ಥಳೀಯ ಸಂಸ್ಥೆಗಳಿಗೆ ಸಾಧ್ಯವಾಗುತ್ತಿಲ್ಲ; ಆದಕಾರಣ ಮಾನ್ಯ ಮಂತ್ರಿಗಳು ಇದರ ಕಡೆಗೆ ಹೆಚ್ಚಿನ ಗಮನ ಕೊಡಬೇಕು ಮತ್ತು ನಾನು ಹೇಳಿದಂಥ ನೀತಿಯನ್ನು ಒಪ್ಪಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಈ ಲೋಕೋಪಯೋಗಿ ಇಲಾಖೆಯಲ್ಲಿ ಪ್ರಾಮುಖ್ಯವಾದಂಥ ಕೆಲವು ವಿಷಯಗಳು ಇವೆ. ರಾಜ್ಯದಲ್ಲಿ ಈ ಇಲಾಖೆಯಲ್ಲಿ ಬಹಳಷ್ಟು ಜನರು ಕೆಲಸಮಾಡುತ್ತಿದ್ದಾರೆ, ಸಾವಿರಾರು ಅಧಿಕಾರಿಗಳು ಇದ್ದಾರೆ. ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಬಹು ದೊಡ್ಡ ಇಲಾಖೆಯೆಂದರೆ ಪೋಲೀಸ್ ಮತ್ತು ಪಿ. ಡಬ್ಲ್ಯೂ. ಡಿ. ಇಲಾಖೆಗಳು. ಅಂದರೆ ಸಿಬ್ಬಂದಿ ದೃಷ್ಟಿಯಿಂದ ಇಲ್ಲ ಹಣ ಜಾಸ್ತಿ ಪಡೆದಿದೆಯೆಂದಲ್ಲ ಆ ರೀತಿ ನೋಡುವುದಾದರೆ ಎಜುಕೇಷನ್ ಡಿಪಾರ್ಟ್‌ಮೆಂಟಿಗೆ 100 ರಿಂದ 150 ಕೋಟಿ ರೂಪಾಯಿ ಕೊಟ್ಟಿದ್ದೇವೆ. ಈ ತುರ್ತುಪರಿಸ್ಥಿತಿ ಬಂದಮೇಲೆ ರೂಲ್ 285ನ್ನು ಅಪ್ಲೈಮಾಡಿದ್ದೀರಿ, ಕಂಪಲ್ಸರಿ ರಿಟೈರ್‌ಮೆಂಟ್ ಮಾಡುವ ಸರ್ಕಾರದ ಒಂದು ಯೋಜನೆ ಇದೆ. ಸ್ವಾಮಿ ತಮ್ಮ ಇಲಾಖೆಯಲ್ಲಿ ಬಹಳ ಅನ್ಯಾಯ ನಡೆದಿದೆಯೆನ್ನುವ ಅಪಾದನೆ ಇದೆ. ಇವತ್ತು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಬಹಳ ಕಡಿಮೆ ಸಿಬ್ಬಂದಿ ವರ್ಗ ಇದ್ದಾರೆ, ಈ ಅರಣ್ಯ ಇಲಾಖೆಯಲ್ಲಿ ಅವರು ಎಷ್ಟು ತಪ್ಪಿತಸ್ಥ ಅಧಿಕಾರಿಗಳನ್ನು ಕಡ್ಡಾಯವಾಗಿ ರಿಟೈರ್‌ಮಾಡಿದ್ದಾರೆ? ತಾವು ತಮ್ಮ ಇಲಾಖೆಯ ಸಿಬ್ಬಂದಿ ವರ್ಗದಲ್ಲಿ ಎಷ್ಟು ಅಧಿಕಾರಿಗಳಿಗೆ ಕಡ್ಡಾಯ ನಿವೃತ್ತಿ ಕೊಟ್ಟಿದ್ದೀರಿ? ಕೊಟ್ಟವರು ಯಾರುಯಾರು? ಯಾವರೀತಿ ಕೊಟ್ಟಿದ್ದೀರಿ? ತಮ್ಮ ಇಲಾಖೆಯಲ್ಲಿಯೂ ಒಳ್ಳೆಯ ಅಧಿಕಾರಿಗಳೇ ಇಲ್ಲವೆಂದು ಹೇಳುತ್ತಿಲ್ಲ. ಆದರೆ ಬಹಳಷ್ಟು ಜನ ಅಧಿಕಾರಿಗಳು ಕಂಟ್ರಾಕ್ಟರ ಜೊತೆಯಲ್ಲಿ ಸೇರಿಕೊಂಡು ಸರ್ಕಾರದ ಹಣವನ್ನು ಹೊಡೆಯುತ್ತಿದ್ದಾರೆ. ಮಾನ್ಯ ನಗರಾಳ್‌ರವರ ಇಲಾಖೆಯಲ್ಲಿಯೂ ಬೇಕಾದಷ್ಟು ಇದೆ. ಈ ಅಪಾದನೆಗೆ ಏನು ಸಿದ್ದ ಔಷಧಿಯನ್ನು ಇಟ್ಟಿದ್ದೀರಿ? ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ, ಈ ತುರ್ತು ಪರಿಸ್ಥಿತಿ ರಾಜ್ಯದಲ್ಲಿ ಬಂದಮೇಲೆ ಪಿಡಬ್ಲ್ಯುಡಿ ಇಲಾಖೆಯವರು ಕಡ್ಡಾಯವಾಗಿ ನಿವೃತ್ತಿ ಮಾಡುವುದಕ್ಕೆ ಅಧಿಕಾರಿಗಳೇ ಸಿಕ್ಕಲಿಲ್ಲವೇ ಸ್ವಾಮಿ? ನಿಮ್ಮ ಇಲಾಖೆಯಲ್ಲಿ ಒಳ್ಳೆಯ ಅಧಿಕಾರಿಗಳು ಇದ್ದಾರೆಂದು ನಮಗೂ ಗೊತ್ತಿದೆ. ಅದರಲ್ಲಿ ಎಷ್ಟು ಜನರು ಸರ್ಕಾರದ ಹಣವನ್ನು ಅಷ್ಟು ಜೋಪಾನವಾಗಿ ಕಾಯಬೇಕು ಅಷ್ಟು ಕಾಯುತ್ತಿದ್ದಾರೆ ಇಲ್ಲವೇ ಎನ್ನುವುದನ್ನು ಎಷ್ಟು ಪತ್ತೆ ಹಚ್ಚಿದ್ದೀರಿ? ಸ್ವಾಮಿ ತಮಗೆ ಅದಕ್ಕೆ ಶಹಬಾಸ್‌ಗಿರಿ ಕೊಡುತ್ತೇವೆ. ಸರ್ಕಾರಿ ಹಣವನ್ನು ಲೂಟಿ ಮಾಡಿದವರನ್ನು ಮನೆಗೆ ಕಳುಹಿಸಿದ್ದೀರಿ! ಈಗ ತಮ್ಮ ಇಲಾಖೆಯ ಮೇಲೆ ಏನು

ಅಪಾದನೆ ಇದೆ ಅದನ್ನು ನಾನು ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ನಾನು ಬಚ್ಚಿಡುವುದು ಬೇಡ. ಇದು ಮುಚ್ಚಿಡುವಂಥ ವಿಷಯವಲ್ಲ. ಕೆಲವು ಅಧಿಕಾರಿಗಳನ್ನು ಏನು ಸಸ್‌ಪೆಂಡ್ ಮಾಡಿದ್ದೀರಿ ಅದು ಸರಿಯಾಗಿಲ್ಲವೆಂದು. ಅವರ ಮನಸ್ಸಿಗೆ ಬಂದವರನ್ನು ಮಾಡಿದ್ದಾರೆ. ತಪ್ಪು ಮಾಡಿದವರಿಗೆ ಕೆಲವು ಕಡೆ ರಕ್ಷಣೆ ಕೊಟ್ಟಿದ್ದಾರೆಂದು ಹೇಳುತ್ತಿದಾರೆ. ಯಾರುಯಾರನ್ನು ಯಾವಯಾವ ಕಾರಣದಿಂದ ತೆಗೆದುಹಾಕಿದ್ದೀರಿ? ಆ ರೀತಿ ತೆಗೆದುಹಾಕುವುದಕ್ಕೆ ಸಾಧ್ಯವಿಲ್ಲ? ಇದನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಒಂದು ಅಪಾದನೆ ಏನು ಎಂದರೆ ಅಧಿಕಾರಿಗಳನ್ನು ತೆಗೆದುಹಾಕುವಾಗ ಜಾತಿ ಅಧಾರದಮೇಲೆ ಮಾಡಿದ್ದಾರೆ ಎಂದು ಇದೆ. ಇದರಲ್ಲಿ ನನ್ನ ಪಂಗಡಕ್ಕೆ ಸೇರಿದಂತ ಅಧಿಕಾರಿಗಳು ಇದ್ದಾರೆ ಅವನನ್ನು ಬಚಾವ್ ಮಾಡಬೇಕೆಂದು ನಾನು ಹೇಳುತ್ತಿಲ್ಲ? ಯಾರೇ ಆಗಲಿ ಸರ್ಕಾರದ ಹಣ ತಿಂದಿದ್ದರೆ ಅವನನ್ನು ತೆಗೆದಿದ್ದರೆ ಒಳ್ಳೆಯದು? ಜೊತೆಗೆ ಅಂಥವರನ್ನು ಜೈಲಿಗೆ ಕಳುಹಿಸಿ ನಾವು ಬೇಡ ಎಂದು ಹೇಳುವುದಿಲ್ಲ. ಇದು ನಮ್ಮ ವಾದ ಕಡ್ಡಾಯವಾಗಿ ನಿವೃತ್ತಿ ಮಾಡತಕ್ಕಂಥ ಕೆಲವು ಪ್ರಕರಣಗಳಲ್ಲಿ ರಕ್ಷಣೆ ಕೊಟ್ಟು ಕೆಲವರನ್ನು ಬಿಟ್ಟುಬಿಟ್ಟಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ಅದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಸ್ವಾಮಿ ಯಾವರೀತಿ ಫೇವರೆಟಿಸಮ್ ನಡೆಯುತ್ತಿದೆ ಇಲಾಖೆಯಲ್ಲಿ ಎಂದು ಹೇಳುತ್ತೇನೆ. ನಾನು ಹೇಳುವುದು ಇಷ್ಟೆ ಯಾರು ತಪ್ಪಿತಸ್ಥರು ಇದ್ದಾರೆ ಎಂಬುದನ್ನು ಕೂಲಂಷವಾಗಿ ಪರಿಶೀಲನೆಮಾಡಿ ಮನೆಗೆ ಕಳುಹಿಸಿಕೊಡಿ ಬೇಡವೆಂದು ಹೇಳುವುದಿಲ್ಲ. ಆದರೆ ಜಾತಿ, ಕೋಮು ಅಥವಾ ಪಂಗಡದ ಆಧಾರದಮೇಲೆ ಇದು ಆಗಬಾರದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಡ್ಡಾಯವಾಗಿ ನಿವೃತ್ತಿ ಮಾಡುವುದರಲ್ಲೇ ಆಗಲಿ ಅಥವಾ ಮಾಲ್‌ಪ್ರಾಕ್ಟೀಸ್ ಮಾಡುವವರನ್ನು ರಕ್ಷಣೆ ಮಾಡುವುದರಲ್ಲಾಗಲಿ ಜಾತಿ ಆಧಾರದಮೇಲೆ ಮಾಡಿದ್ದೀರಿ ಎಂದು ತಾವು ಏನು ದೊಡ್ಡ ಅಪಾದನೆ ಮಾಡುತ್ತಿದ್ದೀರಿ ಆ ಬಗ್ಗೆ ಸರಿಯಾದ ನಿದರ್ಶನ ಕೊಟ್ಟರೆ ನನಗೆ ಉತ್ತರ ಕೊಡುವುದಕ್ಕೆ ಅನುಕೂಲ ವಾಗುತ್ತದೆ.

SRI S. BANGARAPPA.—Some Executive Engineers have been retired under Rule 285. They mostly belong to the Minorities and the Backward Classes.

SRI H. M. CHANNABASAPPA.—This is a very grave charge that the Hon'ble member is making. I for one, have been practically observing one principle and that is I am not viewing the question on the principle of caste or community. All action will be taken without reference to community or caste. That is one thing which I have been strictly observing. Therefore the Hon'ble member will be doing a great service to me and to the country if he would kindly let me know the cases, in what manner, how and where such a thing has happened.

ಶ್ರೀ ಎಸ್. ಬಂಗಾರಪ್ಪ —ಕೆಲವು ಎಕ್ಸಿಕ್ಯೂಟೀವ್ ಇಂಜಿನೀಯರ್ಸ್‌ನ್ನು ರೂಲ್ 285 ಪ್ರಕಾರ ರಿಟೈರ್ ಮಾಡಿದ್ದೀರಿ? ಅವರ ಹೆಸರು ನನ್ನ ಹತ್ತಿರವಿಲ್ಲ, ಆದಕ್ಕೆ ಸಂಬಂಧಪಟ್ಟಂತೆ ಪ್ರಕರಣಗಳು ಇವೆ. ಹಿಂದುಳಿದ ಜನಾಂಗದವರು ಇದ್ದಾರೆ ಅವರಿಗೆ ಸೇರಿದಂತವರು ಅವರನ್ನು ಹೆಚ್ಚಾಗಿ ಕಡ್ಡಾಯ ನಿವೃತ್ತಿ ಮಾಡುತ್ತಿದ್ದಾರೆಂದು ಪಿಡಬ್ಲ್ಯೂಡಿ ಇಲಾಖೆಯ ಮೇಲೆ ಅಪಾದನೆ ಇದೆ?

SRI H. M. CHANNABASAPPA.—The Hon'ble member must know the procedure adopted in removing the officers under Rule 285 There is a Screening Committee which will go into all aspect of the question-his-doings, misdeeds and the good deeds, and then makes a recommendation to Government to take further action in the matter.

SRI S. BANGARAPPA.—I am not excluding the Screening Committee which is appointed by the Government to go into such matters. My charge is that Committee is wrongly giving reports to the Government.

SRI H. M. CHANNABASAPPA.—That means the Committee is making wrong recommendations.

SRI S. BANGARAPPA.—I can prove to the hilt how the officers have been unjustifiably retired.

SRI H. M. CHANNABASAPPA.—I stand guilty if such a thing has been done. I shall prove how justifiably they have been retired. You may not feel justified but others would feel it justified. I have been a Minister in the P. W. D. for a long time. I am quite clear in my mind that in the P. W. D. no decision shall take place on the basis of community.

ಶ್ರೀ ಎಸ್. ಬಂಗಾರಪ್ಪ.—ನಾನು ಮಾತನಾಡಿದ್ದು ಕೂಡ ಈ ಸ್ಕ್ರೀನಿಂಗ್ ಕಮಿಟಿಯವರು ಏನು ರಿಪೋರ್ಟ್ ಕೊಡುತ್ತಾ ಇದ್ದಾರೆ, ಯಾವ ಬೇಸಿಸ್ ಮೇಲೆ ಕೊಡುತ್ತಿದ್ದಾರೆ ಎನ್ನುವುದೇ ನಮಗೆ ಬಂದಿರುವ ತಾಪತ್ರಯ.

ಶ್ರೀ ಎಚ್.ಎಂ. ಚೆನ್ನಬಸಪ್ಪ.—ನಾನು ಮಂತ್ರಿಯಾಗಿ ಪಿಡಬ್ಲ್ಯುಡಿ ಇಲಾಖೆ ನನ್ನ ವಶದಲ್ಲಿರುವವರೆಗೆ ಈ ರೀತಿ ನಡೆಯುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ ಈ ಮಾತನ್ನು ನಾವು ಪದೇಪದೇ ಕೇಳುತ್ತಲೇ ಇದ್ದೇವೆ ಇದು ನಮಗೆ ಹೊಸದೇನೂ ಅಲ್ಲ, ಇದನ್ನು ಕೇಳಿದ ಮೇಲೂ ನಡೆಯುತ್ತಿದೆ.

ನಾನು ತಮಗೆ ಒಂದು ಮಾತನ್ನು ಹೇಳುತ್ತೇನೆ. ಜಾತಿ ಪಂಗಡ ನನಗೆ ಸಂಬಂಧವಿಲ್ಲ. ಆದರೆ ಅದೇ ರೀತಿಯಲ್ಲಿ ಅನ್ಯಾಯ ಮಾಡಿದಂಥ ಜನರಿಗೆ ರಕ್ಷಣೆ ಕೊಟ್ಟಿರುವ ಪ್ರಕರಣಗಳು ಇವೆ. ಅದನ್ನು ತಾವು ದಯಮಾಡಿ ವಿಚಾರ ಮಾಡುತ್ತೀರಾ? ಅಂತಹವರಿಗೆ ಏಕೆ ಕೊಟ್ಟಿಲ್ಲವೆಂದು ನಮ್ಮ ಚಾರ್ಜ್ ಸ್ಕ್ರೀನಿಂಗ್ ಕಮಿಟಿ ಮುಖಾಂತರ ತಮ್ಮ ಕಾನೂನು ವಿಧಿನಿಯಮಗಳ ಪ್ರಕಾರ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂಬುದನ್ನು ನಾನು ನಿರೀಕ್ಷೆಮಾಡುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ದಯವಿಟ್ಟು ನನಗೆ ಆ ಪಟ್ಟಿಯನ್ನು ಕೊಡಿ.

ಶ್ರೀ ಎಸ್. ಬಂಗಾರಪ್ಪ.—ಈ ಸರ್ಕಾರದಮೇಲೆ ಯಾರೋ ಒಬ್ಬರಿಗೆ ಫೇವರಿಟಿಜಂ ಮಾಡಿರುವ ಬಗ್ಗೆ ನಾನು ಚಾರ್ಜ್ ಮಾಡುತ್ತೇನೆ. ಅದು ಯಾವುದು ಎಂದರೆ, Chickhole Dam in Chamarajanagar Taluk. This work was sanctioned in 1954, the estimated cost was Rs. 45 lakhs and the work was actually started in the 1959 itself. The year in which water was partially stored was in 1966-67. ೬೬-೬೭ರ ವರ್ಕ್ ಸಂಪೂರ್ಣವಾಗಿ ಮುಗಿದಿದ್ದು ೧೯೬೭ರಲ್ಲಿ ಅಂದರೆ ೫೭ ರಿಂದ ೬೭ ರವರೆಗೆ ೧೦ ವರ್ಷಗಳನ್ನು ತೆಗೆದುಕೊಂಡಿದ್ದೀರಿ. ಆ ಕೆಲಸವನ್ನು ಸಂಪೂರ್ಣವಾಗಿ ಮುಗಿಸಿದ್ದೀರಿ. ಇದರ ಒಟ್ಟು ಅಚ್ಚುಕಟ್ಟು ಮೂರು ಸಾವಿರದಿಂದ ೩ ಸಾವಿರದ ಐನೂರು ಎಕರೆಗಳು ಬರತಕ್ಕದ್ದು. ೮ನೇ ಡಿಸೆಂಬರ್ ೧೯೬೭ರಲ್ಲಿ ಈ ಡ್ಯಾಂ ರಚನೆಮಾಡಲಾಗಿದೆ. A big hubub was created on the floor of the House

ಇಷ್ಟೊಂದು ಅನ್ಯಾಯ ನಡೆದಿದೆ. ಲೋಕೋಪಯೋಗಿ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಅನ್ಯಾಯಮಾಡಿದ್ದಾರೆ. ಸರಿಯಾಗಿ ವಿಚಾರಮಾಡಬೇಕು. ಸರ್ಕಾರದ ಮೇಲೆ ಇದರ ಬಗ್ಗೆ ಹೆಚ್ಚಿಗೆ ಒತ್ತಡವನ್ನು ತಂದಮೇಲೆ, ಮತ್ತು ಆ ವಿಚಾರವಾಗಿ ತಮ್ಮ ಹತ್ತಿರ ಮಾತನಾಡಿದ ಮೇಲೆ, ಈ ಪ್ರಾಜೆಕ್ಟಿನ ಬಗ್ಗೆ ಕೆಲವಾರು ಕ್ರಮಗಳನ್ನು ತೆಗೆದುಕೊಂಡಿದ್ದಾರೆ.

On 4th January 1973 the Government appointed a One-man Commission to enquire into this matter headed by Sri Mani, a Chief Engineer of Bombay. I am told he is one of the eminent engineers to-day in the whole of south East Asia.

The points referred to him were:

1. The reason for the breach

2. Fixing up of responsibility on the concerned officers for the breach of the dam.

That report was submitted by Sri Mane about a year ago: I could not get the exact date.

ಒಂದು ವರ್ಷದ ಹಿಂದೆ ತಮಗೆ ಆ ಒಂದು ವರದಿಯನ್ನು ಕೊಟ್ಟಿದ್ದರೂ ಕೂಡ ತಾವು ಅದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಾ? ಆ ವರದಿಯಲ್ಲಿ ಏನೇನು ಫೈಂಡಿಗ್ಸನ್ನು ಆ ಚೀಫ್ ಇಂಜಿನಿಯರ್ ಕೊಟ್ಟಿದ್ದಾರೆ? He has categorically come to the conclusion and givian a finding that the officers responsible should be punished. Sri K. S. Srinivasamurthy, E.E. and Sri R. L. Subbaraya Shetty, S.E. in charge ಚೀಫ್ ಇಂಜಿನಿಯರ್, ಎಕ್ಸಿಕ್ಯುಟಿವ್ ಇಂಜಿನಿಯರ್ ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರ್ ಇನ್ ಚಾರ್ಜ್— ಈ ಮೂರು ಜನರು ಜವಾಬ್ದಾರಿಯಿಂದ ಇದರ ಬಗ್ಗೆ ವರ್ತನೆ ಮಾಡಲಿಲ್ಲ, ಆ ದೆಸೆಯಿಂದ ಈ ಚಿಕ್ಕಹೊಳೆ ಡ್ಯಾಂ ಬ್ರೀಚ್ ಆಗಿದೆ. ಇದಕ್ಕೆ ಆಗಿರತಕ್ಕ ಖರ್ಚು ಮೊದಲು ೪೫ ಲಕ್ಷ ರೂಪಾಯಿಗಳು. ಇದು ೧೯೬೫ನೇ ಸಾಲಿನಲ್ಲಿ ಮಂಜೂರು ಆಗಿದ್ದುದು. ಅನಂತರ ಸುಮಾರು ೨ ಕೋಟಿ ರೂಪಾಯಿಗಳಷ್ಟು ಬೆಳೆ ಹೋದುದು. ಅಂದಮೇಲೆ ೪ ವರ್ಷಗಳಿಗೆ ೮ ಕೋಟಿ ರೂಪಾಯಿಗಳಷ್ಟು ಹಣ ಹೋಯಿತು, ಅನಂತರ ತಾವೇನು ಮಾಡಿದ್ದೀರಿ ಎಂದರೆ, ಈ ಕೆಲಸವನ್ನು ಪೂರ್ತಿ ಮಾಡಲು ಪುನಃ ೧.೨೪ ಕೋಟಿ ರೂಪಾಯಿಗಳನ್ನು ಮಂಜೂರುಮಾಡಿ ಇನ್ನೂ ಉಳಿದಿರುವ ರಿಪೇರಿ ಕೆಲಸಗಳನ್ನು ಮಾಡಿಸಿದ್ದೀರಿ. The repair of the breached dam was entrusted to Messrs. Srinivas Construction Company for Rs. 1.24 crores. ಆ ಕೆಲಸವನ್ನು ಅವರಿಗೆ ಎನ್‌ಟ್ರಸ್ಟ್‌ಮಾಡಿ ನಾಲ್ಕು ವರ್ಷಗಳಾದವು. ಈ ವರ್ಷ ೨ ಕೋಟಿ ರೂಪಾಯಿಗಳು ನಷ್ಟವಾಗಿವೆ ಎಂಬ ಮಾತನ್ನು ಹೇಳಿದ್ದಾರೆ. ಮತ್ತು ರೆಸ್‌ಪಾನ್ಸಿಬಿಲಿಟಿಯನ್ನು ಫಿಕ್ಸಪ್ ಮಾಡುವುದಕ್ಕೋಸ್ಕರ ಮಾನ್ಯ ಶ್ರೀ ಮಾನೆ ಅವರನ್ನು ನೇಮಕಮಾಡಿದನು. ತಾವು ಇದಕ್ಕೆ ಮುಖ್ಯ ಕಾರಣರು ಮೂರು ಜನರೆಂದು ಹೇಳಿದರೂ ಕೂಡ ಮತ್ತು ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಿಳಿಸಿದರೂ ಕೂಡ ಅದರಲ್ಲಿ ಫೇವರಿಟಿಜಂ ಹೇಗೆ ನಡೆದಿದೆಯೆಂದು ಒಂದು ಕಾರಣವನ್ನು ಇಟ್ಟಿದ್ದೀರಿ. ಇಷ್ಟು ವರ್ಷಗಳ ಹಿಂದೆ ಇದು ಬ್ರೀಚ್ ಆಯಿತು, ರಿಪೋರ್ಟ್ ಕೊಟ್ಟು ಇಷ್ಟು ವರ್ಷಗಳು ಆದರೂ ಕೂಡ ಅದರ ಬಗ್ಗೆ ಇದುವರೆಗೆ ಯಾವ ಕ್ರಮವನ್ನೂ ಸಹ ತೆಗೆದುಕೊಂಡಿಲ್ಲ. ತಾವು ಒಳ್ಳೆಯ ದಕ್ಷ ಆಡಳಿತಗಾರರು ಎಂಬ ಹೆಸರನ್ನು ಪಡೆದು ಈಗ ಪದೇ ಪದೇ ತಮ್ಮನ್ನು ಅನ್ಯಾಯವಾಗಿ ಜನರು ಬೈಯುತ್ತಾ ಇದ್ದಾರೆ. ತಾವೇಕೆ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ, ಏಕೆ ರೂಲ್ಸನ್ನು ಸರಿಯಾಗಿ ಜಾರಿಗೆ ತಂದಿಲ್ಲ, ಓನ್‌ಮ್ಯಾನ್ ಕಮೀಷನ್ ಅವರ ರಿಪೋರ್ಟನ್ನು ಏಕೆ ಜಾಗ್ರತೆಯಾಗಿ ಪರಿಶೀಲಿಸಿ ಸೂಕ್ತ ಕ್ರಮವನ್ನು ತೆಗೆದುಕೊಂಡಿಲ್ಲ. ಅಧಿಕಾರಿಗಳನ್ನು ಏಕೆ ಬಿಟ್ಟಿದ್ದೀರಿ? ಆದ್ದರಿಂದ ತಮ್ಮ ಮೇಲೆ ಏಕೆ ನಾನು ಚಾರ್ಜ್ ಮಾಡಬಾರದೆಂದು ನಾನು ಕೇಳುತ್ತೇನೆ. ಮಾನ್ಯ ಶ್ರೀ ಸುಬ್ಬರಾಯಶೆಟ್ಟಿಯವರು ಬಹಳವಾಗಿ ರಕ್ಷಣೆಯನ್ನು ದೊಡ್ಡವರಿಂದ ಪಡೆದಿದ್ದಾರೆ. ಈ ಮಾತನ್ನು ಹೇಳಿದರೆ ತಾವು ಅನ್ಯಥಾ ಭಾವಿಸಬಾರದು.

ಶ್ರೀ ಎಚ್.ಎಂ. ಚನ್ನಬಸಪ್ಪ.—ಅನ್ಯಥಾ ಭಾವಿಸಬಾರದು ಎಂಬ ಪ್ರಶ್ನೆಯಿಲ್ಲ, ಸತ್ಯವನ್ನು ಹೇಳಿದರೆ ಆ ರೀತಿ ಭಾವಿಸುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಏಕೆಂದರೆ ಇರತಕ್ಕ ವಿಷಯಗಳನ್ನು ಸತ್ಯವಾಗಿ ಹೇಳಿದರೆ ನಿಮಗೆ ನೋವಾಡೀತೆಂದು ನಾನು ಭಾವಿಸುತ್ತೇನೆ.

ಶ್ರೀ ಎಚ್ ಎಂ. ಚೆನ್ನಬಸಪ್ಪ.—ಅಬ್‌ಸಲ್ಯೂಟ್ಲಿ ನಿಜ. I am glad you are making a disclosure and bringing me nearer to him

ಅಧ್ಯಕ್ಷರು.—ಮಂತ್ರಿಗಳು ಇಂಥಾದ್ದನ್ನೆಲ್ಲಾ ಬಹಳ ಚೆನ್ನಾಗಿ ತಿಳಿದುಕೊಂಡಿದ್ದಾರೆ,

ಶ್ರೀ ಎಸ್. ಬಂಗಾರಪ್ಪ.—ಅವರು ಇವರ ಸಂಬಂಧಿಕರು ಎಂಬುದಾಗಿ ನಾನು ಹೇಳುವುದಿಲ್ಲ. ಶ್ರೀ ಶ್ರೀನಿವಾಸಮೂರ್ತಿಯವರು ಪೆರಿಯಾಪಟ್ಟಣದಲ್ಲಿದ್ದರೆಂದು ನಾನು ಈ ರೀತಿಯಾಗಿ ಹೇಳುತ್ತಾ ಇಲ್ಲ. ಸೂಪರಿಂಟೆಂಡಿಂಗ್ ಇಂಜನಿಯರ್ ವಿಷಯವಾಗಿ ನಾನು ಹೇಳುವುದಿಲ್ಲ.

Sri H. M. Channabasappa.—I hope Sri Srinivasa Murthy is not my relation.

ಶ್ರೀ ಟಿ.ಎಂ. ಮಂಜುನಾಥ್.– ಇವರು ರಿಲೇಷನ್ ಬಗ್ಗೆ ಕಟುವಾಗಿ ಟೀಕಿಸುತ್ತಾರೆ. ಆದರೆ ಬೇರೆಯವರಿಗೆ ಬಹಳ ಸಲೀಸಾಗಿ ಮಾಡಿಕೊಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿಯವರೆಗೂ ಅದಕ್ಕಾಗಿ ಖರ್ಚಾಗಿರುವ ಹಣ ೮ ಕೋಟಿ ರೂಪಾಯಿಗಳು. ಈಗ ಹೊಸದಾಗಿ ಕೊಟ್ಟಿರುವುದು ಎರಡು ಕೋಟಿ ರೂಪಾಯಿಗಳು. ಒಟ್ಟು ಇದಕ್ಕಾಗಿ ಈಗ ೧೦ ಕೋಟಿ ರೂಪಾಯಿಗಳು ಖರ್ಚಾಗಿವೆ. ಡ್ಯಾಮಿಗೆ ಆಗುವ ಖರ್ಚನ್ನು ಬಿಟ್ಟು ೧೨ ಕೋಟಿ ರೂಪಾಯಿಗಳು ಖರ್ಚಾಗಿವೆ ನನ್ನ ಪ್ರಕಾರ ಸುಮಾರು ೯ ಕೋಟಿ ರೂಪಾಯಿಗಳಿಗಿಂತ ಕಡಿಮೆ ಖರ್ಚು ಆಗಿಲ್ಲ. ರಾಜ್ಯಸರ್ಕಾರದ ಬೊಕ್ಕಸಕ್ಕೆ ತುಂಬಲಾರದ ನಷ್ಟವಾಗಿದೆ. ಸರ್ಕಾರದ ಹಣವನ್ನು ಹಾಳು ಮಾಡುವುದಕ್ಕೆ, ಪೋಲು ಮಾಡುವುದಕ್ಕೆ ಮತ್ತು ಲೂಟಿ ಮಾಡುವುದಕ್ಕೆ ಅವರೆಲ್ಲರೂ ಕಾರಣರಾಗಿದ್ದಾರೆ ಆದ್ದರಿಂದ ಅಲ್ಲಿನ ಅಚ್ಚುಕಟ್ಟುದಾರರ ಮೇಲೆ ಏಕೆ ರೂಲ್ಸ್ ಲಗಿನ್ನು ಅಪ್ಲೈ ಮಾಡುತ್ತೀರಾ? ಏಕೆ ಒನ್‌ಮ್ಯಾನ್ ಕಮಿಷನ್ ಮಾಡಿದ್ದು? ಏತಕ್ಕಾಗಿ ಇದುವರೆಗೆ ಆ ವರದಿಯನ್ನು ಜಾರಿಗೆ ಕೊಟ್ಟಿಲ್ಲ?

ಈ ಸದನದಲ್ಲಿ ತಾವು ಆ ವಿಷಯವನ್ನು ಪ್ರಸ್ತಾಪ ಮಾಡಿಲ್ಲ. ರಿಪೋರ್ಟ್ ಬಂದಮೇಲೆ ಈ ಸದನಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಿಲ್ಲ.

10-30 A. M.

ಮಾನ್ಯ ಅಧ್ಯಕ್ಷರೆ. ಇದೊಂದು ಪ್ರಕರಣದಲ್ಲಿ ಅಲ್ಲ, ಇನ್ನು ಹಲವಾರು ಪ್ರಕರಣಗಳು ಇರುವುದರಿಂದ ಕೆಟ್ಟ ಅಧಿಕಾರಿಗಳು ಹೆಚ್ಚು ದಿನ ಉಳಿಯುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂತ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ ಇನ್ನು ಕನ್‌ಸ್ಟ್ರಕ್ಷನ್ ಕಂಪೆನಿಯವರಿಗೆ ಕೆಲವು ಕೆಲಸಗಳನ್ನು ವಹಿಸಿದ್ದೀರಿ ಅವರ ಮೇಲೆ ಕೂಡಬೇಕಾದಷ್ಟು ಅಪಾದನೆಗಳು ಇದ್ದಾಗ್ಯೂ ಸಹ ಅವರಿಗೇ ಕೆಲಸವನ್ನು ವಹಿಸಿಕೊಡತಕ್ಕಂಥ ಮನಸ್ಸು ನಿಮಗೆ ಏತಕ್ಕೆ ಮೂಡಿ ಬಂತೋ ಎಂಬುದೇ ನಮ್ಮ ಪ್ರಶ್ನೆ ಮಾನ್ಯ ಅಧ್ಯಕ್ಷರೇ, ಇಂಥ ಅನೇಕ ಪ್ರಕರಣಗಳು ಇದ್ದಾಗ್ಯೂ ಕೂಡ ಇಲ್ಲಿ ಎಲ್ಲವನ್ನೂ ಹೇಳುವುದಕ್ಕಾಗುತ್ತಿಲ್ಲ. ಇಂಥ ಪ್ರಕರಣಗಳು ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಯಥೇಚ್ಛವಾಗಿ ಇದ್ದಾವೆ, ಇದರ ಬಗ್ಗೆ ತಾವು ಒಂದು ದಿಟ್ಟತನದ ಮಾತನ್ನು ಯಾಗವಲೂ ಈ ಸದನದಲ್ಲಿ ಹೇಳುತ್ತಿರಿ. ವಿಧಿ ಭದ್ದವಾಗಿ ನೀತಿ ನಿಯಮ ಪ್ರಕಾರ ಕ್ರಮ, ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ತಾವು ಹೇಳಿದ್ದಾಗ್ಯೂ ಕೂಡ ಕೆಲವೊಮ್ಮೆ ಕೆಟ್ಟ ಅಧಿಕಾರಿಗಳೇನಿದ್ದಾರೆ ಅವರಿಂದ ಇಂಥ ಕಾರ್ಯಗಳು ನಡೆಯುತ್ತಿರುವುದರಿಂದ, ತಾವು ಮೊದಲು ಅಂಥ ಕೆಟ್ಟ ಅಧಿಕಾರಿಗಳನ್ನು ಪತ್ತೆಹಚ್ಚಿ ಅವರೆಲ್ಲರನ್ನೂ ತೆಗೆದು ಹಾಕಬೇಕಾಗಿದೆ. ಹಾಗಿಲ್ಲದಿದ್ದರೆ ತಾವು ಎಷ್ಟೆ ನೀತಿಯುತವಾಗಿ, ವಿಧಬದ್ಧವಾಗಿ ಮಾಡುತ್ತೇವೆ ಎನ್ನತಕ್ಕಂಥ ವ್ಯಾಖ್ಯಾನ ಮಾಡಿದರೂ ಕೂಡ ನಿಮ್ಮ ಇಲಾಖೆಗೆ ಕೆಟ್ಟ ಹೆಸರು ಇದ್ದೇ ಇರುತ್ತದೆ, ಕೆಟ್ಟ ಹೆಸರನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದನ್ನು ತಾವು ಮನವರಿಕೆ ಮಾಡಿಕೊಳ್ಳಬೇಕಾಗಿದೆ. ಇನ್ನು ಮೈನರ್ ಇರಿಗೇಷನ್ ಬಗ್ಗೆ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿದೆ. ಈ ಸಣ್ಣ ನೀರಾವರಿ ಖಾತೆಯ ಮಂತ್ರಿಗಳು ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಅದು ಏನೆಂದರೆ ಸಣ್ಣ ನೀರಾವರಿ ಯೋಜನೆ ಮಂತ್ರಿಗಳು ಎಲ್ಲಾ ಶಾಸಕರನ್ನೂ ಕರೆಸಿ, ಎಲ್ಲೆಲ್ಲಿ ಕೆಲಸಕಾರ್ಯಗಳು ಆಗಬೇಕಾಗಿದೆ ಎನ್ನುವ ಬಗ್ಗೆ ಅವರಿಂದ ಕೇಳಿ ತಿಳಿದುಕೊಂಡು ಆದೇ ರೀತಿ ಮಾಡಿಸುತ್ತೇವೆಂದು ಆಶ್ವಾಸನೆ ಕೊಟ್ಟಿದರು. ಸ್ವಾಮಿ. ನನಗೆ ಗೊತ್ತಿರುವ ಪ್ರಕಾರ ತಾವು ಎಂದೂ ಆ ರೀತಿಯಾರನ್ನೂ ಕೂಡ ಕರೆಯಲಿಲ್ಲ. ಆದರೆ ಮಾನ್ಯ ಚನ್ನಬಸಪ್ಪನವರು ಹೇಳಿದ ಪ್ರಕಾರ ಒಂದುಸಾರಿ ಮೀಟಿಂಗ್‌ಗೆ ಕರೆದಿದ್ದರು ಆದರೆ ತಾವು ಮಾತ್ರ ವಿಫಲರಾಗಿರುವುದಕ್ಕೆ ಕಾರಣವೇನು?

ಶ್ರೀ ಎಸ್.ಬಿ. ನಗರಾಳ್.— ನೀವು ಹೇಳಿದ ಪ್ರಕಾರ ಕರೆಯುವಷ್ಟು ಹೊತ್ತಿಗೆ ಅಸೆಂಬ್ಲಿ ಅಧಿವೇಶನ ಮುಗಿದು ಹೋಗಿತ್ತು. ಆ ನಂತರ ನಾವು ಮತ್ತೆ ಪುನಃ ಇಲ್ಲಿ ಭೆಟ್ಟಿಯಾಗುತ್ತಿರುವುದು. ಆದುದರಿಂದ ಮೀಟಿಂಗ್ ಕರೆಯಲು ಆಗಲಿಲ್ಲ. ಆದಾಗ್ಯೂ ಕೂಡ ಯಾರಯಾರ ಕ್ಷೇತ್ರದಲ್ಲಿ ಏನೇನು ಕೆಲಸಕಾರ್ಯಗಳು ಆಗಬೇಕಾಗಿದೆ ಎನ್ನುವ ಬಗ್ಗೆ ಬರೆದು ಕಳುಹಿಸಿಕೊಡಿ ಎಂದು ತಿಳಿಸಿದ್ದೆವು. ಅದರ ಪ್ರಕಾರ ನಾವು ಕಾರ್ಯಕ್ರಮವನ್ನು ಸಹ ಈಗಾಗಲೇ ಕೈ ಗೊಂಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ, ಪತ್ರವನ್ನು ಬರೆದಿದ್ದರೆ ಮೇಲೆ ಕಾರ್ಯಕ್ರಮವನ್ನು ತೆಗೆದು ಕೊಂಡಿದ್ದೇವೆಂದು ಹೇಳಿದ್ದಾರೆ, ಅದಕ್ಕಾಗಿ ನಾನು ಅವರಿಗೆ ಆಭಾರಿಯಾಗಿದ್ದೇನೆ. ಆದರೆ ನಾನು ಆ ವಿಷಯವನ್ನು ಇಲ್ಲಿ ಪ್ರಸ್ತಾಪಮಾಡುತ್ತಿಲ್ಲ, ಸರ್ಕಾರದ ಪತಿಯಿಂದ ತಾವು ಇಲ್ಲಿ ಏನು ಹೇಳಿದ್ದೀರಿ ಅದರಂತೆ ನಡೆದುಕೊಳ್ಳಬೇಕಾಗಿತ್ತು, ನಾನು ಇಲ್ಲಿನ ತಿಯ ಪ್ರಶ್ನೆ ಕುರಿತು ಮಾತನಾಡುತ್ತಿದ್ದೇನೆ. ಶಾಸಕರನ್ನೆಲ್ಲಾ ಕರೆಸಿ ಮೀಟಿಂಗ್ ಮಾಡುತ್ತೇನೆಂದು ಹೇಳಿದ ರೀತಿಯಲ್ಲಿ ನೀವು ಮಾಡಬೇಕಾಗಿತ್ತು ಎಂದು ನಾನು ಹೇಳುತ್ತಿರುವುದು.

ಶ್ರೀ ಎಸ್.ಬಿ. ನಗರಾಳ್.— ಮೀಟಿಂಗ್‌ಗೆ ಕರೆಯುತ್ತೇನೆಂದು ಹೇಳಿದ್ದು ನಿಜ ಆದರೆ ಆ ವೇಳೆಯೊಳಗೆ ಅಸೆಂಬ್ಲಿ ಮುಗಿದು ಹೋಗಿದ್ದುದರಿಂದ ಕರೆಯಲಾಗಲಿಲ್ಲ. ಆದುದರಿಂದ ಶಾಸಕರುಗಳಿಗೆ ಪತ್ರ ಮುಖೇನ ಬರೆದು ತಿಳಿಸುವಂತೆ ತಿಳಿಸಿದೆ, ಅದರಂತೆ ಕಾರ್ಯಕ್ರಮವನ್ನೂ ಸಹ ತೆಗೆದುಕೊಂಡಿದ್ದೇನೆಂದು ಈಗಾಗಲೇ ಮಾನ್ಯ ಸದಸ್ಯರಿಗೆ ತಿಳಿಸಿದ್ದೆ.

ಶ್ರೀ ಎಸ್. ಬಂಗಾರಪ್ಪ.— ಈಗಲಾದರೂ ಸಹ ಕರೆಯಿರಿ. ಸಣ್ಣ ನೀರಾವರಿ ಕೆಲಸಕಾರ್ಯಗಳಿಗೆ ಎಷ್ಟು ಕೋಟಿ ರೂಪಾಯಿಗಳನ್ನಾದರೂ ನಾವು ಮಂಜೂರು ಮಾಡಿಕೊಡುತ್ತೇವೆ ಆದುದರಿಂದ ಈ ಸದನ ಮುಗಿಯುವುದರೊಳಗಾಗಿಯಾದರೂ ಒಮ್ಮೆ ಕರೆಯಿರಿ ಮತ್ತೊಂದು ತಾವು ಹೇಳಿದ್ದನ್ನು ನೆನಪು ಮಾಡಿಕೊಡುತ್ತೇನೆ. ಸಣ್ಣ ನೀರಾವರಿ ಕೆಲಸಗಳನ್ನು ಮಾಡಿಸತಕ್ಕಂಥದ್ದು ಬೃಹತ್ ಪ್ರಮಾಣದಿಂದ ಕೂಡಿದೆ ನಿಜ ಆದರೆ ಬಡ್ಜೆಟ್‌ನಲ್ಲಿ ಸೇರಿಸತಕ್ಕಂಥ ಅನೇಕ ಕೆಲಸಕಾರ್ಯಗಳೂ ಸಹ ಆಗದೇನೇ ಹಾಗೆಯೇ ಕೊಳೆಬಿದ್ದಿದೆ. ನನ್ನ ಕ್ಷೇತ್ರದ ಮಲ್ಲಿಗೆಹಳ್ಳ ಪ್ರಾಜೆಕ್ಟ್ ಬಹಳ ಚಿಕ್ಕಪ್ರಾಜೆಕ್ಟ್ ಅದಕ್ಕೆ ಬಡ್ಜೆಟ್‌ನಿಂದ ಹಣಸಿಕ್ಕಿದೆ ಆದರೂ ಕೂಡ ತಾವು ಒಂದು ಗೌವರ್ನಮೆಂಟ್ ಆರ್ಡರ್ ಮಾಡಿ ಕಳುಹಿಸುವುದಕ್ಕೆ ಆಗಿಲ್ಲ. ಎಷ್ಟು ಸಾರಿನಾವು ಅದರ ಬಗ್ಗೆ ಇಲ್ಲಿ ಪ್ರಸ್ತಾಪಮಾಡಿದ್ದೇವೆ. ಎಷ್ಟೋಸಾರಿ ಚೀಫ್ ಇಂಜನಿಯರಿಂಗ್‌ರವರಿಗೆ, ಮತ್ತು ನಿಮಗೂ ಪತ್ರ ಬರೆದಿದ್ದೇನೆ. ಈಗ ತಾವು ಹೇಳಿದಿರಿ ಪತ್ರದ ಮುಖೇನ ತಿಳಿಸಿದರೆ ಆಯಾಯಾ ಕೇತ್ರದಲ್ಲಿ ಕೆಲಸಕಾರ್ಯಗಳನ್ನು ಮಾಡಿಸುತ್ತೇವೆಂದು ಸರ್ಕಾರದಿಂದ ಮಂಜೂರು ಆಗಿರತಕ್ಕಂಥ ಕೆಲಸಕಾರ್ಯಗಳನ್ನೇ ತಾವು ಮಾಡುತ್ತಿಲ್ಲ, ಇನ್ನು ನಾವು ಬರೀ ಪತ್ರ ಬರೆದರೆ ಹೇಗೆ ಮಾಡುತ್ತೀರಿ ಎನ್ನುವ ಅನುಮಾನ ಬಂದಿದೆ. ಆ ದೃಷ್ಟಿಯಿಂದ ತೀವ್ರವಾಗಿ ಇದರ ಕಡೆಗೆ ತಾವು ಹೆಚ್ಚಿನ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ, ಮತ್ತು ಈ ಸಣ್ಣ ನೀರಾವರಿ ಬಗ್ಗೆ ಹೆಚ್ಚಿನ ಗಮನ ಕೊಡಬೇಕು ಏತಕ್ಕೆಂದರೆ ಇವತ್ತು ತುಂಗ ಭದ್ರ ಪ್ರಾಜೆಕ್ಟ್, ಭದ್ರಾ ಪ್ರಾಜೆಕ್ಟ್, ಹೇಮಾವತಿ ಪ್ರಾಜೆಕ್ಟ್ ಕಬ್ಬಿನ ಕಡ ಪ್ರಾಜೆಕ್ಟ್ ಕೃಷ್ಣಾ ಪ್ರಾಜೆಕ್ಟ್‌ಗಳನ್ನು ಮಾಡುತ್ತಿದ್ದೀರಿ. ಆದರೆ ಈ ಸಣ್ಣ ನೀರಾವರಿ ಕಾರ್ಯಕ್ರಮಗಳ ಕಡೆಗೆ ತಾವು ಹೆಚ್ಚಿನ ಗಮನವನ್ನು ಕೊಡುತ್ತಿಲ್ಲ ಉದಾಹರಣೆಗೆ ನಾವು ಕೆರೆಯ ಹೂಳನ್ನು ತೆಗೆಯಿಸಿ ಎಂದು ಪದೇ ಪದೇ ಹೇಳುತ್ತಲೇ ಇದ್ದೇವೆ. ಮಲೆನಾಡಿನಲ್ಲಿ ಹಲವಾರುಕೆರೆಗಳು ಹೂಳಿನಿಂದ ತುಂಬಿಹೋಗಿಬಿಟ್ಟಿವೆ. ಮಾನ್ಯ ಚನ್ನಬಸಪ್ಪನವರಿಗೆ ಕೆರೆಗಳನ್ನು ಕಟ್ಟಿಸುವುದರ ಬದಲು ಕೆರೆಗಳ ಹೂಳನ್ನು ತೆಗೆಯಿರಿ ಎಂದು ಕೇಳಿದ್ದಕ್ಕೆ ಅವರು ಅದು ಅನ್ ಎಕಾನಮಿಕ್ ಎಂದು ಹೇಳಿದ್ದಾರೆ. ಕೆಲವು ಕಾರಣಗಳನ್ನೂ ಸಹ ಕೊಟ್ಟಿದ್ದಾರು ಬೇರೆ ಜಿಲ್ಲೆಗಳಲ್ಲಿರತಕ್ಕಂಥ ಕೆರೆಗಳ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ ಆದರೆ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಜಾಸ್ತಿ ಕೆರೆಗಳಿದ್ದಾವೆ ಅದರ ಅಂಕಿಅಂಶಗಳು ಇಲ್ಲಿ ಬೇಕಾಗಿಲ್ಲ. ಈ ಕೆರೆಗಳನ್ನು ತಾವು ಕಟ್ಟಿಸಿದವುಗಳಲ್ಲ ಅವನ್ನು ಶಿವಪ್ಪನಾಯಕರು ಇದ್ದಾಗ ಕಟ್ಟಿಸಿದಂಥವುಗಳು. ಆ ಕೆರೆಗಳೇನಿವೆ ಅವುಗಳೆಲ್ಲಾ ಹೂಳು ತುಂಬಿ ಮಳೆಗಾಲದಲ್ಲಿ ಮಾತ್ರ ನೀರುತುಂಬಿದಹಾಗೆ ಕಾಣುತ್ತದೆ. ಆದರೆ ಈಗಾಗಲೇ ಅಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ತಮ್ಮ ಒಂದು ವರದಿಯಲ್ಲಿ ನೋಡಿದೆ. ಮಲೆನಾಡಿನ ಭಾಗದಲ್ಲಿ ಭೂಮಿಯೊಳಗೆ ಕಲ್ಲಿನಪದರಗಳು ಇರುವುದರಿಂದ ನೀರು ಸಾಕಷ್ಟು ಇದೆ. ಸಾಕಷ್ಟು ನೀರು ಸಿಗುತ್ತದೆಂದು ವರದಿಯಲ್ಲಿ ಹೇಳಿದ್ದಾರೆ ನಮ್ಮಲ್ಲಿ ಸುಮಾರು 80-100 ಅಡಿ ಆಳ ತೆಗೆದರೂ ನೀರು ಸಿಗುತ್ತಿಲ್ಲ ಅಂಥದರಲ್ಲಿ ಅಲ್ಲಿ ನೀರು ಸಿಗುತ್ತದೆ, ಯಥೇಚ್ಛವಾಗಿ ಪದರಗಳು ಇವೆ ಎಂದು ವ್ಯಾಖ್ಯಾನ ಮಾಡಿರತಕ್ಕಂಥದ್ದನ್ನು ನೋಡಿ ನನಗೆ ಅಭಾಸವಾಗಿ ಕಾಣಿಸುತ್ತಿದೆ. ಆದುದರಿಂದ

ತಪ್ಪಿನಲ್ಲಿ ಕೇಳಿಕೊಳ್ಳುವುದೇನೆಂದರೆ ನೀವು ಎಲ್ಲಿ ಹೇಗೆ ಯೋಜನೆಗಳನ್ನು ಹಾಕಿಕೊಂಡು ಅದರಂತೆ ಪ್ರಾಜೆಕ್ಟಿನ ಕೆಲಸಗಳನ್ನು ಮಾಡಿಸುತ್ತಿದ್ದಿರೋ ಅದರಂತೆ ಕೆರೆಗಳ ಹೂಳನ್ನು ಸಹ ತೆಗೆಸುವ ಬಗ್ಗೆ ಯೋಜನೆಯನ್ನೂ ಸಹ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಚ್.ಎಂ. ಚನ್ನಬಸಪ್ಪ.— ಕೆರೆಗಳಲ್ಲಿ ಒಂದು ಯೂನಿಟ್ ನೀರನ್ನು ನಿಲ್ಲಿಸಬೇಕಾದರೆ 10 ಸಾವಿರ ಚದರ ಗಜ ಮಣ್ಣನ್ನು ತೆಗೆಯಬೇಕಾಗುತ್ತದೆ. ಒಂದು ಚದರ ಗಜ ಮಣ್ಣನ್ನು ತೆಗೆದು ಏರಿಯ ಮೇಲೆ ಹಾಕುವುದಕ್ಕೆ ಎಷ್ಟು ದುಡ್ಡು ಖರ್ಚಾಗುತ್ತದೆ ಎನ್ನುವುದನ್ನು ಸಹ ನಾವು ಲೆಕ್ಕಹಾಕಿ ನೋಡ ಬಹುದು. ಈಗ ನಾವು 3-4 ರೂಪಾಯಿಗಳ ಕೂಲಿಯನ್ನು ಕೊಟ್ಟು ಮಾಡಿಸಿದರೆ ಸುಮಾರು 40,000 ರೂಪಾಯಿಗಳು ಆಗುತ್ತದೆ. ಇಷ್ಟು ಹಣವನ್ನು ನಾವು ಖರ್ಚುಮಾಡಿದಾಗ ಒಂದು ಯೂನಿಟ್‌ನಷ್ಟು ವಾಟರ್ ನಿಂತು ಕೊಳ್ಳುತ್ತದೆ. ಒಂದು ಎಕರೆಗೆ ಮಾಡಿಸಬೇಕಾದರೆ ಎಷ್ಟು ಆಗುತ್ತದೆ ಎಂದು ನಾವು ಲೆಕ್ಕ ಹಾಕುವುದಾದರೆ, ಒಂದು ಎಕರೆಗೆ 4800 ಚದರ ಗಜ. ನಾವು ಒಂದು ಯೂನಿಟ್‌ಗೆ ಅಷ್ಟು ಹಣ ವನ್ನು ಕೊಟ್ಟು ಎಕರೆಗಟ್ಟಲೆ ಮಾಡಿಸುವುದರಿಂದ, ಅದು ಫೀಜಿಬಲ್ ಆಗುತ್ತದೆಯೇ ಎನ್ನುವ ಬಗ್ಗೆ ಕೂಡ ನಾವು ಆಲೋಚನೆ ಮಾಡಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ — ಕೊನೆಯ ಪಕ್ಷ ಕೆರೆಯಲ್ಲಿರತಕ್ಕ ಸಿಲ್ಟನ್ನು ತೆಗೆಯುವುದಕ್ಕೆ ಸಾಧ್ಯ ವಾಗುವುದಿಲ್ಲ ಎಂದು ಹೇಳಿದರೆ ಹೇಗೆ?

ಶ್ರೀ ಎಚ್.ಎಂ. ಚಿನ್ನಬಸಪ್ಪ.— ಕೆರೆಯ ಒಳಗಡೆ ಒಂದು ಎಕರೆಯಲ್ಲಿ ಹೂಳು ತೆಗೆಸಬೇಕಾದರೆ 40 ಸಾವಿರ ರೂಪಾಯಿಗಳು ಖರ್ಚಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.— ನಾನು ಒಂದು ಸಲಹೆ ಕೊಡುತ್ತೇನೆ. ಅದು ಎಕನಾಮಿಕ್ ಆಗಲೀ ಅನ್ ಎಕನಾಮಿಕ್ ಆಗಲೀ ಸಿಲ್ಟ್‌ಅನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡಬೇಕು.

SRI H.M. CHANNABASAPPA.— Supposing you are in my position here would you agree to order an expenditure of Rs 40,000 just to increase an unit of water. I am sure you will not do that.

ಶ್ರೀ ಎಸ್. ಬಂಗಾರಪ್ಪ — ಸ್ವಾಮಿ ಕನಿಷ್ಠ ಪಕ್ಷ ಸದ್ಯಕ್ಕೆ ಒಂದು ಸಲಹೆ ಮಾಡುತ್ತೇನೆ. ಅದನ್ನಾದರೂ ಒಪ್ಪಿಕೊಳ್ಳಿ. ಕೆರೆಗಳಲ್ಲಿ ಹೂಳು ತುಂಬಿರುತ್ತದೆ. ನೀರು ನಿಲ್ಲುವುದಿಲ್ಲ. 100 ಎಕರೆ 200 ಎಕರೆ ಅಚ್ಚುಕಟ್ಟು ಇರುವಂಥಾ ಕಡೆಗೂ ನೀರು ತೆರಿಗೆಯನ್ನು ಹಾಕುತ್ತಾರೆ. ಒಂದು ಅಡಿ ವಾಟರ್ ಲೆವೆಲ್ ಸಿಕ್ಕುವುದಿಲ್ಲ, ಅಂಥಾ ಕಡೆಗೂ ಕೂಡ ನೀರಿನ ತೆರಿಗೆಯನ್ನು ಹಾಕುತ್ತಾರೆ. ನೂರಾರು ವರ್ಷಗಳ ಹಿಂದೆ ಈ ಕೆರೆಗಳನ್ನು ಕಟ್ಟಿದೆ. ಆ ಕೆರೆಗಳ ಅಚ್ಚುಕಟ್ಟುಗಳನ್ನು ರಿವೈಜ್ ಮಾಡಿಲ್ಲ. ಆದರೆ ಹಣಮಾತ್ರ ವಸೂಲು ಮಾಡುತ್ತಿದ್ದಾರೆ.

SRI H.M. CHANNABASAPPA.— You may raise that point and it will be examined. I can see your point at a time when the tank had certain capacity and you fix the atchkat. That stands to reason.

ಶ್ರೀ ಎಸ್. ಬಂಗಾರಪ್ಪ.— ಸ್ವಾಮಿ ನಾನು ಮಲೆನಾಡಿನಲ್ಲಿರತಕ್ಕ ಎಲ್ಲಾ ಜಿಲ್ಲೆಗಳ ಬಗ್ಗೆಯೂ ಹೇಳುತ್ತೇನೆ. ಈ ನೀರು ತೆರಿಗೆಯನ್ನು ಹಾಕುವಾಗ ಯಾವ ಬೇಸಿಸ್ ಮೇಲೆ ಹಾಕುತ್ತಾರೆ ಎನ್ನುವುದನ್ನು ನಾನು ಕೇಳಬೇಕಾಗಿದೆ.

ಶ್ರೀ ಎಸ್.ಬಿ. ನಾಗರಾಳ್.— ಕೆರೆಗಳಲ್ಲಿರತಕ್ಕ ನೀರು ಸಂಗ್ರಹ ಎಷ್ಟು, ಮತ್ತು ಆ ಕೆರೆಗಳ ಹಿಂಭಾಗದಲ್ಲಿ ಆಗತಕ್ಕ ನೀರಾವರಿ ಪ್ರದೇಶ ಎಷ್ಟು ಎಕರೆ ಎಂಬುದನ್ನು ಎಗ್ಜಿಕ್ಯುಟೀವ್ ಇಂಜಿನಿಯರ್ ನೋಡಿ ಡಿಕ್ಲರೇಷನ್ ಮಾಡಬೇಕು ಎಂದು ಇದೆ ಮತ್ತು ಇರಿಗೇಷನ್ ಆಕ್ಟ್ ಪ್ರಕಾರವಾಟರ್ ರೇಟನ್ನು ವಸೂಲು ಮಾಡುವ ಬಗ್ಗೆ ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದೆ. ಈ ರೀತಿ ವಾಟರ್ ರೇಟ್ ವಸೂಲು ಮಾಡುವುದರಲ್ಲಿ ಏನಾದರೂ ವ್ಯತ್ಯಾಸವಾಗಿದ್ದರೆ ಅದನ್ನು ನಮ್ಮ ಗಮನಕ್ಕೆ ತಂದರೆ ಅದನ್ನು ವಿಚಾರ ಮಾಡುವುದಕ್ಕೆ ನಾವು ಹಿಂದೆ ಮುಂದೆ ನೋಡುವುದಿಲ್ಲ.

ಶ್ರೀ ಕಾಗೋಡುತಿಮ್ಮಪ್ಪ.— ತಾವು ನಮ್ಮ ಮಲೆನಾಡಿಗೆ ಯಾವುದಾದರೂ ಒಂದು ತಾಲ್ಲೂಕಿಗೆ ನಿಮ್ಮ ಅಧಿಕಾರಿಗಳನ್ನು ಕಳುಹಿಸಿ ಟ್ಯಾಂಕ್ ಕೆಪಾಸಿಟಿ ಎಷ್ಟು ಇದೆ. ಅಚ್‌ಕಟ್ ಎಷ್ಟು ಇದೆ, ಯಾವರೀತಿ ವಾಟರ್ ರೇಟ್ ಫಿಕ್ಸ್ ಅಪ್ ಮಾಡಿದ್ದಾರೆ ಎಂಬುದನ್ನು ವರದಿಯನ್ನು ತರಿಸಿಕೊಂಡು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಎಸ್.ಬಿ. ನಾಗರಾಳ್.— ನಾನು ತಮ್ಮ ತಾಲ್ಲೂಕಿಗೆ ಒಂದು ವಾರ ಪ್ರವಾಸ ಹಾಕಿಕೊಂಡು ಬಂದು ಅದನ್ನು ಯಾವರೀತಿ ಸೆಟ್ ರೈಟ್ ಮಾಡಬಹುದು ಎಂಬುದನ್ನು ನೋಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ನೀರಾವರಿ ಯೋಜನೆಯ ಬಗ್ಗೆ ನಾನು ಇಷ್ಟು ವಿಷಯಗಳನ್ನು ಪ್ರಮುಖವಾಗಿ ಪ್ರಸ್ತಾಪಮಾಡಿ ಮಾನ್ಯ ಸಚಿವರು ಮಂಡಿಸಿರುವ ಬೇಡಿಕೆಗಳನ್ನು ವಿರೋಧ ಮಾಡುವುದಕ್ಕೆ ಕೆಲವು ಕಾರಣಗಳನ್ನು ನಾನು ಕೊಟ್ಟಿದ್ದೇನೆ. ಮಾನ್ಯ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳಲ್ಲಿ ಇರುವ ಒಳ್ಳೆಯ ಸಲಹೆಗಳನ್ನು ನಾನು ಸ್ವಾಗತ ಮಾಡಿದ್ದೇನೆ. ಇಷ್ಟು ವಿಷಯಗಳನ್ನು ಹೇಳಿ ಮಾನ್ಯ ಸಚಿವರು ಪ್ರಮುಖವಾದ ಕೆಲವು ವಿಚಾರಗಳ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡುತ್ತಾರೆ ಎಂದು ನಾನು ನಿರೀಕ್ಷಣೆ ಮಾಡುತ್ತೇನೆ. ಮತ್ತು ಮಲೆನಾಡು ಭಾಗದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಫುಟ್ ಬ್ರಿಡ್ಜ್‌ಗಳನ್ನು ಕಟ್ಟುವ ಬಗ್ಗೆ ಒಂದು ಯೋಜನೆಯನ್ನು ಹಾಕಿಕೊಂಡು ಯಾವ ಯಾವ ತಾಲ್ಲೂಕಿನಲ್ಲಿ ಈ ಫುಟ್ ಬ್ರಿಡ್ಜ್ ಗಳನ್ನು ಅವಶ್ಯಕವಾಗಿ ಕಟ್ಟಬೇಕು ಎನ್ನತಕ್ಕಂಥಾ ಅಂಕಿ ಅಂಶಗಳನ್ನು ತರಿಸಿಕೊಂಡು ಅದಕ್ಕೆ ಒಂದು ಯೋಜನೆಯನ್ನು ತಯಾರು ಮಾಡಬೇಕು ಆ ಕೆಲಸವನ್ನು ಮಾಡಿಕೊಡಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರಿಗೆ ಈ ಚರ್ಚೆಗೆ ಉತ್ತರ ಕೊಡುವುದಕ್ಕೆ ಎಷ್ಟು ಕಾಲಬೇಕಾಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಅದು ಮಾನ್ಯ ಸದಸ್ಯರ ಚರ್ಚೆಯ ಮೇಲೆ ಅವಲಂಬಿಸಿದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಶ್ರೀಮಾನ್ ಚನ್ನಬಸಪ್ಪನವರು ಬಹಳ ದೀರ್ಘವಾದ ಭಾಷಣ ಮಾಡುತ್ತಾರೆ. ಆದ್ದರಿಂದ ಇವೊತ್ತು ಈ ಬೇಡಿಕೆಯ ಮೇಲೆ ಚರ್ಚೆಯನ್ನು ಮುಗಿಸೋಣ ನಾಳೆ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ.

ಅಧ್ಯಕ್ಷರು.— ಅದು ಆಗುವುದಿಲ್ಲ ಇವೊತ್ತು ಒಂದು ಗಂಟೆಗೆ ಈ ಡಿಮ್ಯಾಂಡ್ ಮುಗಿಯಬೇಕು. ಸೋಮವಾರ ಮುಖ್ಯ ಮಂತ್ರಿಗಳ ಬೇಡಿಕೆ ಇದೆ. ಪಾರ್ಟಿ ವಿಪ್‌ಗಳವರು ಎಲ್ಲಾ ಸದಸ್ಯರ ಹೆಸರನ್ನೂ ಸೇರಿಸಿ ಪಟ್ಟಿ ಕಳುಹಿಸುತ್ತಾರೆ. ಕೊನೆಗೆ ನಮಗೆ ಏನು ಕಷ್ಟ ಬರುತ್ತದೆ ಎಂದರೆ ಯಾರನ್ನು ಬಿಟ್ಟರೂ ಸಹ ನಿಷ್ಠೂರ ಬರುತ್ತದೆ. ಎಲ್ಲಾ ಡಿಮ್ಯಾಂಡ್‌ಗಳ ಮೇಲೂ ಎಲ್ಲಾ ಮಾನ್ಯ ಸದಸ್ಯರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ ಕೆಲ ಕೆಲವು ಮಾನ್ಯ ಸದಸ್ಯರ ಕೆಲ ಕೆಲವು ಡಿಮ್ಯಾಂಡುಗಳ ಮೇಲೆ ಮಾತನಾಡತಕ್ಕ ಅವಕಾಶವನ್ನು ಕಲ್ಪಿಸಿಕೊಳ್ಳುವಂತಹ ಸಂಪ್ರದಾಯವನ್ನು ಅನುಸರಿಸಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಈಗ ಎಲ್ಲಾ ಮಾನ್ಯಸದಸ್ಯರೂ ಕೂಡ ೧೦ ನಿಮಿಷ ಮಾತ್ರ ಮಾತನಾಡಿ ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಈಗ ಮಾನ್ಯ ಸದಸ್ಯರಾದ ಶ್ರೀ ಸಿದ್ದಮಾದಯ್ಯನವರು ತಮ್ಮ ಭಾಷಣವನ್ನು ಪ್ರಾರಂಭಿಸಬಹುದು.

† ಶ್ರೀ ಎಂ ಸಿದ್ದಮಾದಯ್ಯ (ಕೊಳ್ಳೆಗಾಲ).— ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ಈ ಮಾನ್ಯ ಸಭೆಯಮುಂದೆ ಮಾನ್ಯ ಲೋಕೋಪಯೋಗಿ ಶಾಖೆಯ ಸಚಿವರು ತಂದಿರತಕ್ಕ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಆಡಬೇಕೆಂದು ನಾನು ನಿಂತಿದ್ದೇನೆ. ಮೊಟ್ಟ ಮೊದಲು ಮೈನರ್ ಇರಿಗೇಷನ್ ವಿಚಾರದಲ್ಲಿ ಹೇಳಬೇಕಾದರೆ ನಮ್ಮ ಕ್ಷೇತ್ರದಲ್ಲಿ ಸುಮಾರು ೩೦ ಕೆರೆಗಳು ಇದ್ದರೂಕೂಡ ಈಗ ಹೊಸ ಕೆರೆಗಳನ್ನು ನಿರ್ಮಾಣ ಮಾಡಬೇಕು ಎಂದು ನಾನು ಈಗಾಗಲೇ ಸರ್ಕಾರದವರನ್ನು ಕೇಳಿಕೊಂಡಿದ್ದೇವೆ. ಹೊಸಹಳ್ಳಿ ಕೆರೆ ಒಂದು ಜೋಡಿಹಳ್ಳಿ ಕೆರೆ ಇನ್ನೊಂದು ಈ ಎರಡು ಕೆರೆಗಳನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಂಡು ಇದಕ್ಕೆ ಸರ್ಕಾರದವರು ಒಪ್ಪಿಗೆ ಕೊಟ್ಟಿದ್ದರೂ ಸಹ ಇನ್ನೂ ಅದರ ಕೆಲಸಕಾರ್ಯಗಳು ನಡೆಯುತ್ತಿಲ್ಲ. ಹಾಲಿ ಇರತಕ್ಕ ಕೆಲವು ಕೆರೆಗಳಲ್ಲಿ ಹೂಳು ಹೂತು ಹೋಗಿರುವ ಕಾರಣ ಆಳ ತೆಗೆಸಿ ಆ ಕೆರೆಗಳನ್ನು ಜೀರ್ಣೋದ್ಧಾರ ಮಾಡಿದರೆ ವ್ಯವಸಾಯಗಾರರಿಗೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಒಂದು ಸಾರಿ ನೀರು ಬಂದರೆ ೩ ಬಾರಿ

ತುಂಬಿದರೆ ಬೆಳೆಮಾಡಲಿಕ್ಕೆ ಅನುಕೂಲವಾಗುತ್ತದೆ. ೨ ಸಾರಿ ತುಂಬುವ ರೀತಿಯಲ್ಲಾದರೂ ಆಳ ತೆಗೆಸಿ ಕೊಟ್ಟರೆ ರೈತರಿಗೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಪ್ರಾರ್ಥಿಸಿ ಕೊಳ್ಳುತ್ತೇನೆ

[MR. DEPUTY SPEEKAR in the Chair.]

ಇನ್ನು ಸೇತುವೆಗಳ ವಿಚಾರ ಏನೆಂದರೆ ಸೇತುವೆಗಳನ್ನು ನಿರ್ಮಾಣ ಮಾಡಲಿಕ್ಕೆ ನಮ್ಮ ಮಾನ್ಯ ಮಂತ್ರಿಗಳು ಒಂದು ದೊಡ್ಡ ಯೋಜನೆಯನ್ನು ಹಾಕಿಕೊಂಡು ಎಲ್ಲಾ ಕಡೆಯೂ ಸೇತುವೆಗಳನ್ನು ನಿರ್ಮಾಣ ಮಾಡುತ್ತೇವೆ ಎಂದು ಬಹಳಷ್ಟು ದಿನಗಳಿಂದಲೂ ಹೇಳುತ್ತಾ ಇದ್ದಾರೆ. ಆದರೆ ಈಗ ಕೆಲಸ ಶುರು ಹಚ್ಚಿಸಿರುವ ಪ್ರಕಾರ ನಮ್ಮ ಕ್ಷೇತ್ರದಲ್ಲಿ ಈಗ ಮುಳ್ಳೂರು ಕೊಳ್ಳೇಗಾಲ ಸೇತುವೆ ಮಾಡಲಿಕ್ಕೆ ಸರ್ಕಾರ ಆಜ್ಞೆ ಹೊರಡಿಸಿದೆ. ಹೊನ್ನಾವಳಿ ಪ್ರದೇಶದಲ್ಲಿ ಸಣ್ಣ ಸಣ್ಣ ಸೇತುವೆಗಳನ್ನು ನಿರ್ಮಿಸಬೇಕಾಗಿದೆ ಮತ್ತು ಅಗ್ರಹಾರ ಒಣ್ಣಸರ್ಜೆ ಪ್ರದೇಶದಲ್ಲೂ ಸಹ ಸೇತುವೆಗಳನ್ನು ನಿರ್ಮಿಸಬೇಕಾಗಿದೆ. ಅದನ್ನು ಸಂಬಂಧಪಟ್ಟ ಮಂತ್ರಿಗಳು ಜಾಗತೆಯಾಗಿ ಮಾಡಿಸಿಕೊಡಬೇಕು ಎಂದು ಈ ಸಂದರ್ಭದಲ್ಲಿ ಅಧ್ಯಕ್ಷರ ಮೂಲಕ ಅವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಮತ್ತೆ ರೂರಲ್ ವಾಟರ್ ಸಪ್ಲೈನಲ್ಲಿ ಹ್ಯಾಂಡ್ ಪಂಪನ್ನು ನಮ್ಮ ಕ್ಷೇತ್ರದಲ್ಲಿ ಸುಮಾರಾಗಿ ನೂರಾರು ಹಾಕಿದ್ದಾರೆ. ಅದು ಯಾವುದು ಸಹ ಸರಿಯಾದ ರೀತಿಯಲ್ಲಿ ವರ್ಕ್ ಮಾಡುತ್ತಾ ಇಲ್ಲ. ವಾಟರ್ ಪಂಪ್ ಹಾಕಿದ ಒಂದೇ ತಿಂಗಳಲ್ಲಿ ಕೆಟ್ಟು ಹೋಗಿ ಕುಡಿಯುವ ನೀರಿಗೆ ತೊಂದರೆಯಾಗಿದೆ. ಆದುದರಿಂದ ತಕ್ಷಣ ರೂರಲ್ ವಾಟರ್ ಸಪ್ಲೈನವರು ಪಂಪನ್ನು ಜಾಗ್ರತೆಯಾಗಿ ದುರಸ್ತಿಮಾಡಿ ಜನಗಳಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಮತ್ತೊಮ್ಮೆ ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ರಸ್ತೆಗಳ ವಿಚಾರ ತೆಗೆದುಕೊಂಡರೆ, ನಮ್ಮ ಕ್ಷೇತ್ರದಲ್ಲಿ ಸುಮಾರು ೫೦ ಮೈಲಿ ಪ್ರದೇಶವನ್ನು ಪಿಡಬ್ಲ್ಯುಡಿ ಯವರು ಹೊಸದಾಗಿ ತೆಗೆದುಕೊಂಡಿದ್ದಾರೆ. ಮೈಸೂರಿನಿಂದ ಕೊಳ್ಳೆಗಾಲದವರೆಗೂ ಇರತಕ್ಕ ರಸ್ತೆಗಳು ಬಹಳ ಕೆಟ್ಟು ಹೋಗಿದೆ. ಬಸ್‌ನಲ್ಲಿ ಪ್ರಯಾಣ ಮಾಡುವವರಾಗಲೀ ಗಾಡಿಯಲ್ಲಿ ಪ್ರಯಾಣ ಮಾಡುವವರಾಗಲೀ ಬಹಳ ಕಷ್ಟಪಡುತ್ತಿದ್ದಾರೆ. ಬಸ್‌ನಲ್ಲಿ ಹೋಗುವವರು ಹೇಗೆ ಈ ರೋಡಿನಲ್ಲಿ ಹೋಗುವುದು ಎಂದು ಆಗಾಗ್ಗೆ ತಮ್ಮ ತೊಂದರೆಯನ್ನು ತಿಳಿಸಿದ್ದಾರೆ ಆದರೂ ಕೂಡ ಮಾನ್ಯ ಪಿಡಬ್ಲ್ಯುಡಿ ಮಂತ್ರಿಗಳು ಆ ಕಡೆ ಗಮನಕೊಟ್ಟಿಲ್ಲ. ಟಿ. ನರಸೀಪುರದಿಂದ ಕೊಳ್ಳೆಗಾಲ, ಯಳಂದೂರಿನಿಂದ ಚಾಮರಾಜನಗರದ ಕಡೆಗೆ ಹೋಗತಕ್ಕ ರಸ್ತೆಗಳು ಕೆಟ್ಟು ಹೋಗಿರುತ್ತವೆ. ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ ಒಂದೊಂದು ತಾಲ್ಲೂಕಿನಲ್ಲಿ ಸ್ವಲ್ಪ ಜೆಲ್ಲಿ ಹಾಕಿ ಸ್ವಲ್ಪ ಟಾರ್ ಹಾಕಿ ಮುಚ್ಚಿಬಿಡುತ್ತಾರೆ. ಟಿ. ನರಸೀಪುರದಲ್ಲಿ ದಪ್ಪ ಜೆಲ್ಲಿ ಹಾಕುತ್ತಾರೆ ಕೊಳ್ಳೆಗಾಲದ ಕಡೆ ಸಣ್ಣ ಜೆಲ್ಲಿ ಹಾಕಿ ಟಾರ್ ಹಾಕುತ್ತಾರೆ. ಏಕಮುಖವಾಗಿ ಒಂದೇ ರೀತಿಯಾಗಿ ರಸ್ತೆಗಳನ್ನು ನಿರ್ಮಾಣ ಮಾಡುವಂತೆ ಆದೇಶವನ್ನು ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಿಳಿಗಿರಿರಂಗನ ಬೆಟ್ಟದ ರೋಡು ಮತ್ತು ಚೆಟ್ಟೂರುಗಾಡನಹಳ್ಳಿ ರೋಡುಗಳ ಬಗ್ಗೆ ತಿಳುವಳಿಕೆ ಕೊಟ್ಟರೂ ಸಹ ಏನೂ ಕೆಲಸ ಆಗಿಲ್ಲ ಬಿಳಿಗಿರಿರಂಗನಬೆಟ್ಟದ ರಸ್ತೆಯನ್ನು ಮತ್ತು ಸಣ್ಣ ಸಣ್ಣ ರಸ್ತೆಗಳನ್ನು ಬಿಸಿಲು ಕಾಲದಲ್ಲಿ ಚೆನ್ನಾಗಿ ನಿರ್ಮಾಣ ಮಾಡಿ ಟಾರನ್ನು ಹಾಕಿಸಬೇಕು ಎಂದು ಅಧ್ಯಕ್ಷರ ಮುಖಾಂತರ ತಮ್ಮನ್ನು ಕೇಳಿ ಕೊಳ್ಳುತ್ತೇನೆ.

ರೂರಲ್ ವಾಟರ್ ಸಪ್ಲೈನಲ್ಲಿ ಬಹಳ ಅನ್ಯಾಯವಾಗಿದೆ. ಪಂಪ್ ಹಾಕಿರತಕ್ಕುದ್ದು ಒಂದು ತಿಂಗಳೂ ಸಹ ವರ್ಕ್ ಮಾಡುವುದಿಲ್ಲ ಹಾಕಿದ ಒಂದು ತಿಂಗಳಲ್ಲೇ ಫೈಲ್ ಆಗಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ದಯವಿಟ್ಟು ನಮ್ಮ ಸರ್ಕಾರದವರು ಬೇಗನೆ ವ್ಯವಸ್ಥೆ ಮಾಡಿಕೊಡಬೇಕು ಎಂದು ಮತ್ತೊಮ್ಮೆ ಪ್ರಾರ್ಥಿಸಿಕೊಳ್ಳುತ್ತೇನೆ

ಮತ್ತೆ ನಮ್ಮ ತಾಲ್ಲೂಕಿನಲ್ಲಿ ರಸ್ತೆಗಳ ವಿಚಾರವಾಗಿ ಮತ್ತು ಲಿಫ್ಟ್ ಇರಿಗೇಷನ್ ವಿಚಾರದಲ್ಲಿ ಒಂದೆರಡು ಮಾತನ್ನು ಹೇಳಬೇಕು ಸತ್ತೇಗಾಲ ಮತ್ತು ಸರಗೂರು ಕಡೆ ಒಂದೆರಡು ಮೂರು ಲಿಫ್ಟ್ ಇರಿಗೇಷನ್ ಇವೆ. ಮೂರು ವರ್ಷಗಳಿಂದ ಅಸಿಸ್ಟೆಂಟ್ ಇಂಜಿನಿಯರ್ ಯಾವ ಕೆಲಸಕಾರ್ಯ ಮಾಡದೆ

೩ ವರ್ಷಗಳಿಂದಲೂ ರೈತರಿಗೆ ಸಹಾಯ ಮಾಡದೆ ನೀರು ಒದಗಿಸುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಚೀಫ್ ಇಂಜನಿಯರ್ ನೀಲಕಂಠಪ್ಪನವರು ೨-೩ ಬಾರಿ ಬಂದು ಬೇಗ ಮಾಡದೇ ಹೋದರೆ ಆಕ್ಷನ್ ತೆಗೆದುಕೊಳ್ಳುತ್ತೇನೆ ಎಂದು ಹೇಳಿದರೂ ಸಹ ಇದುವರೆಗೂ ನೀರು ಕೊಡಲಿಕ್ಕೆ ಅವಕಾಶ ಮಾಡಿಕೊಟ್ಟಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.— ಹಾಗಾದರೆ ಅವರು ಮಂತ್ರಿಗಳಿಗೆ ಹತ್ತಿರದವರಾಗಿರಬಹುದು.

ಶ್ರೀ ಎಂ. ಸಿದ್ದಮಾದಯ್ಯ.— ಅಲ್ಲಿರತಕ್ಕ ಅಸಿಸ್ಟೆಂಟ್ ಇಂಜಿನಿಯರ್ ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಅಲ್ಲಿ ಮಹದೇಶ್ವರ ಶುಗರ್ ಫ್ಯಾಕ್ಟರಿ ಬಂದಿದೆ. ಆ ಪ್ರದೇಶದಲ್ಲಿ ಕಬ್ಬು ಹಾಕಿರಿ ಎಂದು ಉತ್ತೇಜನ ಕೊಡುತ್ತಿದ್ದಾರೆ ಮತ್ತು ಸಾಲವನ್ನು ಕೊಟ್ಟಿದ್ದಾರೆ. ಆದರೆ ನೀರು ಇಲ್ಲ ಸುಮಾರು ೬ ತಿಂಗಳಿನಿಂದ ನೀರನ್ನು ಕೊಡುತ್ತಾ ಇಲ್ಲ. ಆದ್ದರಿಂದ ಜಾಗತ್ರೆಯಾಗಿ ನೀರನ್ನು ಸಪ್ಲೈ ಕೊಡಿಸಿ ಕೊಡಬೇಕು ಎಂದು ಸರ್ಕಾರವನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ನಮ್ಮ ಮಾನ್ಯ ಮಂತ್ರಿಗಳೂ ಸಹ ಇದರ ಬಗ್ಗೆ ಬಹಳ ಜಾಗ್ರತೆ ಕೆಲಸ ಮಾಡಲಿಕ್ಕೆ ಆಗಾಗ್ಗೆ ಅಪ್ಪಣೆ ಕೊಡುತ್ತಿದ್ದರೂ ಸಹ ಅಲ್ಲಿರತಕ್ಕ ಇಂಜನಿಯರ್ಸ್ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡುತ್ತಾ ಇಲ್ಲ ಎಷ್ಟು ಹೇಳಿದರೂ ಇವತ್ತು ಮಾಡು ತ್ತೇನೆ ನಾಳೆ ಮಾಡುತ್ತೇನೆ ಎಂದು ಏನೂ ಮಾಡದೇ ನಮಗೆ ತೊಂದರೆ ಕೊಡುತ್ತಿದ್ದಾರೆ. ಅವರ ಬಗ್ಗೆ ಸಹ ಕೂಲಂಕುಷವಾಗಿ ರಿಪೋರ್ಟ್ ತರಿಸಿಕೊಳ್ಳಬೇಕು ಮತ್ತು ಇಷ್ಟು ದಿನ ಏನು ಮಾಡುತ್ತಿದ್ದಿರಿ ಎಂದು ಕೇಳಬೇಕು ೩ ವರ್ಷದಿಂದ ಕೆಲಸ ನಿಂತು ಹೋಗಿರುತ್ತದೆ. ಆದುದರಿಂದ ತಾವು ಇಲ್ಲಿಂದ ಡೈರಕ್ಷನ್ ಕೊಟ್ಟು ಉತ್ತಮ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ಆದೇಶಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳಿ ನನಗೆ ಹೆಚ್ಚುವೇಳೆ ಇಲ್ಲದ ಕಾರಣ ೧೦ ನಿಮಿಷ ಭಾಷಣ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಪಿಡಬ್ಲ್ಯೂಡಿ ಸಚಿವರು ಮತ್ತು ಮೈನರ್ ಇರಿಗೇಷನ್ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸಿ, ಈ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ ಮಾನ್ಯ ಮಂತ್ರಿಗಳಾದ ಚನ್ನಬಸಪ್ಪ ನವರು ದಕ್ಷರು ನಿಸ್ಪೃಹರು ಎನ್ನುವ ಮಾತನ್ನು ಹಿಂದಿನಿಂದ ಕೇಳಿದ್ದೇನೆ, ಅನೇಕ ಮಿತ್ರರೂ ಸಹ ಮಾತ ನಾಡಿದ್ದಾರೆ. ಅವರ ಬಗ್ಗೆ ನನಗೆ ಗೌರವ ಇದೆ ಅವರು ದಕ್ಷರು ಮತ್ತು ನಿಸ್ಪೃಹರು-ಅವರ ಪ್ರಭಾವ ಇಲಾಖೆ ಮೇಲೆ ಪೂರ್ಣವಾಗಿ ಬಿದ್ದು ಉತ್ತಮವಾದ ಉಪಯುಕ್ತವಾದ ಕೆಲಸ ಆಗುತ್ತದೆ ಎಂದು ನಾನು ನಿರೀಕ್ಷಣೆ ಮಾಡಿದ್ದೆ. ಆದರೆ ತಮ್ಮ ಛಾಯೆ ಕೂಡ ಇಲಾಖೆ ಮೇಲೆ ಬೀಳಲಿಲ್ಲ ಪ್ರಭಾವ ಅಂತೂ ಬೀಳಲೇ ಇಲ್ಲ. ಇದು ಬಹಳ ದುರದೃಷ್ಟ ಸಂಗತಿ.

ಶ್ರೀ ಕೋಣಂದೂರು ಲಿಂಗಪ್ಪ.— ಛಾಯೇ ಬೀಳುವುದಕ್ಕೆ ಅವರಿಗೆ ನೆರಳೇ ಇಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.— ಮಾನ್ಯ ಅಧ್ಯಕ್ಷರೇ ಹೊಸ ರಸ್ತೆಗಳ ನಿರ್ಮಾಣ ಮತ್ತು ಹಳೇ ರಸ್ತೆಗಳ ರಿಪೇರಿ ಬಗ್ಗೆ ಖರ್ಚಾಗತಕ್ಕ ಹಣವನ್ನು ನಿಮ್ಮ ಅಧಿಕಾರಿಗಳು ದಕ್ಷತೆಯಿಂದ ಮತ್ತು ನಿಸ್ಪೃಹತೆ ಯಿಂದ ಖರ್ಚುಮಾಡಿದ್ದಾರೆಯೇ ಒಂದು ವರ್ಷಕ್ಕೆ ನೀವು ಕೊಡತಕ್ಕ ಹಣದಿಂದ ೨ ವರ್ಷದ ಕೆಲಸಗಳು ಆಗುತ್ತವೆ ಕೆಳಮಟ್ಟದಲ್ಲಿ ಬಹಳ ಹಣ ಸೋರಿಹೋಗುತ್ತಿದೆ ಬಹಳ ಅನ್ಯಾಯವಾಗುತ್ತಿದೆ ನಿರೀಕ್ಷಿಸಿದ ಮಟ್ಟದಲ್ಲಿ ಕೆಲಸ ಕಾರ್ಯಗಳು ನಡೆಯುತ್ತಾ ಇಲ್ಲ. ನೀವು ಓಡಾಡುವ ದೊಡ್ಡ ದೊಡ್ಡ ರಸ್ತೆಗಳಲ್ಲಿ, ನೀವು ನೋಡಲಿಕ್ಕೆ ಹೋಗುವ ಕಡೆ ಒಳ್ಳೆಯ ಕ್ವಾಲಿಟಿ ಜೆಲ್ಲಿಯನ್ನು ಹಾಕುತ್ತಾರೆ ಬೇರೆ ಕಡೆ ಇನ್‌ಫೀರಿ ಯರ್ ಜೆಲ್ಲಿಯನ್ನು ಹಾಕುತ್ತಾರೆ. ಅದನ್ನು ತಾವು ವೆರಿಫೈ ಮಾಡಬೇಕು ಒಳ್ಳೆಯ ಗ್ರಾನೈಟ್ ಕಲ್ಲನ್ನು ಹಾಕಿದರೆ ೪-೬ ವರ್ಷ ರೋಡು ಬರುತ್ತದೆ ಗಟ್ಟಿ ಇರುತ್ತದೆ ಹಾಕಬಾರದ ಕಲ್ಲನ್ನು ಹಾಕಿ ರಾತ್ರೋ ರಾತ್ರಿ ಬಿಲ್ ಕೊಟ್ಟು ಬೆಳಿಗ್ಗೆ ಮಣ್ಣನ್ನು ಮುಚ್ಚಿರುತ್ತಾರೆ ಈ ರೀತಿಯಾದರೆ ಖರ್ಚಾಗತಕ್ಕ ಹಣ ದೇಶದ ಹಿತದೃಷ್ಟಿಯಿಂದ ಹೆಚ್ಚು ಉಪಯುಕ್ತವಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡು ತ್ತೇನೆ. ಬೆಂಗಳೂರು ಇಂತಹ ದೊಡ್ಡ ಪಟ್ಟಣದ ಬಗ್ಗೆ ನಾನು ಹೇಳುತ್ತಾ ಇಲ್ಲ ಸಬ್ ಡಿವಿಜನ್ ಕಡೆಗೆ ತಮ್ಮ ಗಮನಹರಿಸಬೇಕು ತಾವು ಅನಿರೀಕ್ಷಿತವಾಗಿ ಭೇಟಿಕೊಟ್ಟು ಯಾವರೀತಿ ಕೆಲಸಕಾರ್ಯಗಳು ನಡೆಯು ತ್ತಿವೆ ಎಂದು ಚೆಕ್ ಮಾಡುವುದು ಉತ್ತಮ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸ್ವಾಮಿ, ಇನ್ನು ಈ ನ್ಯಾಷನಲ್ ಹೈವೇ ಬಗ್ಗೆ ಪ್ರಸ್ತಾಪಮಾಡುವುದಾದರೆ ನನಗೆ ಬಹಳ ಸಂಕಟ ವಾಗುತ್ತದೆ ಏತಕ್ಕೆಂದರೆ ಹತ್ತಾರು ವರ್ಷಗಳ ಹಿಂದೆ ರಸ್ತೆಗಳ ಪಕ್ಕದಲ್ಲಿ ನೂರಾರು ವರ್ಷಗಳಿಂದ ಮನೆಗಳನ್ನು ಕಟ್ಟಿಕೊಟ್ಟಿದ್ದಾರೆ. ಅದೂ ಅವರು ನಿಮ್ಮ ಸರ್ಕಾರದ ಜಾಗದಲ್ಲಿ ಕಟ್ಟಿಕೊಂಡಿಲ್ಲ ನಿಮ್ಮ ಕಾರ್ಪೊರೇಷನ್

ಜಾಗದಲ್ಲಾಗಲಿ ಪಂಚಾಯ್ತಿ ಜಾಗದಲ್ಲಾಗಲಿ ಅಥವಾ ಇನ್ನು ಯಾವುದೇ ಜಾಗದಲ್ಲಾಗಲಿ ಅವರು ಅಕ್ರಮವಾಗಿ ಕಟ್ಟಿಕೊಂಡಿದ್ದರೆ ಅದನ್ನು ಆಗ ಕೆಡವಿ ಆದರೆ ಅವರು ತಮ್ಮ ಸ್ವಂತ ಜಾಗದಲ್ಲಿ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಮನೆಗಳನ್ನು ಕಟ್ಟಿಕೊಂಡಿದ್ದರೆ ಅಂಥವುಗಳನ್ನು ಕೆಡಹುವುದು ನ್ಯಾಯುವೆ ? ದರ್ಮವೆ ? ಇವತ್ತೂ ಕೂಡ ನಿಮ್ಮ ಕೆಳಮಟ್ಟದ ಅಧಿಕಾರಿಗಳು ಜನರಿಗೆ ನೋಟೀಸ್‌ಗಳನ್ನು ಕೊಟ್ಟು ಮನೆಗಳನ್ನು ಒಡೆಯುತ್ತಿದ್ದಾರೆ. ಅನೇಕ ಜನರು ನಮ್ಮಲ್ಲಿ ಬಂದು ಈ ರೀತಿ ನಮಗೆ ತೊಂದರೆ ಕೊಡುತ್ತಿದ್ದಾರೆ ಎಂದು ಹೇಳಿದ್ದಾರೆ ಆ ಮನೆಗಳು ಇವತ್ತು ಕಟ್ಟಿದವುಗಳಲ್ಲ ಅನೇಕ ವರ್ಷಗಳ ಹಿಂದೆ ಕಟ್ಟಿದವು.

11-00 A. M.

SRI H. M. CHANNABASAPPA — I have made it amply clear on the floor of the House and also I have made it amply clear to the officers not take or acquire the land belonging to private people.

ಶ್ರೀ ಕೆ. ಹೆಚ್. ಹನುಮೇಗೌಡ.— ಹಾಗದರೆ ಬಹಳ ಸಂತೋಷ ತಮಗೆ ನನ ಧನ್ಯವಾದಗಳನ್ನು ರ್ಪಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.— ಮಂತ್ರಿಗಳು ಇಲ್ಲಿ ಕುಳಿತು ಕೊಂಡು ನಗುತ್ತಾ ಈ ರೀತಿ ಹೇಳುತ್ತಾರೆ, ಆದರೆ ಅಲ್ಲಿ ಬೇಗ ಮನೆಗಳನ್ನು ಒಡೆಯಿರಿ ಎಂದು ಅಧಿಕಾರಿಗಳಿಗೆ ಹೇಳುತ್ತಾರೆ.

ಶ್ರೀ ಕೆ. ಹೆಚ್. ಹನುಮೇಗೌಡ — ತಮ್ಮನ್ನು ನಾನು ಅಕ್ಷೇಪಣೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ ತಮ್ಮ ಇಲಾಖೆಯಲ್ಲಿ ಒಳ್ಳೆಯ ಯೋಗ್ಯ ಅಧಿಕಾರಿಗಳಿದ್ದಾರೆ. ಅವರನ್ನೂ ನಾನು ಆಕ್ಷೇಪಣೆ ಮಾಡುವುದಿಲ್ಲ ಆದರೆ ಕೆಲವು ರಾಜಕೀಯ ಪುಡಾರಿಗಳು ಇದ್ದಾರೆ, ಅವರ ಜೊತೆಗೆ ಕೆಲವು ಕೆಟ್ಟ ಅಧಿಕಾರಿಗಳೂ ಕೂಡ ಸೇರಿಕೊಂಡು ತಮಗೆ ಯಾವಾಗ ಮನಸ್ಸು ಬರುತ್ತದೆ ಆಗ ಇದೇ ಸಮಯವೆಂದು ಅವರಿಗೆ ನೋಟೀಸ್ ಕೊಟ್ಟು ಹೆದರಿಸಿ ಅವರಿಂದ ದುಡ್ಡನ್ನು ಸುಲಿಯುತ್ತಿದ್ದಾರೆ, ಲೂಟಿ ಮಾಡುತ್ತಿದ್ದಾರೆ.

SRI H. M. CHANNABASAPPA.— The Honble Member has not given me one instance of that type so far. Now he is telling that this officer has done this or that.

ಶ್ರೀ ಕೆ. ಎಚ್. ಹನುಮೇಗೌಡ.— ನಾನು ಮೊದಲೇ ಹೇಳಿದೆ ಎಲ್ಲ ಅಧಿಕಾರಗಳನ್ನೂ ನಾನು ಆಕ್ಷೇಪಣೆ ಮಾಡುವುದಿಲ್ಲ ಎಂದು ಆದರೆ ಇವತ್ತು ಈ ರೀತಿಯ ಒಂದು ನೋಟಿಸನ್ನು ಕೊಟ್ಟು ಹೆದರಿಸುವ ಕೆಲಸ ನಡೆಯುತ್ತಿದೆ. ಜನರಿಗೆ ಇವರು ವಿನಾ ಕಾರಣ ತೊಂದರೆ ಕೊಡುತ್ತಿದ್ದಾರೆ.

SRI H.M. CHANNABASAPPA.—What I request the Honble Member is to hand over the information he has got regarding this matter.

ಶ್ರೀ ಕೆ. ಎಚ್. ಹನುಮೇಗೌಡ — ಕೆಲವರು ಅಧಿಕಾರಿಗಳು ದುಡ್ಡನ್ನು ವಸೂಲು ಮಾಡಿದರು. ರಾಜಕೀಯದಲ್ಲಿರುವ ಪ್ರಭಾವಶಾಲಿ ಪುಡಾರಿಗಳು ಜನರಿಂದ ಹಣವನ್ನು ಸುಲಿಗೆ ಮಾಡಿದರು.

ಶ್ರೀ ಎಚ್. ಎಂ. ಚನ್ನಬಸಪ್ಪ.— ಈ ರೀತಿ ಅಧಿಕಾರಿಗಳು ಜನರಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ನೀವು ಏತಕ್ಕೆ ಹೇಳಬಾರದಿತ್ತು ? ಇದನ್ನು ಏತಕ್ಕೆ ಪ್ರಚಾರ ಮಾಡಬಾರದಿತ್ತು ?

ಶ್ರೀ ಕೆ. ಎಚ್. ಹನುಮೇಗೌಡ.— ತಮ್ಮ ಇಲಾಖೆಯ ಕೆಲವು ಅಧಿಕಾರಿಗಳ ಮೇಲೆ ರಿಫ್ಲೆಕ್ಟ್ ಆಗುತ್ತದೆ. ತಾವು ದಯಮಾಡಿ ಇದಕ್ಕೆ ಅವಕಾಶವನ್ನು ಕೊಡಬಾರದು. ತಮ್ಮ ಇಲಾಖೆಯ ಅಧಿಕಾರಿಗಳಿಗೆ ಇನ್ನೊಂದು ಸಾರಿ ಸ್ಪಷ್ಟವಾದ ಸೂಚನೆ ಕೊಡಬೇಕು, ಸ್ವಾಮಿ ಇವತ್ತು ಏನಾಗಿದೆ ಎಂದರೆ ಅಧಿಕಾರಿಗಳಿಗೆ ರಾಜಕೀಯ ಪುಡಾರಿಗಳಿಗೆ ದುಡ್ಡಿಗೆ ಬರಬಾತು ಎಂದರೆ ತಕ್ಷಣ ಟೇಪು ಹಿಡಿದು ಅಳತೆ ಮಾಡುವುದಕ್ಕೆ ಹೋಗುತ್ತಾರೆ. ಆಗ ಜನರು ಹೆದರಿಕೊಂಡು ಇವರಿಗೆ ಕೇಳಿದಷ್ಟು ಹಣವನ್ನು ಕೊಡುತ್ತಾರೆ ಅಧಿಕಾರಿಗಳಿಗೆ ಇದೇ ಒಂದು ಆದಾಯವಾಗಿದೆ. ದುಡ್ಡನ್ನು ಜನಗಳಿಂದ ಲೂಟಿ ಮಾಡುತ್ತಿದ್ದಾರೆ. ಹಾಸನ ಜಿಲ್ಲೆಯಲಿ ಈ ರೀತಿ ನಡೆದಿದೆ. ನೀವು ೬೦ ಅಡಿ ಬಿಡಬೇಕೆಂದು ಆದೇಶ ಕೊಟ್ಟರೆ ಅವರು ೮೦ ಅಡಿ ಬಿಡಬೇಕೆಂದು ನೋಟೀಸ್ ಕೊಟ್ಟಿದ್ದಾರೆ. ಕೆಲವರಿಗೆ ಮೊನ್ನೆ ಅಂದರೆ ಈಗ್ಗೆ ೮ ದಿವಸದ ಹಿಂದೆ ಒಂದು ಮನೆ ಮಾಲೀಕರಿಗೆ ನೋಟೀಸ್ ಕೊಟ್ಟಿದ್ದಾರೆ.

SRI H. M. CHANNABASAPPA.—There is a definite Government policy. Instructions have been given accordingly.

ಶ್ರೀ ಕೆ. ಹೆಚ್. ಹನುಮೇಗೌಡ.—ನಾನು ಆವತ್ತು ಊರಿನಲ್ಲಿ ಇರಲಿಲ್ಲ.

SRI H. M. CHANNABASAPPA.—Why you did not tell me all these days. You please give that notice.

ಶ್ರೀ ಕೆ. ಹೆಚ್. ಹನುಮೇಗೌಡ.—ಬೇಕಾದರೆ ಅದನ್ನು ಸೋಮವಾರ ತಂದುಕೊಡುತ್ತೇನೆ. ಸ್ವಾಮಿ, ಈಗ ಟೇಕನ್ ಓವರ್ ರೋಡ್ಸ್ ಇವೆ. ಈ ರೋಡುಗಳ ಅಕ್ಕಪಕ್ಕದಲ್ಲಿ ಸುಮಾರು ೬೦–೭೦ ವರ್ಷಗಳ ಹಿಂದೆ ಕಟ್ಟಿದಂತಹ ಮನೆಗಳಿವೆ. ಕೆಲವು ರಸ್ತೆಗಳು ಊರಿನ ಮಧ್ಯದಲ್ಲಿ ಹೋಗುತ್ತವೆಂದು ಅಕ್ಕಪಕ್ಕದ ಮನೆಗಳನ್ನು ಒಡೆಸಿದರೆ ಇವತ್ತು ಆ ಮನೆಯ ಮಾಲೀಕರಿಗೆ ತೊಂದರೆಯಾಗುತ್ತದೆ. ಅವರಿಗೆ ಏನು ಪರಿಹಾರವನ್ನು ಕೊಡುತ್ತೀರಿ ?

ಶ್ರೀ ಹೆಚ್ ಎಂ. ಚನ್ನಬಸಪ್ಪ.—ಪಿ.ಡಬ್ಲ್ಯು.ಡಿ ಗೆ ೧೦–೨೦ ವರ್ಷಗಳ ಹಿಂದೆ ತೆಗೆದುಕೊಂಡಿದೆ. ಇದು ಪ್ರೈವೇಟ್ ಲ್ಯಾಂಡೇ ಅಥವಾ ಗೌರ್ನಮೆಂಟ್ ಲಾಂಡೇ ಎಂದು ನೋಡಿ ಕ್ರಮ ಕೈಗೊಳ್ಳುತ್ತೇವೆ Government land is Government land and private land is private land.

ಶ್ರೀ ಕೆ. ಹೆಚ್. ಹನುಮೇಗೌಡ.—ಕಾಂಪನ್‌ಸೇಷನ್ ಗೊತ್ತು ಮಾಡಿ. ೨ನೇಯದು ಕೆಲವು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಧ್ಯಭಾಗದಲ್ಲಿ ಈ ನ್ಯಾಷನಲ್ ಹೈವೇಸ್ ಹೋಗುತ್ತವೆ. ಅಂಥ ಕಡೆಗಳಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸಿ ಕೊಂಡಿದ್ದಾರೆ. ಅವುಗಳನ್ನು ಇವತ್ತು ಒಡೆಸುವುದಕ್ಕೆ ಹೋದರೆ ಜಾಸ್ತಿ ದುಡ್ಡು ಕಾಂಪನ್‌ಸೇಷನ್ ಕೊಡಬೇಕಾಗುತ್ತದೆ. ಆದುದರಿಂದ ಇನ್ನೂ ಸ್ವಲ್ಪ ಜಾಸ್ತಿ ಹಣ ಖರ್ಚಾದರೂ ಚಿಂತೆ ಇಲ್ಲ. ಅಂಥ ಪಟ್ಟಣಗಳಲ್ಲಿ ಬರುವ ರೋಡ್‌ಗಳನ್ನು ಡೀವಿಯೇಷನ್ ರೋಡ್ಸ್ ಮಾಡಿದರೆ ಒಳ್ಳೆಯದು ಎಂದು ನನ್ನ ಸಲಹೆ. ಸ್ವಾಮಿ ನ್ಯಾಷನಲ್ ಹೈವೇಸ್ ಬಗ್ಗೆ ಒಂದು ಮಾತು ಹೇಳುವುದಾದರೆ, ಇದು ನನ್ನ ಸ್ವಂತ ಅನುಭವ ಹೇಳುತ್ತೇನೆ. ಈಗ ೧೫ ದಿವಸದ ಹಿಂದೆ ಸುಬ್ರಹ್ಮಣ್ಯಕ್ಕೆ ಹೋಗಿದ್ದೆ. ಹೋಗುವಾಗ ಘಾಟ್ ಸೆಕ್ಷನ್ ಸಿಕ್ಕುತ್ತದೆ. ಅದನ್ನು ಬಿಟ್ಟಮೇಲೆ ಬಹುಶಃ ಸಕಲೇಶಪುರ ಮತ್ತು ಉಪ್ಪಿನಂಗಡಿಗೆ ಮಧ್ಯದಲ್ಲಿ ಒಂದು ಎತ್ತಿನಗಾಡಿ ಕೂಡ ಹೋಗುವುದಕ್ಕೆ ಸಾಧ್ಯವಿಲ್ಲ. ಅಂಥ ಒಂದು ಜಾಗ ಇದೆ. ಸುಬ್ರಹ್ಮಣ್ಯಕ್ಕೆ ಹೋಗಬೇಕಾದರೆ ಕಷ್ಟವಾಗುತ್ತದೆಂದು ಒಂದು ಟ್ಯಾಕ್ಸಿ ಮಾಡಿಕೊಂಡು ಹೊರಟೆ. ನನ್ನ ಜೊತೆಯಲ್ಲಿ ಹೆಂಗಸರು ಮಕ್ಕಳು ಎಲ್ಲಾ ಇದ್ದರು. ಆಗ ರಾತ್ರಿಯಾಗಿತ್ತು. ಹೋಗುತ್ತಾ ಇರಬೇಕಾದರೆ ರಸ್ತೆ ಸರಿಯಾಗಿ ಇಲ್ಲದ್ದರಿಂದ ಕಲ್ಲು ತಗಲಿ ಟೈರ್ ಪಂಕ್ಚರ್ ಆಯಿತು. ಆಗ ಅಲ್ಲಿಯೇ ಉಳಿದುಕೊಳ್ಳೋಣ ಎಂದು ನೋಡಿದರೆ ಅಲ್ಲಿ ಕೆಲವರು ಸ್ವಾಮಿ, ಇಲ್ಲಿ ಆನೆಗಳ ಕಾಟ ಇದೆ. ಇಲ್ಲಿರುವುದು ಅಪಾಯ ಎಂದು ಹೇಳಿದರು. ನನಗೆ ಭಯ ಆಯಿತು. ಆಗ ಡ್ರೈವರ್‌ನ್ನು ಏನಯ್ಯಾ ಹೀಗೆ ಮಾಡಿದೆ ಎಂದು ಕೇಳಿದರೆ, ಅವನು ಸ್ವಾಮಿ, ನೀವು ಕೊಟ್ಟಿದ್ದು ೨೦೦ ರೂಪಾಯಿ ; ಈಗ ನಾನು ಹೊಸ ಟೈರ್ ಹಾಕಿಸಬೇಕಾದರೆ ೨ ಸಾವಿರ ರೂಪಾಯಿ ಕೊಡಬೇಕಾಗಿದೆ ಎಂದು ಹೇಳಿದ. ನಾನು ಒಬ್ಬ ಅಸೆಂಬ್ಲಿ ಮೆಂಬರ್ ಎಂದು ಗೊತ್ತಾದ ಮೇಲೆ ಏನು ಸ್ವಾಮಿ, ಈ ರಸ್ತೆ ಇಂಥ ಸ್ಥಿತಿಯಲ್ಲಿದೆ, ಇದನ್ನು ಸರಿಮಾಡಿಸುವುದಕ್ಕಾ ಗುವುದಿಲ್ಲವೆ ? ನೀವೂ ಒಬ್ಬ ಮೆಂಬರೆ ? ಎಂದು ಕೇಳಿದ. ಸಕಲೇಶಪುರದಿಂದ ಸುಬ್ರಹ್ಮಣ್ಯಕ್ಕೆ ಹೋಗಬೇಕಾದರೆ ಒಂದು ಡೀವಿಯೇಷನ್ ಇದೆ. ಅದರಲ್ಲಿ ಹೋದರೆ ಕೇವಲ ೧[illegible]–೧೨ ಮೈಲಿ ಯಾಗುತ್ತದೆ. ಅಲ್ಲಿ ಹೋಗುವುದಕ್ಕೆ ರಸ್ತೆ ಚೆನ್ನಾಗಿ ಇಲ್ಲದೇ ಹೋದುದರಿಂದ ಸುಮಾರು ೪೦–೫೦ ಮೈಲಿ ಸುತ್ತಿಕೊಂಡು ಸುಬ್ರಹ್ಮಣ್ಯಕ್ಕೆ ಹೋದೆವು. ನಮ್ಮ ದೇಶದ ಹೆಮ್ಮೆ ರೋಡುಗಳು ಎನಿಸಿಕೊಂಡಿರು ವುವುಗಳೇ ಈ ಸ್ಥಿತಿಯಲ್ಲಿವೆ ಎಂದರೆ ಇದಕ್ಕೆ ನಾನು ಏನು ಹೇಳಬೇಕೋ ಗೊತ್ತಾಗುವುದಿಲ್ಲ. ಸ್ವಾಮಿ ಎಲ್ಲಾದರೂ ಸಣ್ಣ ಸಣ್ಣ ಗುಂಡಿಗಳಿದ್ದರೆ ಅವುಗಳನ್ನು ಮುಚ್ಚಬೇಕಾದರೆ ಅದಕ್ಕೆ ಟಾರ್, ಜೆಲ್ಲಿ, ತುಂಬಿ ರಸ್ತೆಯಿಂದ ಒಂದು ಅಡಿ ಎತ್ತರಿಸುತ್ತಾರೆ. ಇವುಗಳನ್ನು ಸರಿಯಾದ ರೀತಿಯಲ್ಲಿ ರಿಪೇರಿ ಮಾಡಿಸಿದರೆ ಬಹಳ ಕಡಿಮೆ ದುಡ್ಡಿನಲ್ಲಿ ಆಗುತ್ತದೆ. ಆದರೆ ಇವತ್ತು ಅದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದುದರಿಂದ ನಾನು ಹೇಳುವುದೇನೆಂದರೆ ಈ ರೀತಿ ಸಣ್ಣ ಸಣ್ಣ ಗುಂಡಿಗಳು ಬಿದ್ದ ಕಡೆಗಳಲ್ಲಿ ಅವುಗಳನ್ನು ಸರಿಯಾದ ರೀತಿಯಲ್ಲಿ ಮುಚ್ಚಿಸುವ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ನನ್ನ ಸ್ನೇಹಿತರೊಬ್ಬರು ಚನ್ನೇಗೌಡ ಎನ್ನುವವರು ಪಿ ಡಬ್ಲ್ಯೂ.ಡಿ.ನಲ್ಲಿ ಜೂನಿಯರ್ ಇಂಜಿನಿಯರ್ ಆಗಿದ್ದರು. ಅವರಿಗೆ ೧೮ ವರ್ಷ ಸರ್ವೀಸ್ ಆಗಿತ್ತು. ಅವರು ಈ ಕೆಲಸ ಸಾಕಾಗಿ ನಾನು ರಿಟೈರ್ ಆಗುತ್ತೇನೆಂದು ೧೯೭೨ನೇ ಇಸವಿಯಲ್ಲಿ ರಾಜೀನಾಮೆಯನ್ನು ಕೊಟ್ಟರು. ಈಗ ಅವರು ಕೆಲಸವನ್ನೂ ಕೂಡ ಬಿಟ್ಟಿದ್ದಾರೆ. ಇವತ್ತಿನವರೆಗೂ ಕೂಡ ಅವರ ಕ್ಲೈಂ ಸೆಟ್ಲ್ ಆಗಿಲ್ಲ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಅವರು, ಹೇಳಿದ ಕೂಡಲೇ ಅದನ್ನು ಸೆಟ್ಲ್ ಮಾಡುವುದಕ್ಕೆ ಆಗುತ್ತದೆಯೇ ?

ಶ್ರೀ ಕೆ. ಹೆಚ್. ಹನುಮೇಗೌಡ.—ಇನ್ನು ಮೈನರ್ ಇರಿಗೇಷನ್ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಬೇಕೆಂದು ಇಚ್ಛೆಪಡುತ್ತೇನೆ. ಕೆರೆಗಳಲ್ಲಿ ತುಂಬಿರುವ ಹೂಳನ್ನು ತೆಗೆಯುವ ಸಲುವಾಗಿ ೪೫ ಸಾವಿರ ರೂಪಾಯಿಗಳಷ್ಟು ಹಣವನ್ನು ಖರ್ಚುಮಾಡಿರುತ್ತೀರಿ. ಇಷ್ಟು ಖರ್ಚುಮಾಡಿದ್ದರೂ ಸಹಾ ಸಂಪೂರ್ಣವಾಗಿ ಕೆರೆಗಳಲ್ಲಿ ತುಂಬಿರುವ ಹೂಳನ್ನು ತೆಗೆಯಲು ಸಾಧ್ಯವಾಗಿಲ್ಲ. ನಮ್ಮ ಕಡೆ ಮಾನ್ ಸೂನ್‌ನಲ್ಲಿ ಇಷ್ಟೋ ಇಷ್ಟೋ ಬೆಳೆಯಾಗುತ್ತದೆ. ಉಳಿದ ಕಾಲದಲ್ಲಿ ಕೆರೆಯ ನೀರನ್ನೇ ವ್ಯವಸಾಯಕ್ಕೆ ಅವಲಂಬಿಸಿಕೊಂಡಿರಬೇಕಾಗುತ್ತದೆ. ಕೆರೆಗಳಲ್ಲಿ ಹೂಳನ್ನು ತೆಗೆಸದೆ ಇರುವುದರಿಂದ ಮಳೆಗಾಲದಲ್ಲಿ ಕೆರೆಗಳು ತುಂಬಿದರೂ ಕೂಡ ಬಹಳಷ್ಟು ದಿನಗಳು ನೀರು ನಿಲ್ಲದೆ ವ್ಯವಸಾಯಗಾರರಿಗೆ ತೊಂದರೆಯುಂಟಾಗುತ್ತದೆ. ಭೂಗರ್ಭಜಲವೂ ಕಡಿಮೆಯಾಗುತ್ತದೆ. ಇದರಿಂದ ಕೆರೆಯ ಅಕ್ಕಪಕ್ಕದಲ್ಲಿ ತೆಗೆದಿರುವ ಬಾವಿಗಳಲ್ಲಿಯೂ ನೀರಿಲ್ಲದಂತಾಗುತ್ತದೆ. ಇದಲ್ಲದೆ ಕೆರೆಗಳಲ್ಲಿ ನೀರಿಲ್ಲದೆ ಜನರಿಗೆ ಕುಡಿಯುವ ನೀರಿಗೂ ಸಮಸ್ಯೆಯುಂಟಾಗುತ್ತದೆ. ಆದ್ದರಿಂದ ಈ ಎಲ್ಲ ಸಮಸ್ಯೆಗಳನ್ನು ಬಗೆಹರಿಸಲು ಹಣ ಎಷ್ಟು ಖರ್ಚಾದರೂ ಕೆರೆಗಳಲ್ಲಿರುವ ಹೂಳನ್ನು ತೆಗೆಯಿಸಿ ನೀರು ನಿಲ್ಲುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೆರೆಯ ನೀರಿನ ಹಂಚುವಿಕೆಯ ಬಗ್ಗೆ ಒಂದೆರಡು ಮಾತನ್ನು ಹೇಳುವುದಾದರೆ, ಇದರಲ್ಲಿಯೂ ಕೂಡ ಬಹಳ ಅನ್ಯಾಯ ನಡೆಯುತ್ತಿದೆ. ಕೆರೆಗಳಲ್ಲಿ ನೀರು ತುಂಬಿದ ಮೇಲೆ ಅದನ್ನು ಸರಿಯಾಗಿ ವ್ಯವಸ್ಥಿತವಾದ ರೀತಿಯಲ್ಲಿ ರೈತರು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳುತ್ತಿಲ್ಲ. ತೂಬಿನ ಅಕ್ಕಪಕ್ಕದಲ್ಲಿರುವ ರೈತರು ತೂಬನ್ನು ಕಿತ್ತು ತಮಗೆ ಇಚ್ಛೆಬಂದಂತೆ ನೀರನ್ನು ಉಪಯೋಗಿಸಿಕೊಳ್ಳುವ ಅನೇಕ ಸಂದರ್ಭಗಳು ಇರುತ್ತದೆ. ಆಗುತ್ತಿರುವ ಈ ಅನ್ಯಾಯವನ್ನು ತಪ್ಪಿಸಲು ೨೦ ಎಕರೆ ವಿಸ್ತೀರ್ಣಕ್ಕೆ, ೩೦ ಎಕರೆ ವಿಸ್ತೀರ್ಣಕ್ಕೆ ಒಬ್ಬ ನೀರುಗಂಟಿಯನ್ನು ನೇಮಕ ಮಾಡಿ ಎಲ್ಲರಿಗೂ ಸರಿಯಾಗಿ ನೀರನ್ನು ಹಂಚುವ ವ್ಯವಸ್ಥೆಯನ್ನು ಮಾಡಿದರೆ ಇನ್ನೂ ಹೆಚ್ಚಿನ ಬೆಳೆಯನ್ನು ಬೆಳೆದು ಹೆಚ್ಚಿನ ಉತ್ಪಾದನೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಕೊನೆಯದಾಗಿ ತಾಲ್ಲೂಕು ಬೋರ್ಡ್‌ಗಳಿಗೆ ಹೆಚ್ಚಿಗೆ ಹಣವನ್ನು ಒದಗಿಸಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ಜಿ. ಕೊಡಗಿ (ಬೈಂದೂರ್).—ಮಾನ್ಯ ಅಧ್ಯಕ್ಷರೆ ಲೋಕೋಪಯೋಗಿ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳ ಬಗ್ಗೆಯೂ ಸಣ್ಣ ನೀರಾವರಿ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳ ಬಗ್ಗೆಯೂ ಬೆಂಬಲವನ್ನು ಕೊಡುತ್ತಾ ಕೆಲವೊಂದು ಸೂಚನೆಗಳನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಈವತ್ತಿನ ದಿವಸ ಒಂದು ರಾಷ್ಟ್ರದ ಆರ್ಥಿಕಾಭಿವೃದ್ಧಿಯಾಗಬೇಕಾದರೆ ಆ ದೇಶದಲ್ಲಿ ಹರಿಯುವ ನದಿಯ ನೀರು ಎಷ್ಟು ಪ್ರಾಮುಖ್ಯವೋ ಆಯಾ ದೇಶದ ರಸ್ತೆ ಸಾರಿಗೆ ಸಂಪರ್ಕವೂ ಅಷ್ಟೇ ಪ್ರಾಮುಖ್ಯವಾಗಿರುತ್ತದೆಂಬುದು ಎಲ್ಲರಿಗೂ ತಿಳಿದಂಥ ವಿಚಾರವಾಗಿರುತ್ತದೆ. ನಮ್ಮ ರಾಜ್ಯದಲ್ಲಿ ರೈಲ್ವೆ ದಾರಿಗಳಾಗಲಿ, ರಸ್ತೆ ಸಾರಿಗೆ ಸಂಪರ್ಕದ ವ್ಯವಸ್ಥೆಯಾಗಲಿ ಸಾಕಷ್ಟಿಲ್ಲದೆ ಇರುವುದರಿಂದ ಇತ್ತಕಡೆ ಹೆಚ್ಚಿನ ಮಹತ್ವವನ್ನು ಕೊಡಬೇಕಾಗಿರುತ್ತದೆ.

೧೯೭೪ರ ನಮ್ಮ ರಾಜ್ಯದಲ್ಲಿ ಅಂಕಿಅಂಶಗಳನ್ನು ಪರಿಶೀಲಿಸಿದಾಗ ನಾವು ಎಷ್ಟು ಹಿಂದೆ ಇದ್ದೇವೆ ಎನ್ನುವುದನ್ನು ಗಮನಿಸಬಹುದಾಗಿದೆ. ೩೧ನೇ ಮಾರ್ಚಿ ೧೯೭೪ ೬,೫೦೫ ಕಿಲೋಮೀಟರ್ ಸ್ಟೇಟ್ ಹೈವೆ ಇದ್ದರೆ. ೪೬,೫೦೦ ಕಿಲೋಮೀಟರ್‌ಗಳಷ್ಟು ಸಾಮಾನ್ಯವಾದ ಕಚ್ಚಾರಸ್ತೆ ಇದೆ ಎಂದು ಅಂಕಿಅಂಶಗಳಿಂದ ತಿಳಿದುಬರುತ್ತದೆ. ೧೯೬೬ ರಿಂದ ೧೯೭೧ರ ವರೆಗಿನ ಅಖಿಲ ಭಾರತದ ಸಾರಿಗೆ ಸಂಪರ್ಕದ ಮಟ್ಟಕ್ಕೆ ಹೋಲಿಸಿ ನೋಡಿದರೆ ನಾವು ತೀರ ಹಿಂದುಳಿದಿದ್ದೇವೆ ಎನ್ನುವುದನ್ನು ಗಮನಿಸಬೇಕಾದ ವಿಚಾರವಾಗಿರುತ್ತದೆ. ಇಷ್ಟೊಂದು ಹಿಂದುಳಿಯುವುದಕ್ಕೆ ಬಹುಶಃ ನಮ್ಮ ಆರ್ಥಿಕ ಅಡಚಣೆಯೇ ಸಾಕಷ್ಟು ಕಾರಣವೆಂದರೆ ಅದು ತಪ್ಪಾಗಲಾರದು. ಇದರಲ್ಲಿ ಒಂದು ಪ್ರಮುಖವಾದ ವಿಚಾರವನ್ನು ಗಮನಿಸಬೇಕಾಗಿದೆ. ಸ್ವಾತಂತ್ರ್ಯ ದೊರೆತು ೨೭ ವರ್ಷಗಳಾದರೂ ಕೂಡ ನಮ್ಮ ರಾಜ್ಯದಲ್ಲಿ ೨೬,೪೮೯ ಹಳ್ಳಿಗಳ ಪೈಕಿ ಕೇವಲ ೧೦,೨೯೯

ಹಳ್ಳಿಗಳಿಗೆ ಮಾತ್ರ ಡಾಮರು ಜಲ್ಲಿಯ ರಸ್ತೆಗಳನ್ನು ಮಾಡಲು ಸಾಧ್ಯವಾಗಿರುತ್ತದೆ. ಇನ್ನು ಉಳಿದ ಹಳ್ಳಿಗಳಿಗೆ ರಸ್ತೆಸಾರಿಗೆ ಸಂಪರ್ಕವಿಲ್ಲದಿರುವುದರ ಬಗ್ಗೆ ಗಮನಿಸಬೇಕಾದ್ದು ಅವಶ್ಯಕವಿಷಯವಾಗಿರುತ್ತದೆ. ನಮ್ಮ ದಕ್ಷಿಣ ಕನ್ನಡಜಿಲ್ಲೆಯಲ್ಲಿ ೫೧೦ ಹಳ್ಳಿಗಳ ಪೈಕಿ ಕೇವಲ ೧೬೩ ಹಳ್ಳಿಗಳಿಗೆ ಜಿಲ್ಲೆ ರಸ್ತೆಯನ್ನು ಮಾತ್ರ ಮಾಡಲ್ಪಟ್ಟು ವಾಹನ ಸಂಚಾರ ಸೌಲಭ್ಯವನ್ನು ಒದಗಿಸಿರುತ್ತಾರೆ. ಇನ್ನು ಉಳಿದಂತೆ ಹಳ್ಳಿಗಳಿಗೆ ಕೆಲವು ಕಡೆ ರಸ್ತೆಗಳು ಇದ್ದರೂ ಕೂಡ ಸಾರಿಗೆ ಸಂಪರ್ಕ ಸರಿಯಾದ ರೀತಿಯಲ್ಲಿ ಇಲ್ಲ. ಆದ್ದರಿಂದ ಉಳಿದ ಎಲ್ಲ ಕಡೆಯ ರಸ್ತೆಗಳ ನಿರ್ಮಾಣಕಾರ್ಯದಲ್ಲಿ ಆವಶ್ಯಕ ಗಮನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಹಳ್ಳಿಗಾಡಿನ ರಸ್ತೆಸಾರಿಗೆ ಸಂಪರ್ಕವನ್ನು ವ್ಯವಸ್ಥೆ ಮಾಡಲು ೧೯೮೦ರೊಳಗೆ ೩೦ ಕೋಟಿ ರೂಪಾಯಿಗಳ ವೆಚ್ಚ ಮಾಡಬೇಕೆಂಬ ಕರಡು ಯೋಜನೆಯನ್ನು ತಯಾರು ಮಾಡಿದ್ದರೂ ಕೂಡ, ಈ ಪಂಚವಾರ್ಷಿಕ ಯೋಜನೆಯಲ್ಲಿ ೨೦೭ ಹಳ್ಳಿಗಳಿಗೆ ಸಾರಿಗೆ ಸಂಪರ್ಕವನ್ನು ಕಲ್ಪಿಸುವವ ಗುರಿಯನ್ನು ಸಾಧಿಸಬೇಕಾದರೆ ೧೯೭೪-೭೫ರಲ್ಲಿ ನಾಲ್ಕೂವರೆ ಕೋಟಿ ರೂಪಾಯಿಗಳಷ್ಟು ಹಣವನ್ನು ವೆಚ್ಚಮಾಡಬೇಕಾಗುತ್ತದೆ. ೧೯೭೫-೭೬ರಲ್ಲಿ ಐದುವರೆ ಕೋಟಿ ರೂಪಾಯಿಗಳಷ್ಟು ವೆಚ್ಚವನ್ನು ಮಾಡಿದರೆ ನೀವು ಇಟ್ಟುಕೊಂಡ ಗುರಿಯನ್ನು ಈ ಪಂಚವಾರ್ಷಿಕ ಯೋಜನೆಯಲ್ಲಿಯೇ ಮುಟ್ಟಲಿಕ್ಕೆ ಸಾಧ್ಯವಾಗಬಹುದೆಂದು ಭಾವಿಸುತ್ತೇನೆ, ೧೯೭೫-೭೬ರಲ್ಲಿ ರೂರಲ್ ಕಮ್ಯುನಿಕೇಶನ್ ವರ್ಕ್ಸ್ ಪ್ರೋಗ್ರಾಮ್‌ಗಾಗಿ ೩ ಕೋಟಿ ರೂಪಾಯಿಗಳನ್ನು ಒದಗಿಸಿಕೊಡಲಾಗಿರುತ್ತದೆ. ಹೊಸ ರಸ್ತೆಗಳ ನಿರ್ಮಾಣಕ್ಕಾಗಿ ಕೇವಲ ೨ ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸಿಕೊಟ್ಟಿರುತ್ತೀರಿ. ಆದರೆ ನಿಮ್ಮ ಕರಡು ಯೋಜನೆಯ ಪ್ರಕಾರವಾಗಿಯೇ ೬ ಕೋಟಿ ರೂಪಾಯಿಗಳನ್ನು ಒದಗಿಸಿಕೊಡಬೇಕಾಗಿತ್ತು, ಏತಕ್ಕೆಂದರೆ ಇಟ್ಟುಕೊಂಡಿದ್ದ ಗುರಿಯನ್ನು ಸ್ವಲ್ಪಮಟ್ಟಿಗೆ ಈರೀತಿಯ ಒಂದು ಯೋಜನೆಗಳನ್ನು ಪೂರೈಸಬೇಕಾದರೆ ಹೆಚ್ಚಿನ ಹಣದ ಅವಶ್ಯಕತೆ ಇರುತ್ತದೆ ಶ್ರೀಮಾನ್ ಚನ್ನಬಸಪ್ಪನವರು ಕೂಡ ಇತ್ತಕಡೆ ಸ್ವಲ್ಪ ಗಮನವನ್ನು ಕೊಡಬೇಕಾದ ವಿಚಾರವಾಗಿರುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ತಾವು ಪ್ರಗತಿಯನ್ನು ಸಾಧಿಸುತ್ತಿದ್ದೀರೆಂದು ಹೇಳಿದ್ದೀರಿ. ಆದರೆ ಅಂಕಿಅಂಶಗಳನ್ನು ತಾವು ಸರಿಯಾಗಿ ಪರಿಶೀಲಿಸಿದರೆ ಅದು ಪ್ರಗತಿಯಾಗಿಲ್ಲ ಸ್ಥಗಿತಗೊಂಡಿದೆ ಎನ್ನತಕ್ಕಂಥದ್ದನ್ನು ಕಾಣಬಹುದಾಗಿದೆ. ೧೯೬೧ರಲ್ಲಿ ೧೦೦ ಸ್ಕ್ವೇರ್ ಕಿಲೋಮೀಟರ್ ರಸ್ತೆಯಲ್ಲಿ ೨೩ ಕಿಲೋಮೀಟರ್ ರಸ್ತೆ ಇದ್ದದ್ದು ೧೯೬೬ರಲ್ಲಿ ೨೯ ಕಿಲೋಮೀಟರ್‌ಗಳು, ೧೯೭೧ರಲ್ಲಿ ೩೬ ಕಿಲೋಮೀಟರ್‌ಗಳು, ೧೯೭೪ರಲ್ಲಿ ೪೨ ಕಿಲೋಮೀಟರ್, ೧೯೭೬ರಲ್ಲಿ ೪೩ ಆಗಿರತಕ್ಕದ್ದನ್ನು ನಾವು ಗಮನಿಸಬಹುದು. ಈ ಒಂದು ಪ್ರಗತಿಯನ್ನು ನೋಡಿದರೆ ವಾರ್ಷಿಕವಾಗಿ ೧೦೦ ಸ್ಕ್ವೇರ್ ಕಿಲೋಮೀಟರ್‌ನಲ್ಲಿ ಒಂದು ಕಿಲೋಮೀಟರ್ ನಷ್ಟೂ ಪ್ರಗತಿಯಾಗಿಲ್ಲ, ಅಂದರೆ ಹಿಂದೆ ಆಗಿದ್ದಂತ ಪ್ರಗತಿ ಈಗ ಆಗಿಲ್ಲವೆಂದು ಹೇಳಬಹುದು, ಅಂದರೆ ಎರಡು ಮೂರು ವರ್ಷಗಳಿಂದ ಪ್ರಗತಿಯಾಗಿಲ್ಲ ಎಂದು ಕಾಣಿಸಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ.— ನಿಮ್ಮ ಲೆಕ್ಕಾಚಾರ ತಪ್ಪಾಗಿದೆ.

ಶ್ರೀ ಎ. ಜಿ. ಕೊಡಗಿ.—ದಯವಿಟ್ಟು ತಾವು ಉತ್ತರ ಕೊಡುವಾಗ ಇದರ ಬಗ್ಗೆ ಹೇಳಿದರೆ ನಾನು ತಿದ್ದಿಕೊಳ್ಳುವುದಕ್ಕೆ ತಯಾರಾಗಿ ಇದ್ದೇನೆ. ತಮ್ಮ ರಿಪೋರ್ಟ್‌ನಲ್ಲಿ ಒಂದು ಕರಡು ಯೋಜನೆಯಲ್ಲಿ ಏನಿದೆ, ಅದರಿಂದ ತೆಗೆದಂತ ಒಂದು ಚಿತ್ರ ಇದು. ಹೀಗೆ ಈ ರಸ್ತೆಗಳ ಚಿತ್ರ ಕೂಡ ೧೯೭೨ರಲ್ಲಿ ೧೦೦ ಸ್ಕ್ವೇರ್ ಕಿಲೋಮೀಟರ್‌ಗಳಲ್ಲಿ ೩೯ ಇದ್ದದ್ದು ೧೯೭೪ಕ್ಕೆ ೪೨ ಆಗಿದೆ. ೧೯೭೬ಕ್ಕೆ ಕೇವಲ ೪೩ ಆಗಿದೆ. ಇದೂ ಕೂಡ ಪ್ರಗತಿಯ ಸಂಕೇತ ಎಂದು ನಾನಾದರೂ ಕೂಡ ಭಾವಿಸುವುದಿಲ್ಲ. ಕಳೆದ ಮೂರು ವರ್ಷಗಳಿಂದ ಹಿಂದೆ ಇದ್ದಷ್ಟು ಪ್ರಗತಿ ಆಗಿಲ್ಲ ಎಂದು ತಮ್ಮ ಗಮನಕ್ಕೆ ತರಬೇಕಾಗಿದೆ. ೧೯೭೬-೭೭ನೇ ಯೋಜನೆಯಲ್ಲಿ ಸಾಕಷ್ಟು ಹಣವನ್ನು ಈ ವಿಚಾರಕ್ಕಾಗಿ ಒದಗಿಸಿದ್ದೀರಿ. ಅದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ನಾನು ತಮ್ಮ ದಕ್ಷತೆ, ಪ್ರಾಮಾಣಿಕತೆ ಅಥವಾ ತಮ್ಮ ಅನುಭವದ ವಿಚಾರದ ಅನುಮಾನವನ್ನು ವ್ಯಕ್ತಪಡಿಸುತ್ತಾ ಇಲ್ಲ. ಈಗ ಇರುವಂಥ ವಿಚಾರವನ್ನು ಪರಿಶೀಲಿಸುವಾಗ ಇದು ಸಾಕಷ್ಟು ಪ್ರಗತಿ ಆಗಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರಬೇಕಾದ ಅವಶ್ಯಕತೆ ಇದೆ ಎಂದು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ ಈ ರಸ್ತೆಗಳ ವಿಚಾರವಾಗಿ ಇನ್ನೂ ಹೇಳುತ್ತಾ ಹೋದರೆ ಬಹುಶಃ ಸಮಯದ ಅಭಾವ ಬರಬಹುದು. ಇನ್ನು ಸೇತುವೆಗಳ ವಿಚಾರದಲ್ಲಿ ಹೇಳುವುದಾದರೆ ಇದು ಒಂದು ದುರಂತಕತೆ ಎಂದು ನಾನು ಭಾವಿಸಿದ್ದೇನೆ. ೧೯೭೨ರಿಂದ ಇಲ್ಲಿಯ ತನಕ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದೂ ಹೊಸ ಸೇತುವೆಗಳನ್ನು ತೆಗೆದುಕೊಂಡಿಲ್ಲ. ಇದು ತಮ್ಮ ಗಮನಕ್ಕೆ ತರಬೇಕಾದ ವಿಚಾರವಾಗಿದೆ. ಇದನ್ನು ತಾವು ಗಮನಿಸಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಕರಾವಳಿ ಉದ್ದಕ್ಕೂ ಎಷ್ಟು ಸೇತುವೆಗಳು ಆಗಿದೆ ?

ಶ್ರೀ ಎ. ಜಿ. ಕೊಡಗಿ.—ಈಗ ನಮ್ಮ ರಾಜ್ಯದಲ್ಲಿ ಒಟ್ಟು ೫೧೦೦ ಸೇತುವೆಗಳು ಸಣ್ಣ ಸೇತುವೆಗಳು ಮತ್ತು ದೊಡ್ಡ ಸೇತುವೆಗಳು ಸೇರಿ ೧೦೦ ಫೀಟ್‌ಗಿಂತ ಹೆಚ್ಚಿನದು ಆಗಬೇಕಾದ್ದು ಎಂದು ತಮ್ಮ ವರದಿಯಲ್ಲಿ ಇದೆ. ಆದರೆ ೧೯೭೬ರ-೭೭ಕ್ಕೆ ಒದಗಿಸಿಕೊಟ್ಟಂತ ಸೇತುವೆಗಳು ಕೇವಲ ೨೧೭. ಇದರಲ್ಲಿ ೧೦೭ ದೊಡ್ಡ ಸೇತುವೆಗಳು ಮತ್ತು ೧೧೦ ಸಣ್ಣ ಸೇತುವೆಗಳನ್ನು ಒದಗಿಸಿಕೊಟ್ಟಿದ್ದೀರಿ. ಸರಿಯಾಗಿ ೫೧೦೦ ಸೇತುವೆಗಳೂ ಕೂಡ ರಚನೆಯಾಗಬೇಕಾದರೆ ಅದೇ ದಾಮಾಶದಲ್ಲಿ ಒದಗಿಸಿಕೊಟ್ಟರೆ ಇನ್ನು ೨೫ ವರ್ಷಗಳ ಕಾಲ ಬೇಕಾಗಬಹುದು ಎನ್ನುವುದನ್ನು ಗಮನಿಸಬೇಕು. ಕಳೆದ ವರ್ಷ ಮತ್ತು ಅದರ ಹಿಂದಿನ ವರ್ಷ ಇದೇ ಸದನದಲ್ಲಿ ಕೂಡ ಇನ್ನು ೫ ವರ್ಷಗಳಲ್ಲಿ ನಮ್ಮ ರಾಜ್ಯ ಎಲ್ಲ ಸೇತುವೆಗಳನ್ನೂ ಮಾಡಬೇಕು ಎಂಬ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದುದರಿಂದ ಮಾನ್ಯ ಚನ್ನಬಸಪ್ಪನವರು ಆದಷ್ಟು ಹೆಚ್ಚಿಗೆ ಮಲೆನಾಡು ಪ್ರದೇಶಗಳಿಗೆ ಸೇತುವೆಗಳ ರಚನೆ ಬಗ್ಗೆ ಮಹತ್ವ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರವನ್ನು ಮಾನ್ಯ ಚನ್ನಬಸಪ್ಪನವರಿಗೆ ಹೇಳಬೇಕಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾರಿಗೆ ಸಂಪರ್ಕದಲ್ಲಿ ತೊಂದರೆಯಾಗಿರುವುದಲ್ಲದೆ ಅನೇಕ ದೃಷ್ಟಿಕೋನಗಳಿಂದ ಈ ಜಿಲ್ಲೆ ಬಹಳಷ್ಟು ಕಡೆಗಣಿಸಲ್ಪಟ್ಟಿದೆ ಎಂಬುದನ್ನು ಅಂಕಿಅಂಶಗಳಿಂದ ಸಾಬೀತು ಪಡಿಸುವುದಕ್ಕೆ ಸಾಧ್ಯವಿದ್ದರೂ ಅವಕಾಶವನ್ನು ಕೊಡುತ್ತಿಲ್ಲ. ಆದರೆ ಒಂದು ವಿಚಾರವನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕಾಗಿದೆ, ದಕ್ಷಿಣ ಕನ್ನಡ ಜಿಲ್ಲೆ ಕರ್ನಾಟಕ ರಾಜ್ಯದಲ್ಲಿ ಒಂದು ಹೃದಯ ಸ್ಥಾನದಲ್ಲಿ ಇದೆ. ಈ ಹೃದಯಕ್ಕೆ ಏನೇ ಬೇನೆ ಬಂದರೂ ಮನುಷ್ಯ ಬದುಕುವುದು ಬಹಳ ಕಷ್ಟ. ಆ ಬೇನೆ ಎರಡನೇ ಸಾರಿ ಬಂದರೆ ಮನುಷ್ಯನಿಗೆ ಉಳಿಗಾಲವಿಲ್ಲ. ಈ ದಕ್ಷಿಣ ಕನ್ನಡ ಜಿಲ್ಲೆಯ ಜನ ಸಣ್ಣಪುಟ್ಟ ವಿಚಾರಗಳಲ್ಲಿ ಗೊಂದಲ ಹುಟ್ಟಿಸುವ ಜನ ಅಲ್ಲ. ಆದರೆ ನಮಗೆ ನೋವಾದರೆ ಸಿಡಿದೇಳುವ ಜನ ನಾವು. ಗ್ರಾಮಾಂತರದಲ್ಲಿ ರಸ್ತೆಗಳ ಅಭಿವೃದ್ಧಿಗೋಸ್ಕರ ಹಣವನ್ನು ಕೊಟ್ಟಿದ್ದೀರಿ, ಅದನ್ನು ಇನ್ನೂ ಹೆಚ್ಚು ಕೊಡಬೇಕು. ಐ.ಸಿ.ಆರ್.ಸಿ. ಪ್ರೋಗ್ರಾಮಿನಲ್ಲಿ ಇದನ್ನು ಒದಗಿಸಿದ್ದೀರಿ. ಆದರೂ ಕೂಡ ಬೇರೆ ಕಡೆಗಳಲ್ಲಿ ಕೊಟ್ಟಿದ್ದರೆ ನಮ್ಮ ಕೈಗೆ ಅದು ಸಿಕ್ಕುವುದಿಲ್ಲ. ನಮ್ಮದು ಮಳೆ ಹೆಚ್ಚು ಬರುವ ಪ್ರದೇಶವಾದ್ದರಿಂದ ರಸ್ತೆ ಹಾಳಾಗುವ ಸನ್ನಿವೇಶ ಇರುವುದರಿಂದ ಹೆಚ್ಚು ಹಣವನ್ನು ಕೊಡಬೇಕು. ಇನ್ನು ನೀರಾವರಿ ಬಗ್ಗೆ ಹೇಳುವುದಾದರೆ ಸಣ್ಣ ನೀರಾವರಿ ಬಗ್ಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಕಡೆಗಣಿಸಲ್ಪಟ್ಟಿದೆ ಎನ್ನುವುದನ್ನು ಕೂಡ ನೀರಾವರಿ ಮಂತ್ರಿಗಳು ಕೊಟ್ಟಂತ ಏನು ಒಂದು ಕರಪತ್ರ ಇದೆ. ಅದರಲ್ಲಿ ಕಾಣುವುದಕ್ಕೆ ಸಾಧ್ಯವಿದೆ. ನಮ್ಮ ಜಿಲ್ಲೆಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟು ಸಣ್ಣ ನೀರಾವರಿ ಯೋಜನೆಗಳನ್ನು ಒದಗಿಸಿಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ ಅವರಿಗೆ ಅಭಿನಂದನೆಯನ್ನು ಸಲ್ಲಿಸಿ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಸಣ್ಣ ನೀರಾವರಿ ಮತ್ತು ಲಿಫ್ಟ್ ಇರಿಗೇಷನ್‌ಗೆ ಪ್ರಧಾನ್ಯತೆ ನಮಗೂ ಕೂಡ ಕೊಡಬೇಕು. ಇದರಿಂದ ನಮ್ಮ ರಾಷ್ಟ್ರಕ್ಕೆ ಮತ್ತು ನಮ್ಮ ರಾಜ್ಯಕ್ಕೆ ಬೇಕಾದಷ್ಟು ಆಹಾರ ಧಾನ್ಯವನ್ನು ಒದಗಿಸಿಕೊಡುವುದಕ್ಕೆ ನಮಗೆ ಶಕ್ತಿಯನ್ನು ದಯಪಾಲಿಸಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ನಾನು ಮಾನ್ಯ ಲೋಕೋಪಯೋಗಿ ಸಚಿವರು ಮತ್ತು ಸಣ್ಣ ನೀರಾವರಿ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಸಂಪೂರ್ಣವಾಗಿ ವಿರೋಧಿಸಿ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಮೊದಲನೆಯದಾಗಿ ಸಣ್ಣ ನೀರಾವರಿ ಯೋಜನೆ ಸಚಿವರನ್ನು ಈ ಸಂದರ್ಭದಲ್ಲಿ ಅಭಿನಂದಿಸುವುದಕ್ಕೆ ಅಪೇಕ್ಷೆ ಪಡುತ್ತೇನೆ. ಕಾರಣವಾದರೂ ಇಷ್ಟೇ ಈ ಸರ್ಕಾರದಲ್ಲಿ ಇದುವರೆಗೆ ಮಂಡಿಸಿರತಕ್ಕ ವರದಿಗಳು ಏನಿದೆ ಯಾವುದೂ ಕೂಡ ಇದುವರೆಗೆ ಕನ್ನಡದಲ್ಲಿ ವರದಿ ಬಂದಿಲ್ಲ. ನಮ್ಮ ಸಣ್ಣ ನೀರಾವರೀ ಸಚಿವರು ಮಂಡಿಸಿರತಕ್ಕಂಥ ವರದಿ ಒಂದೇ ಒಂದು ಕನ್ನಡದಲ್ಲಿ ಬಂದಿರತಕ್ಕ ವರದಿ. ಈ ಒಂದು ಕಾರಣಕೋಸ್ಕರ ಸಣ್ಣ ನೀರಾವರಿ ಸಚಿವರನ್ನು ಮೊದಲನೆಯದಾಗಿ ಅಭಿನಂದಿಸಿ ನನ್ನ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಣ್ಣ ನೀರಾವರಿ ಬಗ್ಗೆ ನನ್ನ ಗೆಳೆಯರಾದಂಥ ಮಾನ್ಯ ಬಂಗಾರಪ್ಪನವರು ಹೇಳಿರತಕ್ಕದ್ದನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ, ಒಂದು ವಿಷಯವನ್ನು ಹೇಳಬಯಸುತ್ತೇನೆ. ನಾವು ಮೊದಲಿನಿಂದಲೂ ಹೇಳಿದ್ದನ್ನೇ ಹೇಳುತ್ತಿದ್ದೇವೆ ೪ ವರ್ಷದಿಂದ ಅಲ್ಲ, ೪೦ ವರ್ಷಗಳಿಂದಲೂ ಹೇಳಿದ್ದನ್ನೇ ಹೇಳುತ್ತಿದ್ದೇವೆ. ಮಲೆನಾಡಿನ ಕೆರೆಗಳ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಇದರ ಬಗೆ ಮಾನ್ಯ ಸಚಿವರು ಒಂದು ವಾರದ ಮಟ್ಟಿಗೆ ನಮ್ಮ ಜಿಲ್ಲೆಗೆ ಬರುವುದಕ್ಕೆ ಈ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟಿರುವುದನ್ನು ಸ್ವಾಗತಿಸಿ, ಇಲ್ಲಿ ಹೃದಯಪೂರ್ವಕವಾಗಿ ನಮ್ಮ ಜಿಲ್ಲೆಯ ಪರವಾಗಿ ಸ್ವಾಗತವನ್ನು ಕೋರಿ

ಮುಂದೆ ಮಾತನಾಡುವುದಕ್ಕೆ ಅಪೇಕ್ಷಿಪಡುತ್ತೇನೆ ಮಾನ್ಯ ಅಧ್ಯಕ್ಷರೇ ಇಲ್ಲಿ ಭಾವಿಗಳನ್ನು ತೋಡಿಸುವುದರ ಬಗ್ಗೆ ಮಾತ್ರ ಹೇಳುತ್ತೇನೆ. ಭಾವಿಗಳನ್ನು ತೋಡಿಸುವುದರ ಬಗ್ಗೆ ಇವರ ಇಲಾಖೆಯಲ್ಲಿ ಸಾಕಷ್ಟು ಯೋಜನೆಯನ್ನು ಮಾಡಿದ್ದಾರೆ ಆದರೆ ಇವತ್ತು ಈ ಇಲಾಖೆಯುವರು ಅವರಲ್ಲಿ ಜೀಯಾಲಾಜಿಕಲ್ ಎಕ್ಸ್‌ಪರ್ಟ್ಸ್ ಇನ್ನಿದ್ದಾರೆ ಅವರು ಪಿ ಎಚ್ ಇನಲ್ಲೂ ಬರುತ್ತಾರೆ. ಇದರಲ್ಲೂ ಬರುತ್ತಾರೆ ಎಲ್ಲಾ ಕಡೆಯೂ ಬರುತ್ತಾರೆ ಇವರು ಬಂದು ನಮ್ಮ ಕಡೆಯಲ್ಲಿ ಭಾವಿಗಳನ್ನು ತೋಡಿದ್ದಾರೆ. ಎಲ್ಲಿ ಜನ ಇಲ್ಲವೋ ಎಲ್ಲಿ ಜನ ದನ ಇಲ್ಲವೋ ಅಂತಹ ಕಡೆಗಳಲ್ಲಿ ಕುಡಿಯುವ ನೀರಿನ ಭಾವಿಗಳನ್ನು ತೋಡಿದ್ದಾರೆ. ನಾನು ಹೋಗಿ ಹೇಳಿದರೆ ಗುಡ್ಡದಲ್ಲಿ ತೋಡಿದ್ದಾರೆ. ಗದ್ದೆ ಬಯಲಿನಲ್ಲಿ ತೋಡಿದ್ದಾರೆ. ಇದೆಲ್ಲಾ ಯಾಕಾಗಿ ಬೇಕಾಗಿದೆ ಎಂದು ಕೇಳಿದರೆ ಜನ ಕೇಳಿದರು ಎಂದು ಹೇಳುತ್ತಾರೆ. ಯಾವ ಜನ ಎಂದರೆ ಅವರು ಜನವೇ ಇಲ್ಲ. ಇವನ ಒಬ್ಬನೇ ಮನುಷ್ಯ ಅದ ಯಾರು ಎಂದು ನಾನು ಹೇಳುವುದಿಲ್ಲ. ಅದನ್ನು ಹೇಳುವುದು ಬೇಡ ಬಿಡಿ ಈ ರೀತಿ ಅನ್ಯಾಯಗಳು ತೀರ್ಥಹಳ್ಳಿ ತಾಲ್ಲೂಕಿನಲ್ಲಿ, ಸಾಗರ ತಾಲ್ಲೂಕಿನಲ್ಲಿ ನಡೆಯುತ್ತಿದೆ. ಈ ತಾಲ್ಲೂಕುಗಳಲ್ಲಿ ಪಿಎಚ್‌ಇ. ಅವರು ಕುಡಿಯುವ ನೀರಿನ ಭಾವಿಗಳನ್ನು ತೋಡುವುದಕ್ಕೆ ಬಂದರು. ಮಂಡಗಟ್ಟೆಯ ಸಿಂಧುವಾಡಿ ಊರಿನಲ್ಲಿ ಕುಡಿಯುವ ನೀರಿನ ಭಾವಿಯನ್ನು ತೋಡಲಿಲ್ಲ ಅದರಿಂದ ಆಚೆಗೆ ಹೋಗಿ ಶ್ರೀಮಂತರ ಎಸ್ಟೇಟ್ ಹತ್ತಿರ ತೋಡಿದರು. ಅವರು ಎಕ್ಸ್ ಎಂಎಲ್‌ಸಿ. ಯವರು ದೊಡ್ಡ ಶ್ರೀಮಂತರು ಕಾಫಿ ತೋಟ ಮಾಡಿಕೊಂಡು ಬಡರೈತರ ಬಾಯಿ ಹೊಡೆದು ಬೇಲಿ ಕಟ್ಟಿಕೊಂಡು ಇವತ್ತಿಗೂ ಇದ್ದಾರೆ ಅವರ ಎಸ್ಟೇಟ್ ಇರುವುದು ಗದ್ದೆಬಯಲಿನಲ್ಲಿ, ಪಂಪ್ ಹಾಕಿ ಇಟ್ಟುಬಿಟ್ಟಿದ್ದಾರೆ. ಹೆಮ್ಮಕ್ಕಿ ಊರಿನಲ್ಲಿ ಊರಿನವರು ಹೇಳಿದರು ಇಲ್ಲಿ ಬೇಕಾದಷ್ಟು ನೀರು ಇದೆ ಭಾವಿಗಳು ಇವೆ. ಇಲ್ಲಿ ತೋಡುವುದು ಬೇಡವೆಂದು ಹೇಳಿದರೂ ನಿಮ್ಮನ್ನು ಕೇಳಿ ತೋಡುವುದಕ್ಕೆ ಬಂದಿಲ್ಲ. ಎಲ್ಲಿ ನಮಗೆ ನೀರು ಕಾಣುತ್ತದೆಯೋ ಅಲ್ಲಿ ನಾವು ತೋಡುತ್ತೇವೆ ಎಂದು ಹೇಳುತ್ತಾರೆ.

11-30 P M.

ಸಂಬಂಧಪಟ್ಟ ಸಚಿವರು ಅಲ್ಲೀ ಹೋಗಿ ನೀರು ಕುಡಿಯುತ್ತಾ ಕೂಡಬೇಕು ಜನ ಇಲ್ಲದೆ ಇರ ತಕ್ಕಂಥ ಪ್ರದೇಶದಲ್ಲಿ ಪಿಎಚ್‌ಇ. ನವರು ಕುಡಿಯುವ ನೀರಿನ ಭಾವಿಯನ್ನು ತೋಡಿಸಿದ್ದಾರೆ ಮಂಡಗಟ್ಟೆ ಹತ್ತಿರ ಸಿಂಧುವಾಡಿಯಲ್ಲಿ ಒಂದು ಜನ ಇಲ್ಲದ ಪ್ರದೇಶದಲ್ಲಿ ತೋಡಿಸಿದ್ದಾರೆ ಅದು ಮಾನ್ಯ ಚನ್ನಬಸಪ್ಪನವರ ಹಳೇ ಸ್ನೇಹಿತರ ಕಾಫಿ ಎಸ್ಟೇಟ್ ಹತ್ತಿರ. ಅವರು ಯಾರೆಂದರೆ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀಮಾನ್ ಕೆ. ಟಿ. ಶಾಮೇಗೌಡರು ಅವರಿಗೂ ಚನ್ನಬಸಪ್ಪನವರಿಗೂ ಬಹಳ ಬಾಂಧವ್ಯ. ಊರಿನಿಂದ ಮೂರು ಮೈಲಿ ಆಚೆ ಜನ ಇಲ್ಲದ ಪ್ರದೇಶವಾದ ಅಲ್ಲಿ ಭಾವಿ ತೋಡಿಸಿದ್ದಾರೆ, ತಾವೇ ಅಲ್ಲಿ ಬಂದು ನೀರು ಕುಡಿದುಕೊಂಡಿದ್ದರೆ ಒಳ್ಳೆಯದು. ಅಲ್ಲಿಗೆ ಜನ ದನ ಎರಡೂ ಬರುವುದಿಲ್ಲ. ಈ ಬಗ್ಗೆ ಸ್ವಲ್ಪ ಗಮನ ಹರಿಸಬೇಕು ಹಳ್ಳಿಗಳಿಗೆ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರನು ಸರಬರಾಜು ಮಾಡುತ್ತೇವೆ ಎಂದು ಹೇಳುವವರು ನೀವು ನಮ್ಮ ತಾಲ್ಲೂಕಿನಲ್ಲಿ ಕೋಣಂದೂರು, ಬಸವಾನಿ ರಂಜನಕಟ್ಟೆಗಳಿಗೆ ಕುಡಿಯುವ ನೀರನ್ನು ಕೊಡಿ ಎಂದು ಎರಡು ವರ್ಷದಿಂದ ಕೇಳುತ್ತಿದ್ದೇವೆ. ಪಂಚಾಯಿತಿಗಳ ಶಕ್ತಿ ಎಷ್ಟು ಎಂದು ತಮಗೆ ಗೊತ್ತಿದೆ. ಅವರು ಕಟ್ಟುವಷ್ಟು ಹಣ ಕಟ್ಟಿದ್ದಾರೆ. ಅವರು ಕಟ್ಟಿದಷ್ಟು ಹಣ ಸಾಕು ಸರ್ಕಾರವೇ ಕುಡಿಯುವ ನೀರನ್ನು ಕೊಡುತ್ತದೆ ಎಂದು ಹೇಳಿ ತಾವು ಒಂದು ಸಾರಿ ಅಪ್ಪಣೆ ಕೊಡಿಸಿದಿರಿ. ಇವತ್ತಿನವರೆಗೂ ನೀರು ಬಂದಿಲ್ಲ. ಈಗ ಪಂಚಾಯಿತಿಯವರು ಕಟ್ಟಬೇಕಾದಷ್ಟು ಕಟ್ಟಲೇ ಬೇಕು ಎಂದು ಇಲಾಖೆಯಿಂದ ನೋಟೀಸ್ ಬಂದಿದೆ ಚೀಫ ಇಂಜಿನಿಯರ್ ನೀಲಕಂಠಪ್ಪನವರು ಶಿವಮೊಗ್ಗದ ಕಡೆ ಬಂದಿದ್ದಾಗ ಆದೇಶ ಕೊಟ್ಟು ಬಂದರು. ಆದರೂ ಕೂಡ ನೀರು ಸಿಕ್ಕಲಿಲ್ಲ. ಇದಕ್ಕೆ ಯಾರು ಕಾರಣ, ತಲೆ ಕಾರಣವೋ ಬುಡ ಕಾರಣವೋ ಪರಿಶೀಲನೆ ಮಾಡಬೇಕು. ಈ ಸರ್ಕಾರಕ್ಕೆ ಎರಡೂ ಇಲ್ಲ. ಗ್ರಾಮಾಂತರ ಪ್ರದೇಶಗಳಿಗೆ ನೀರು ಸರಬರಾಜು ಮಾಡುವುದಕ್ಕೆ ಪಿಎಚ್‌ಇ. ಮಾಡಿದ್ದೀರಿ. ಗ್ರಾಮಾಂತರ ಪ್ರದೇಶಗಳಲ್ಲಿ ದೊಡ್ಡ ದೊಡ್ಡ ಗ್ರಾಮಗಳಿಗೆ ಕುಡಿಯುವ ನೀರನ್ನು ಕೊಡತಕ್ಕ ಯೋಜನೆ ಕಾರ್ಯಕ್ರಮವನ್ನು ತೆದುಕೊಳ್ಳಬೇಕು ಸಣ್ಣ ನೀರಾವರಿ ಸಚಿವರು ನಮಗೆ ಭೂಗೋಳದ ಪಾಠವನ್ನು ಹೇಳಿದ್ದಾರೆ. ಮೇಲ್ಮೈ ಲಕ್ಷಣ ಎಂದರೆ ಏನು, ಯಾವ ಯಾವ ಭಾಗದಲ್ಲಿ ಹೇಗಿವೆ ಎಂಬುದನ್ನು ವಿವರಿಸಿದ್ದಾರೆ ಅಂತರ್ಜಲ ಭಾವಿಗಳ ಬಗ್ಗೆ ಮಲೆನಾಡಿನ ಬಗ್ಗೆ ಕರಾವಳಿ ಉತ್ತರ ಬಯಲು ದಕ್ಷಿಣ ಬಯಲು ಪ್ರದೇಶ ಈ ಬಗ್ಗೆ ವಿಭಾಗಿಸಿ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಒಳ್ಳೆಯ ಪಾಠ ಹೇಳಿದ್ದಾರೆ. ಆದರೆ ಮುಂದೆ ಮಾಡತಕ್ಕ ಯೋಜನೆ ಬಗ್ಗೆ ಹೇಳಿಲ್ಲ. ಆ ಬಗ್ಗೆ ಹೇಳಬೇಕು. ನಮಗೆ ಒದಗಿಸಿರತಕ್ಕ ಪುಸ್ತಕದ ಮುನ್ನುಡಿಯಲ್ಲಿ ಒಂದು ವಾದವನ್ನು ಮಂಡನೆ ಮಾಡಿದ್ದಾರೆ. ಕಾಡುಗಳನ್ನು ಕಡಿದಿದ್ದರಿಂದ ಮಾತ್ರ

ಇನ್ನಿತರ ಕಾರಣಗಳಿಂದ ಮಳೆ ಬರುವುದು ಕಡಿಮೆಯಾಯಿತು ಎಂದು ಬಿಜಾಪುರ, ಗುಲ್ಬರ್ಗ ಬೆಳಗಾಂನಲ್ಲಿ ಯಾವ ಕಾಡು ಇದೆ? ಅಲ್ಲಿ ಮಳೆ ಬೀಳುವುದಿಲ್ಲವೆ? ಕಾಡು ಇದ್ದರೆ ಮಾತ್ರ ಮಳೆ ಬೀಳುತ್ತದೆ ಎಂಬ ವಾದ ವೈಜ್ಞಾನಿಕವಾಗಿ ಸರಿಯಲ್ಲ ಎಂಬುದನ್ನು ಹೇಳುತ್ತೇನೆ. ಹಾಗಾದರೆ ಬಯಲು ಸೀಮೆಯಲ್ಲಿ ಯಾತಕ್ಕೆ ಮಳೆ ಬರುತ್ತದೆ.

ಶ್ರೀ ಎಸ್. ಬಿ. ನಾಗರಾಳ್.— ಅಲ್ಲೆಲ್ಲಾ ಎಷ್ಟು ಮಳೆ ಬಿದ್ದಿದೆ ಎಂಬುದನ್ನು ನೋಡಿ.

ಶ್ರೀ ಕೋಣಂದೂರು ಲಿಂಗಪ್ಪ.— ನಮ್ಮ ಮಲೆನಾಡು ಪ್ರದೇಶಗಳಲ್ಲಿ ಕೆರೆಗಳ ಬಗ್ಗೆ ಸಾಕಷ್ಟು ಹೇಳಿದ್ದಾರೆ. ನಾನು ಆ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ಮಾನ್ಯ ಅಧ್ಯಕ್ಷರೆ ನಾನು ಶ್ರೀಮಾನ್ ಚನ್ನಬಸಪ್ಪನವರ ಡಿಮ್ಯಾಂಡ್ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಈ ಇಲಾಖೆಗೆ ಸಂಬಂಧಪಟ್ಟ ದಾಖಲಾತಿಗಳು ಎಲ್ಲಾ ವಿಷಯಗಳು ನಮ್ಮ ನಾಯಕರಾದಂಥ ಶ್ರೀಮಾನ್ ದೇವೇಗೌಡರ ಹತ್ತಿರ ಇತ್ತು. ಅವರು ಬಂದು ಎಲ್ಲಿ ಹೇಳುತ್ತಾರೋ ಎಂದು ಅರ್ಧ ರಾತ್ರಿಯಲ್ಲಿ ಕರೆದುಕೊಂಡು ಹೋಗಿ ಬಂಧನದಲ್ಲಿಟ್ಟಿದ್ದಾರೆ.

ಉಪಾಧ್ಯಕ್ಷರು.— ಮಾನ್ಯ ಸದಸ್ಯರು ದಯವಿಟ್ಟು ವಿಷಯದ ಮೇಲೆ ಮಾತನಾಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.— ಇರುವ ವಿಷಯ ಹೇಳುತ್ತೇನೆ. ಮುಖ್ಯವಾಗಿ ಎಲ್ಲಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಚಕ್ರಾ ಪ್ರಾಜೆಕ್ಟ್ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಚಕ್ರ ಸಾವೆಹೊಕ್ಕಲು, ವರಾಹಿ ಇಷ್ಟು ಯೋಜನೆಗಳು ನಮ್ಮ ಕ್ಷೇತ್ರಕ್ಕೆ ಸೇರುತ್ತವೆ. ಈ ಬಗ್ಗೆ ಈಗಾಗಲೇ ಹಣವನ್ನು ಖರ್ಚು ಮಾಡಿದ್ದಾರೆ. ಅಲ್ಲಿ ತೊಂದರೆಗೆ ಒಳಗಾಗಿರತಕ್ಕ ಜನರಿಗೆ ನಿರ್ಗತಿಕ ಜನರಿಗೆ ಪರಿಹಾರ ಕೊಡಿಸಬೇಕು. ಈ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಿ ಕ್ರಮ ತೆಗೆದುಕೊಳ್ಳಬೇಕು. ವರಾಹಿ ಪ್ರಾಜೆಕ್ಟ್ ಬಗ್ಗೆ ಕೇಳಿದ್ದಾವೆ. ಕಳೆದ ನಾಲ್ಕು ವರ್ಷಗಳಿಂದಲೂ ವರಾಹಿ ಪ್ರಾಜೆಕ್ಟ್ ಬಗ್ಗೆ ಹೇಳಿದ್ದೇವೆ. ಆ ಭಾಗದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಿಲ್ಲ. ಎಲ್ಲಾ ಅಧುಬರ್ಧ ಮಾಡಿಬಿಟ್ಟಿದ್ದೀರಿ. ಈ ಬಗ್ಗೆ ಅಂತಿಮ ತೀರ್ಮಾನವನ್ನು ಮಾನ್ಯ ಸಚಿವರು ಹೇಳಬೇಕು ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಚನ್ನಬಸಪ್ಪನವರ ಚೇಂಬರ್‌ಗೆ ಹೋಗಬೇಕು. ೧೭೩ ತಾಲ್ಲೂಕಿಗೆ ೧೭೩ ಪೆಟ್ಟಿಗೆಗಳಿವೆ ಇನ್ನು ಎರಡು ಪೆಟ್ಟಿಗೆ ಹೆಚ್ಚಿಗೆ ಇಟ್ಟಿದ್ದಾರೆ. ಯಾತಕ್ಕೋ ಗೊತ್ತಿಲ್ಲ. ಒಟ್ಟು ೧೭೫ ಪೆಟ್ಟಿಗೆ ಇದೆ. ಏನು ಹೇಳಿದರೂ ಆಗುತ್ತದೆ ಎಂದು ಹೇಳುತ್ತಾರೆ. ರಸ್ತೆಗಳು ಆಗುತ್ತವೆ, ಸೇತುವೆಗಳು ಆಗುತ್ತಿವೆ ಕೆರೆಗಳು ಆಗುತ್ತಿವೆ ಎಲ್ಲ ಮಾಸ್ಟರ್ ಪ್ಲಾನ್‌ಗಳೂ ಬೊಂಬಾಯಿ ಪೆಟ್ಟಿಗೆಯಲ್ಲಿ ಛೇಂಬರ್‌ನಲ್ಲಿವೆ. ಏನು ಕೇಳಿದರೂ ಪೆಟ್ಟಿಗೆ ತೋರಿಸುತ್ತಾರೆ. ಬಂದವರಿಗೆಲ್ಲಾ ಬೊಂಬಾಯಿ ಪೆಟ್ಟಿಗೆ ತೋರಿಸಿಕೊಂಡು ಛೇಂಬರ್‌ನಲ್ಲಿ ಮ್ಯಾಪ್ ಬರೆದು ಇಟ್ಟುಕೊಂಡಿದ್ದಾರೆ. ಎಲ್ಲಾ ರಸ್ತೆಗಳು, ಸೇತುವೆಗಳು, ಮೋರಿಗಳು ಅವರ ಕೋಣೆಯಲ್ಲಿ ಆಗಿವೆ. ಭೂಮಿಯ ಮೇಲೆ ಒಂದೂ ಆಗಿಲ್ಲ ನಮ್ಮ ಕ್ಷೇತ್ರದಲ್ಲಿ ಏನೂ ಆಗಿಲ್ಲ. ಏನೂ ಕೇಳಿದರೂ ಆಗುತ್ತದೆ, ಆಗುತ್ತವೆ. ಎಲ್ಲಾ ಅರ್ಧಂಬರ್ಧ ಆಗಿದೆ. ತಾವು ಬಂದಾಗ ತೋರಿಸಲಿಲ್ಲವೆ ಸ್ವಾಮಿ ? ಡಬ್ಲ್ಯುಡಿ. ರಸ್ತೆಗಳು ಯಾವುದೋ ಕಾಲದಲ್ಲಿ ಆಗಿದ್ದು ಅಲ್ಲಿಗೆ ಮಣ್ಣು ಹಾಕುವುದಕ್ಕೆ ಆಗಿಲ್ಲ ಕೇಳಿದರೆ ದುಡ್ಡಿಲ್ಲ ಎಂದು ಹೇಳುತ್ತಾರೆ. ಇದುವರೆಗೆ ಎಷ್ಟು ರಸ್ತೆಗಳನ್ನು ಮಾಡಿದ್ದಾರೆ. ನೀವು ಹೊಸ ರಸ್ತೆಗಳನ್ನು ಮಾಡುವುದಕ್ಕಿಂತ ಈ ವರ್ಷ ತೆಗೆದುಕೊಂಡಿರತಕ್ಕ ರಸ್ತೆಗಳನ್ನು ಮೊದಲು ಸಂಪೂರ್ಣವಾಗಿ ಮಾಡಿ. ನಮ್ಮ ಮಾನ್ಯ ಚನ್ನಬಸಪ್ಪನವರಲ್ಲಿ ಬಹಳ ದೊಡ್ಡ ಗುಣ ಇದೆ ಮೈಸೂರಿನಿಂದ ಮಹಾರಾಜರ ಜೊತೆಯಲ್ಲಿ ಬಂದವರು ಯಾರು ಏನೂ ಕೇಳಿದರೂ ಮಂಜೂರು ಮಾಡುತ್ತಾರೆ. ಆದರೆ ಕೆಲಸ ಮಾತ್ರ ಆಗುವುದಿಲ್ಲ. ಅರ್ಜಿ ಕೊಟ್ಟ ಕೂಡಲೇ ಮಂಜೂರು ಆಗುತ್ತದೆ. ಹೋದವರ್ಷ ಅರ್ಜಿ ಕೊಟ್ಟಿದ್ದೂ ಏನು ಕೆಲಸ ಆಗಿಲ್ಲ ತಾವು ಆದೇಶ ಕೊಟ್ಟ ಮೇಲೆ ಅದನ್ನು ಕಾರ್ಯಗತ ಮಾಡುವಂತೆ ಆಜ್ಞೆಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಕ್ಷಣ ಕೊಡಬೇಕೆಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ. ರೋಡ್ಸ್ ಅಂಡ್ ಬ್ರಿಡ್ಜಸ್ ಫಂಡ್ ಇದು ಸ್ವಾಗತಾರ್ಹವಾದುದು. ಆದರೆ ಅದು ಕಾರ್ಯಗತವಾಗಬೇಕಾದುದು ಮುಖ್ಯ.

ಮಲೆನಾಡಿನ ರಸ್ತೆಗಳ ಬಗ್ಗೆ ಮಾನ್ಯ ಹನುಮೇಗೌಡರು ಹೇಳಿದರು ನನ್ನ ಕ್ಷೇತ್ರದಲ್ಲಿ ತೀರ್ಥಹಳ್ಳಿಯಿಂದ ಎಂಟೂರು ಮೈಲಿ ಆಚೆ ಕೈಮರ, ನಿಟ್ಟೂರು, ನಾಗೋಡಿ ಹುಲಿಕಲ್‌ವರೆಗೆ ಟಾರ್ ರೋಡು ಇದೆ ಆ ರಸ್ತೆಯಲ್ಲಿ ಮಾನ್ಯ ಚನ್ನಬಸಪ್ಪನವರು ಒಂದು ಸಾರಿ ಬರಬೇಕು. ಸರ್ಕಾರಿ ಕಾರಿನಲ್ಲಲ್ಲ ಸ್ವಂತ ಕಾರಿನಲ್ಲಿ ಒಂದುಸಾರಿ ಬರುತ್ತೀರ? ಎಲ್ಲಾ ಚನ್ನಬಸಪ್ಪನವರ ಗುಂಡಿಗಳಿಂದ ತುಂಬಿದೆ. ಅಂಗಿಗೆ ಹಾಕುವ ಗುಂಡಿಗಳಂತೆ ಎಲ್ಲಾ ಕಡೆ ರಸ್ತೆಗಳು ಕಿತ್ತುಹೋಗಿವೆ. ಗುಂಡಿಗಳಿಂದ ತುಂಬಿ ತುಳುಕುತ್ತ ಇರತಕ್ಕ

ರಸ್ತೆಗಳು ಶ್ರೀಮಾನ್ ಚನ್ನಬಸಪ್ಪನವರ ಕಣ್ಣಿಗೆ ಬಿದ್ದಿಲ್ಲವೆ? ಅವುಗಳನ್ನು ಆದಷ್ಟು ಬೇಗ ದುರಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಲೆನಾಡಿನಲ್ಲಿ ಸಣ್ಣ ಪ್ರಾಜೆಕ್ಟ್‌ಗಳು, ಕಾಲು ಸೇತುವೆಗಳು ಇವುಗಳು ಅಪಾರವಾಗಿ ಆಗಬೇಕಾಗಿವೆ. ಅಲ್ಲಿ ಪ್ರೈಮರಿ ಸ್ಕೂಲಿಗೆ, ಮಿಡ್ಲ್ ಸ್ಕೂಲಿಗೆ ಮಳೆಗಾಲದಲ್ಲಿ ಹಳ್ಳಿಯಿಂದ ಹೋಗತಕ್ಕ ಹುಡುಗರಿಗೆ ತುಂಬಾ ತೊಂದರೆಯಾಗುತ್ತದೆ

ಖಾಯಿಲೆ ಬಿದ್ದವರು ಹೋಗುವುದಕ್ಕೆ ಅನುಕೂಲವಾಗುತ್ತದೆ. 30 ಸಾವಿರ ರೂಪಾಯಿದ ಮೇಲೆ ಯಾವ ಕಾಲು ಸೇತುವೆಗೂ ಬೇಕಾಗುವುದಿಲ್ಲ. ನನ್ನ ಹತ್ತಿರ 300 ಕಾಲು ಸೇತುವೆಗಳ ಪಟ್ಟಿ ಇದೆ. ಆ ಕಾಲು ಸೇತುವೆಗಳನು ಆದಷ್ಟು ಬೇಗ ಮಾಡಿಕೊಟ್ಟರು ನಿಮಗೆ ಪುಣ್ಯ ಬರುತ್ತದೆ. ಆಮೇಲೆ ತಾವು ಮನೆ ಮುರಿಯುಂವ ಪ್ರೋಗ್ರಾಂ ಬಗ್ಗೆ ಸಾಕಷ್ಟು ಹೇಳಿದ್ದೀರಿ. ಪ್ರೈವೇಟ್ ಪಾರ್ಟಿಗೆ ಕೈ ಹಾಕುವುದಿಲ್ಲವೆಂದೂ ಸಹ ಹೇಳಿದ್ದೀರಿ. ಪ್ರೈವೇಟ್ ಪ್ರಾಪರ್ಟಿ ಎಂದರೆ ಯಾವುದು? 50-60 ವರ್ಷಗಳಿಂದ ಮನೆ ಕಟ್ಟಿಕೊಂಡಿರುವವರಿಗೆ ಅದರ ಮೇಲೆ ಹಕ್ಕು ಬಂದಿಲ್ಲವೆ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಆ ಪ್ರಶ್ನೆ ಬಂದರೆ ಮಾಡುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಅದಕ್ಕೆ ಬೇಕಾದ ಅಣತಿಯನ್ನು ಕಳುಹಿಸಿಕೊಡಬೇಕು. ಈಗ ಕಡೆಯಂದಾಗಿ ಒಂದು ಮಾತನ್ನು ಹೇಳುತ್ತೇನೆ ಕರಾವಳಿ ಪ್ರದೇಶದಲ್ಲಿ ಬಂದರುಗಳ ಬಗ್ಗೆ ಒಂದು ಬೇಡಿಕೆಯನ್ನು ಇಟ್ಟಿದ್ದೀರಿ. ಮಲ್ಪೆ, ಕಾರವಾರ ಮತ್ತು ಮಂಗಳೂರು ಭಾಗದ ಬಂದರುಗಳ ಅಭಿವೃದ್ಧಿಗೆ ಸಾಕಷ್ಟು ಅನುಕೂಲತೆ ಇದೆ. ಆದರೆ ಒಂದು ವಿಶೇಷವೇನೆಂದರೆ ನಾನು ಮಂಗಳೂರು ಮತ್ತು ಉಡುಪಿಗೆ ಹೋದಾಗ ನೋಡಿದೆ. ಮಂಗಳೂರು ಬಂದರಿನಲ್ಲಿ ಒಬ್ಬನೇ ಒಬ್ಬ ಕರ್ನಾಟಕದವನಾಗಲಿ, ದಕ್ಷಿಣ ಕನ್ನಡ ಜಿಲ್ಲೆಯವನಾಗಲಿ ಕೆಲಸ ಮಾಡತಕ್ಕವನು ಇಲ್ಲ. ಅಲ್ಲಿ ಕೆಲಸ ಮಾಡುವುದಕ್ಕೆ ಕೇರಳ ಮತ್ತು ತಮಿಳು ನಾಡಿನಲ್ಲಿ ಟ್ರೈನಿಂಗ್ ಆದವರು ಬರಬೇಕಂತೆ. ಅಂಥ ತರಬೇತಿ ಶಾಲೆಯನ್ನು ಮಂಗಳೂರಿನಲ್ಲೂ ಸಹ ತೆರೆದರೆ ಕರ್ನಾಟಕದ ಹುಡುಗರಿಗೆ ಉದ್ಯೋಗ ಲಭ್ಯವಾಗುತ್ತದೆ. ಅದನ್ನು ಜರೂರಾಗಿ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟು ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎ. ಎಂ. ಬೆಳ್ಳಿಯಪ್ಪ (ಮಡಕೇರಿ).—ಸನ್ಮಾನ್ಯ ಉಪಾಧ್ಯಕ್ಷರೇ, ಲೋಕೋಪಯೋಗಿ ಮಂತ್ರಿಗಳು ಹಾಗೂ ಸಣ್ಣ ನೀರಾವರಿ ಮಂತ್ರಿಗಳು ತಂದಂಥ ಬೇಡಿಕೆಗಳನ್ನು ಬೆಂಬಲಿಸುತ್ತಾ ಕೆಲವು ಮಾತುಗಳನ್ನು ಆಡಲಿಕ್ಕೆ ಇಚ್ಛಿಸುತ್ತೇನೆ. ನಾವು 1972ರಲ್ಲಿ ಆರಿಸಿ ಬಂದಿದ್ದೇವೆ. ಆ ಸಂದರ್ಭದಲ್ಲಿ ಮಾನ್ಯ ಚನ್ನಬಸಪ್ಪನವರು ಈ ಸದನದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದು ನನಗೆ ಜ್ಞಾಪಕಕ್ಕೆ ಬರುತ್ತದೆ, ಅದೇನೆಂದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಆರ್ಥಿಕ ಸುಧಾರಣೆಯಾಗಬೇಕಾದರೆ, ಒಂದು ಅಭಿವೃದ್ಧಿ ಕಾರ್ಯವಾಗಬೇಕಾದರೆ ಗ್ರಾಮಾಂತರ ಪ್ರದೇಶಗಳಿಗೆ ವಾಹನ ಸೌಕರ್ಯವನ್ನು ಒದಗಿಸಬೇಕು, ಅದಕ್ಕೋಸ್ಕರ ಪ್ರತಿಯೊಂದು ತಾಲ್ಲೂಕುಗಳಲ್ಲಿಯೂ 80 ಕಿಲೋಮೀಟರ್ ರಸ್ತೆಯನ್ನು ಮಾಡುತ್ತೇವೆಂದು ನಮ್ಮಿಂದ, ನಮ್ಮ ನಮ್ಮ ತಾಲ್ಲೂಕುಗಳಲ್ಲಿಯೂ ಗುದ್ದಲಿ ಪೂಜೆಯನ್ನು ಮಾಡಿಸಿದರು ಅದರ ಪ್ರಕಾರ 80 ಕಿಲೋಮೀಟರ್ ರಸ್ತೆಗಳನ್ನು ನಿರ್ಮಾಣ ಮಾಡಿದರು. ಆದರೆ ಈಗ 1972ನೇ ಇಸವಿ ಕಳೆದು 1976ರಲ್ಲಿದ್ದೇವೆ. ಈ ಸಂದರ್ಭದಲ್ಲಿ, ಕಾರಣಾಂತರಗಳಿಂದ ಉತ್ತರ ಕರ್ನಾಟಕದಲ್ಲಿ ಭೀಕರ ಕ್ಷಾಮ ಬಂದುದರಿಂದ ಮತ್ತು ಹಣಕಾಸಿನ ತೊಂದರೆಯಾದುದರಿಂದ ಈ ಒಂದು ಕೆಲಸ ಸಾಂಗವಾಗಿ ನಡೆಯಲಿಲ್ಲ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರು ಗುದ್ದಲಿಪೂಜೆ ಮಾಡುವ ದಿನ 80 ಕಿ ಮೀಟರ್ ರಸ್ತೆಯಾಗುತ್ತದೆಂದು ಎಷ್ಟು ಸಂತೋಷಪಟ್ಟರೋ ಈಗ ಅಷ್ಟೇ ಬೇಸರವನ್ನು ವ್ಯಕ್ತಪಡಿಸುತ್ತಿದ್ದಾರೆ. ಏಕೆಂದರೆ ವಾಹನ ಸೌಕರ್ಯವನ್ನು ಕಲ್ಪಿಸಿಕೊಡುತ್ತೇವೆಂದು ಹೇಳಿ ಮಾಡಿದ ರಸ್ತೆಗಳು ಕೆಟ್ಟು ಹೋಗಿ ಇಂದು ಗಾಡಿಗಳು ಸಹ ಹೋಗುವುದಕ್ಕಾಗದೆ ಜನಗಳೂ ಸಹ ನಡೆಯುವುದಕ್ಕೆ ಆಗದೆ ಬಹಳ ಕಷ್ಟ ಪಡುವಂತಹ ಸ್ಥಿತಿ ಬಂದಿದೆ. ಇನ್ನೊಂದು ಸಂತೋಷವೇನೆಂದರೆ ಈ ವರ್ಷ ಕೆಲವು ರಸ್ತೆಗಳ ಕೆಲಸವನ್ನು ಪಿ.ಡಬ್ಲ್ಯು.ಡಿ. ಯವರು ಶುರು ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಬಿನ್ನಹ ಮಾಡುವುದೇನೆಂದರೆ ದಯವಿಟ್ಟು ಮಲೆನಾಡು ಪ್ರದೇಶಗಳಲ್ಲಿ ಎಲ್ಲಿ 250-300 ಇಂಚು ಮಳೆ ಬೀಳುತ್ತದೋ ಅಂಥ ಕಡೆಗಳಲ್ಲಿ ರೂರಲ್ ಕಮ್ಯುನಿಕೇಶನ್ ರೋಡ್ಸ್ ಎಂದು ಏನು ಮಾಡಿದ್ದರೋ ಅವುಗಳನ್ನು ತಾಲ್ಲೂಕು ಬೋರ್ಡಿನವರಿಗೆ ರಿಪೇರಿ ಮಾಡುವುದಕ್ಕೆ ಬಿಡದೆ ಪಿ.ಡಬ್ಲ್ಯು.ಡಿ.ಯವರೇ ಎಲ್ಲಾ ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಕಾರಣವೇನೆಂದರೆ, ಉದಾಹರಣೆಗೆ ನಮ್ಮ ಮಡಿಕೇರಿಯಂತಹ ಸಣ್ಣ ತಾಲ್ಲೂಕು ಬೋರ್ಡಿಗೆ ದೊರೆಯುವ ಆದಾಯ ಬಹಳ ಕಡಿಮೆ ಅಂದರೆ ಕೇವಲ

ಒಂದು ಒಂದೂವರೆ ಲಕ್ಷ ರೂಪಾಯಿ ಅದರಲ್ಲಿ ತಾಲ್ಲೂಕು ಬೋರ್ಡಿನವರು ಬೇಕಾದಷ್ಟು ಕೆಲಸಗಳನ್ನು ಮಾಡಿಸಬೇಕಾಗಿರುತ್ತದೆ. ಅಂಥ ಸಂದರ್ಭದಲ್ಲಿ ರೂರಲ್ ಕಮ್ಯುನಿಕೇಷನ್ ರಸ್ತೆಗಳನ್ನು ಪಿ.ಡಬ್ಲ್ಯು.ಡಿ. ಯವರು ತೆಗೆದುಕೊಳ್ಳದೆ ಬಿಟ್ಟರೆ ಅವರಿಗೆ ಕೆಲಸ ಮಾಡಿಸುವುದಕ್ಕೆ ಆಗುವುದಿಲ್ಲ. ಈ ಒಂದು ಸಂದರ್ಭದಲ್ಲಿ ಶ್ರೀಮಾನ್ ಲಿಂಗಪ್ಪನವರು ಕೆಲವು ವಿಷಯಗಳನ್ನು ಮಾತನಾಡಿದರು, ಆದರೆ ನಾನು ಹೇಳಬೇಕಾದರೆ ಮಾನ್ಯ ಚನ್ನಬಸಪ್ಪನವರು ಬಹಳ ದಕ್ಷರು ಪ್ರಾಮಾಣಿಕತೆಯಿಂದ ಕೆಲಸ ಮಾಡುವ ಮಂತ್ರಿಗಳು ಮತ್ತು ಅನುಭವಶಾಲಿಗಳು. ಅವರು ಬಂದಮೇಲೆ ಎಂದೂ ಇಲ್ಲದಂತಹ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. (1) ರೂರಲ್ ಕಮ್ಯುನಿಕೇಶನ್ ರೋಡ್ (2) ಬ್ರಿಜಸ್ ಮತ್ತು ರೋಡ್ ಫಂಡ್ ಮತ್ತು (3) ಬ್ರಿಜಸ್ ಮತ್ತು ರೋಡ್ ಕಾರ್ಪೊರೇಷನ್ ಎಂಬುದಾಗಿ ಎಂದೂ ಇಲ್ಲದಂತಹ ಮೂರು ಯೋಜನೆಗಳನ್ನು ಹಾಕಿಕೊಂಡು ಕರ್ನಾಟಕ ರಾಜ್ಯದಲ್ಲಿ ಆದಷ್ಟು ಸೇತುವೆಗಳನ್ನು ರಸ್ತೆಗಳನ್ನು ಮಾಡಿ ದೇಶದ ಆರ್ಥಿಕ ಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಪಡುವಂತಹ ವ್ಯಕ್ತಿ. ಈ ಒಂದು ದಿಸೆಯಲ್ಲಿ ಬ್ರಿಜ ಕಾರ್ಪೊರೇಶನ್ನಿನ ಒಂದು ವಿಚಾರವನ್ನು ನೋಡಿದರೆ ಇದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆಂಬ ದಂ ಕಾಣುತ್ತದೆ. ಇವತ್ತಿನ ರಿಪೋರ್ಟನ್ನು ನೋಡಿದಾಗ ದುಡ್ಡಿಲ್ಲದೆ ಇದ್ದರೂ ಕಂಟ್ರಾಕ್ಟರಿನಿಂದ ಹಣವನ್ನು ತೆಗೆದುಕೊಂಡು ಈ ವರ್ಷ 110 ಲಕ್ಷ ರೂಪಾಯಿಗಳ ಸೇತುವೆಯನ್ನು ಮಾಡಲಿಕ್ಕೆ ಹೊರಟಿದ್ದಾರೆ ಆದರೆ ಈ ಯೋಜನೆಯಲ್ಲಿ ಕೆಲವೇ ಜಿಲ್ಲೆಗಳನ್ನು ತೆಗೆದುಕೊಂಡಿದ್ದಾರೆ. ಈ ವರ್ಷ ಈ ಒಂದು ಯೋಜನೆಯಲ್ಲಿ ಮಲೆನಾಡಿನಷ್ಟೇ ರತಕ್ಕ ಹಿಂದುಳಿದ ಇನ್ನು ಕೆಲವು ಜಿಲ್ಲೆಗಳನ್ನು ಸೇರಿಸಿಕೊಳ್ಳಬೇಕೆಂದು ಹೇಳಬಯಸುತ್ತೇನೆ. ಇದಕ್ಕೆ ಮಲೆನಾಡಿನ ಚಿಕ್ಕಮಗಳೂರು ಜಿಲ್ಲೆಯನ್ನು ಮಾತ್ರ ಸೇರಿಸಿಕೊಂಡಿದ್ದಾರೆ. ಈ ಒಂದು ಯೋಜನೆಯಲ್ಲಿ ಕೊಡಗು ಜಿಲ್ಲೆಯನ್ನು ಸಹ ಸೇರಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅದು ಚೆನ್ನಾಗಿ ಉತ್ಪತ್ತಿ ಬರುವಂತಹ ಸ್ಥಳ. ಕೊಡಗು ಜಿಲ್ಲೆಯಂತಹ ಇನ್ನು ಬೇಕಾದಷ್ಟು ಜಿಲ್ಲೆಗಳ ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನೂ ವಾಹನ ಸೌಕರ್ಯಗಳು ಲಭ್ಯವಾಗಿಲ್ಲ ಅಂಥ ಪ್ರದೇಶಗಳನ್ನು ಈ ಒಂದು ಯೋಜನೆಯಲ್ಲಿ ಅಳವಡಿಸಿಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ಮಡಿಕೇರಿ ಕ್ಷೇತ್ರ ಮತ್ತು ಜಿಲ್ಲೆಯ ವಿಷಯಗಳನ್ನು ಹೇಳಬೇಕಾದರೆ ಕೆಲವು ಕೆಲಸಗಳನ್ನು ತೆಗೆದುಕೊಂಡು 3-4 ವರ್ಷಗಳಾದರೂ ಆ ಕೆಲಸಗಳು ಪೂರ್ಣವಾಗಿಲ್ಲ In page 507 of the Budget Book —Coorg Division ನಲ್ಲಿ Improvements to Kadmakal Subramanya Road—Estimated cost of the works is Rs. 12,47,000/- ಎಂದು ಮಾಡಿದ್ದೀರಿ ಆದರೆ 1974-75ರಲ್ಲಾಗಲಿ ಅಥವಾ 1976-77ರಲ್ಲಾಗಲಿ ಒಂದು ಕಾಸು ದುಡ್ಡನ್ನು ಖರ್ಚು ಮಾಡಿಲ್ಲ ಮಡಗಿಯೂ ಇಲ್ಲ ಈ ಕಡಮಕಲ—ಸುಬ್ರಮಣ್ಯ ರಸ್ತೆಯಾದರೆ ಮಡಕೇರಿಯಿಂದ ಸುಬ್ರಮಣ್ಯದ ರೈಲ್ವೇ ನಿಲ್ದಾಣಕ್ಕೆ ಹೋಗಲು ಕೇವಲ 17-18 ಮೈಲಿಗಳಾಗುವುದರಿಂದ ಜನತೆಗೆ ಬಹಳ ಅನುಕೂಲವಾಗುತ್ತದೆ. 12-14 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಈ ರಸ್ತೆಯನ್ನು ನಿರ್ಮಾಣ ಮಾಡಿದರೆ ಆ ಸ್ಥಳದ ಜನಗಳಿಗೆ ಬಹಳ ಅನುಕೂಲವಾಗುತ್ತದೆ ಆದುದರಿಂದ ಈ ಒಂದು ರಸ್ತೆಯ ಕೆಲಸವನ್ನು ಜರೂರಾಗಿ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ In page 532 of the Budget Book Coorg Division: Construction of a Bridge at 1.8 km on Korakatte—Thittimathi Road, Estimated cost of the work is Rs. 1,65-000 but the amount provided under the budget for 1975-76 is Rs. 20,000/-...... ಎಂದು ಇದೆ. ಈ ವರ್ಷ ಕೂಡ 20 ಸಾವಿರ ರೂಪಾಯಿಗಳನ್ನು ಇಟ್ಟಿದ್ದೀರಿ. ಆದರೆ ನಾನು ಬಹಳ ವ್ಯಸನದಿಂದ ಹೇಳುವುದೇನೆಂದರೆ ತಿಟ್ಟಿಮತ್ತಿ ಮತ್ತು ಬಾಳಿದಲೆ ರಸ್ತೆಯ ಮಧ್ಯೆ ಕೋಣನಕಟ್ಟೆ ಹತ್ತಿರ) ಒಂದು ಸೇತುವೆ ಆಗದೆ 8-10 ವರ್ಷಗಳಿಂದ ಹಾಗೆಯೇ ಇದೆ. ಏನು ಕೆಲಸವೂ ಆಗಿಲ್ಲ. ಸರ್ಕಾರದವರು ಅಲ್ಲಿ ಒಳ್ಳೆಯ ಟಾರ್ ರಸ್ತೆ ಸೇತುವೆ ಆಗಬೇಕೆಂದೂ ಸೇತುವೆಗಾಗಿ 1,65,000 ರೂಪಾಯಿಗಳನ್ನು ಮಡಗಿದ್ದೂ ಒಂದು ಕಾಸು ದುಡ್ಡನ್ನು ಅದಕ್ಕೆ ಹಾಕದಿರುವುದನ್ನು ನೋಡಿ ಜನಗಳು ಸರ್ಕಾರವನ್ನು ದೂಷಿಸುತ್ತಿದ್ದಾರೆ. ಆದಕಾರಣ ದಯಮಾಡಿ ಈ ವರ್ಷವಾದರೂ ಆ ಕೆಲಸವನ್ನು ತೆಗೆದುಕೊಂಡು ಆದಷ್ಟು ಬೇಗ ಪೂರೈಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ರೋಡಿನ ಬಗ್ಗೆ ಹೇಳಬೇಕು ಎಂದರೆ ಮಾದಾಪುರ, ಸುರಲಬಿ ರೋಡು. ಆ ಪ್ರದೇಶ ಬಹಳ ಹಿಂದುಳಿದ ಪ್ರದೇಶವಾಗಿದೆ. ಆ ಸ್ಥಳಕ್ಕೆ ರಸ್ತೆ ಆಗಬೇಕೆಂದು ದಿವಂಗತ ಮಲ್ಲಪ್ಪನವರ ಕಾಲದಲ್ಲಿ ಒಂದು ದೊಡ್ಡ ಬೇಡಿಕೆ ಇತ್ತು, ಆದರೆ ಅಲ್ಲಿಂದ ಇಲ್ಲಿಯವರೆಗೂ ಕೂಡ ಆ ಒಂದು ರಸ್ತೆ ಆಗಿಲ್ಲ, ಈಗ ಆ ಒಂದು ರಸ್ತೆಗೆ 3 ಲಕ್ಷ 18 ಸಾವಿರ ರೂಪಾಯಿ ಖರ್ಚು ಮಾಡಿದರೂ ಕೂಡ

ಅದು ಅರ್ಧ ಕೆಲಸ ಮುಗಿದು ಹಾಗೆ ಉಳಿದಿದೆ. ಇದುವರೆಗೂ ಆ ಸುರಲಬಿ ರೋಡಿಗೆ ಜಲ್ಲಿ ಟಾರ್ ಕೂಡ ಹಾಕಿಲ್ಲ, ಈಗ ಆ ಪ್ರದೇಶ ಬಹಳ ಹಿಂದುಳಿದ ಪ್ರದೇಶವಾಗಿರುವುದರಿಂದ ಅಲ್ಲಿ ರಸ್ತೆ ಮಾಡಿದರೆ ಬಹಳ ಜನರಿಗೆ ಅನುಕೂಲ ಒದಗಿಸಿದಂತೆ ಆಗುತ್ತದೆ ಎಂದು ಹೇಳುತ್ತೇನೆ. ಇನ್ನು ಹೊಸ ಕೆಲಸಗಳ ಬಗ್ಗೆ ಹೇಳಬೇಕು ಎಂದರೆ ಮಡಕೇರಿ ತಾಲ್ಲೋಕಿನಲ್ಲಿ ಮತ್ತು ವೀರರಾಜಪೇಟೆ ತಾಲ್ಲೋಕಿನಲ್ಲಿ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ ಮತ್ತೆ ಮಡಕೇರಿಗೆ 5 ಮೈಲಿ ದೂರದಲ್ಲೇ ಕಾಟೂರು ಹೊಳೆ ಇದೆ. ಆದನ್ನು ತೆಗೆದ ಕೊಳ್ಳಬೇಕು ಎಂದು ಹೇಳುತ್ತೇನೆ. ಈ ಒಂದು ಬ್ರಿಡ್ಜ್ ತೆಗೆದುಕೊಳ್ಳುವುದರಿಂದ ಬಹಳ ಜನರಿಗೆ ಅನುಕೂಲವಾಗುತ್ತದೆ, ಇನ್ನೊಂದು ಕೆಲಸ ಎಂದರೆ ನಾಪೋಕ್ಲು ನಾಡಿನಲ್ಲಿ ಕುಪ್ಪೊಟ್ಟು ಹೊಳೆಗೆ ಒಂದು ಸೇತುವೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನು ವೀರರಾಜಪೇಟೆಯಲ್ಲಿ ಚಾಮಿಯಾಲ್ ಬ್ರಿಡ್ಜ್ ಇದೆ ಇದರ ವಿಷಯದಲ್ಲಿ ಸುಮಾರು ಎರಡು ವರ್ಷದಿಂದ ನಾನು ಮತ್ತು ಅಲ್ಲಿನ ಶಾಸಕರು ಸೇರಿ ಬೇಡಿಕೆಗಳನ್ನು ಕೊಟ್ಟಿದ್ದೇವೆ ಆದರೆ ಈ ವರೆಗೆ ಏನೂ ಆಗಿಲ್ಲ ಎಂದು ಹೇಳುತ್ತಿದ್ದೇನೆ. ಇನ್ನು ಮತ್ತೊಂದು ಸೇತುವೆ ವಿಷಯ ಹೇಳಬೇಕು ಎಂದರೆ ಮಡಕೇರಿ ತಾಲ್ಲೋಕಿನಲ್ಲಿ ಕಕ್ಕಬೆ ಎಂಬ ಸ್ಥಳದಲ್ಲಿ ಅಲ್ಲಿ ಕಟ್ಟಿದ ಕಮ್ಮಿ ಎತ್ತರದ ಸೇತುವೆ 1974–75ರ ಮಳೆಗಾಲದಲ್ಲಿ ಬಂದ ನೀರು ತಡೆದು ಅದರ ಅಕ್ಕಪಕ್ಕದ ಮನೆಗಳಿಗೆ ಸುಮಾರು 1 ಲಕ್ಷ ರೂಪಾಯಿ ನಷ್ಟ ಡ್ಯಾಮೇಜ್ ಆಯಿತು. ಮೊನ್ನೆ ಇದರ ಬಗ್ಗೆ ಚೀಫ್ ಇಂಜಿನಿಯರ್ ಬಳಿ ಹೋಗಿ ಈ ಒಂದು ಬಿಡ್ಜನ್ನು ಎತ್ತರ ಮಾಡಿ ನೀರು ಅಡ್ಡಬರದಂತೆ ನೋಡಿ ಕೊಳ್ಳುವುದಕ್ಕೆ ಆದಷ್ಟು ಬೇಗ ಕೆಲಸ ಮಾಡಿಸಿಕೊಡಬೇಕೆಂದು ಕೇಳಿಕೊಂಡಿದ್ದೇವೆ. ಇನ್ನು ಕೊನೆಯದಾಗಿ ವೀರರಾಜಪೇಟೆಯ ಇರುಪು ರೋಡ್‌ಗೆ ಹಣ ಸ್ಯಾಂಕ್ಷನ್ ಆದರೂ ಕೂಡ ಕೆಲಸ ಆಗಿಲ್ಲ, ಅದು ಹಾಗೆ ನಿಂತಿದೆ, ಆದುದರಿಂದ ಈ ಒಂದು ರಸ್ತೆಯನ್ನು ತೆಗೆದುಕೊಳ್ಳಬೇಕೆಂದು ಹೇಳಿ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟಂತ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜೆ. ಎಲ್. ಕಬಾಡಿ (ಬಳ್ಳೊಳ್ಳಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಮಂಡಿಸಿರತಕ್ಕ ಬೇಡಿಕೆ ಮೇಲೆ ನಾನು ವಿರೋಧಿಸಿ ಕೆಲವು ಸೂಚನೆಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ಈ ರಸ್ತೆ ನಿರ್ಮಾಣ ಕಾರ್ಯದ ಬಗ್ಗೆ ಹೇಳಬೇಕು ಎಂದರೆ ಈಗಾಗಲೇ ಅನೇಕ ಮಾನ್ಯ ಸದಸ್ಯರು ನಮ್ಮ ಕೆಲವು ಜಿಲ್ಲೆಗಳಲ್ಲಿ ಎಷ್ಟು ಕೆಲಸಗಳಾಗಬೇಕಾಗಿತ್ತು ಅಷ್ಟು ಕೆಲಸ ಆಗಿಲ್ಲ ಎಂದು ಹೇಳಿದರು, ಅದೇರೀತಿ ಹೋದ ವರ್ಷದಿಂದ ನಾವು ಎಷ್ಟು ಒತ್ತಾಯ ಮಾಡಿದರೂ ಸಹ ಪಿ.ಡಬ್ಲ್ಯು.ಡಿ. ಮಿನಿಸ್ಟರು ನಮ್ಮ ಜಿಲ್ಲೆಗೆ ಹೆಚ್ಚು ಹಣ ಒದಗಿಸದೇ ಎಷ್ಟೋ ಬ್ರಿಡ್ಜ್‌ಗಳು ಕೆಲಸ ಪೂರ್ತಿಯಾಗದೆ ಹಾಗೆ ಉಳಿದಿವೆ, ಅದೆ ಮಳೆಗಾಲದಲ್ಲಿ ಒಂದು ತಾಲ್ಲೋಕು ಮುಟ್ಟಬೇಕು ಎಂದರು ತಿಂಗಳುಗಟ್ಟಲೆ ಕಾಲಾವಕಾಶ ಬೇಕಾದಂತ ಪರಿಸ್ಥಿತಿ ಬಂದಿದೆ. ಇದರ ಸಲುವಾಗಿ ನಾನು ಹಿಂದೆ ಅಸೆಂಬಿಯಲ್ಲಿ ಕೊಶ್ಚನ್ ಹಾಕಿದರೆ ಮಾನ್ಯ ಚನ್ನಬಸಪ್ಪನವರು ಈ ವರ್ಷ ಕೆಲವು ಬ್ರಿಡ್ಜಸ್‌ಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಇವೊತ್ತು ಇಂಡಿ ತಾಲ್ಲೋಕಿನಲ್ಲಿ ಕಲ್ಲಾಳಿ ಹಳ್ಳ, ಹಲಸಂಗಿ ಹಳ್ಳ ಮತ್ತು ವೀರ ಶಿವನಾಳ ಹಳ್ಳಗಳು ತುಂಬಿ ಹರಿಯುವುದರಿಂದ ಅಲ್ಲಿನ ಜನಗಳು ಒಂದು ಒಂದು ತಾಲ್ಲೋಕಿನಿಂದ ಇನ್ನೊಂದು ತಾಲ್ಲೋಕಿಗೆ ಹೋಗುವುದಕ್ಕೆ ಅವಕಾಶ ಇರುವುದಿಲ್ಲ. ಇದರ ಬಗ್ಗೆ ನಾನು ಪ್ರಶ್ನೆ ಕೇಳಿದಕ್ಕೆ ಮಾನ್ಯ ಮಂತ್ರಿಗಳು ಕಲ್ಲಾಳಕ್ಕೆ ಸೇತುವೆ ಕಟ್ಟುವುದಕ್ಕೆ ಏರ್ಪಾಡು ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು. ಆ ಒಂದು ಭರವಸೆಯನ್ನು ಮಾನ್ಯ ಮಂತ್ರಿಗಳು ಪೂರೈಸಿ ಕೊಡುತ್ತಾರೆ ಎಂದು ನಾನು ಆಸೆಮಾಡುತ್ತೇನೆ. ಇನ್ನು ರಾಷ್ಟ್ರೀಯ ಹೆದ್ದಾರಿ 13-ಸೊಲ್ಲಾಪುರ, ಚಿತ್ರದುರ್ಗ, ರಸ್ತೆ ಬಹಳ ಮಂದಗತಿಯಲ್ಲಿ ಕೆಲಸವಾಗುತ್ತಿದೆ. ಆ ರಸ್ತೆಯಲ್ಲಿ ಯಾವರೀತಿ ಪ್ರಗತಿಯಾಗಿಲ್ಲ, ಎಷ್ಟೋ ಸೇತುವೆಗಳು ಆಗದೇ ಇರುವುದರಿಂದ ಮಳೆಗಾಲದಲ್ಲಿ ಅಲ್ಲಿನ ಜನರಿಗೆ ಬಹಳ ತೊಂದರೆಯಾಗುತ್ತದೆ ಅಷ್ಟೇ ಅಲ್ಲದೆ ಅಲ್ಲಿನ ರಸ್ತೆಗಳಿಗೆ ಟಾರು ವಗೈರೆ ಯಾವುದನ್ನು ಹಾಕಿಲ್ಲ ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದರೆ ಅವರು ಸರ್ಕಾರದಿಂದ ಹಣ ಬಂದಿಲ್ಲ ಎಂದು ಹೇಳುತ್ತಾರೆ, ಆದುದರಿಂದ ಇದರ ಬಗ್ಗೆ ಸರ್ಕಾರದವರು ಹಣ ಒದಗಿಸಿ ತೀವ್ರರೀತಿಯಲ್ಲಿ ಕೆಲಸವಾಗುವಂತ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ತಾವು ಇವುಗಳಿಗೆ ಕಡಿಮೆ ಹಣ ಕೊಟ್ಟಿದ್ದರಿಂದ ಕೆಲಸ ಕಾರ್ಯ ಸ್ಥಗಿತವಾಗಿದೆ ಎಂದು ತಿಳಿದುಕೊಂಡಿದ್ದೇನೆ.

ಇನ್ನು ಬಿಜಾಪುರ ಪಂಡರಾಪುರ ರಸ್ತೆ ಬಗ್ಗೆ ಹೇಳುವುದಾದರೆ ಕನ್ನೂರು, ಇಂಚಗೆರೆ, ಜಿಗಜೋಣಿ, ದೇವರನಿಂಬರಗಿ, ಮತ್ತು ಚಡಚಣ ಗ್ರಾಮಗಳಿಗೆ ಸಂಪರ್ಕ ಬೆಳೆಸುವ ದೃಷ್ಟಿಯಿಂದ 1954 ರಲ್ಲಿ ಬರಗಾಲ ಬಂದಾಗ ಈ ರಸ್ತೆ ಕಾಮಗಾರಿಯನ್ನು ಪ್ರಾರಂಭ ಮಾಡಿದರು ಆದರೆ ಇಲ್ಲಿಯವರೆಗೆ ಆ ರಸ್ತೆಯನ್ನು ಪೂರ್ತಿಮಾಡುವುದಿರಲಿ, ಜೆಲ್ಲಿ ವಗೈರೆ ಹಾಕುವುದಕ್ಕೂ ಕ್ರಮ ತೆಗೆದುಕೊಂಡಿಲ್ಲ ಇದು ಬಹಳ ವಿಷಾದನೀಯವಾದ ಸಂಗತಿ. ಇದರ ಬಗ್ಗೆ ಅಧಿಕಾರಿಗಳನ್ನು ಕೇಳಿದರೆ ನಮಗೆ ಹಣ ಬಂದಿಲ್ಲ ಎಂದು ಹೇಳುತ್ತಾರೆ. ಆದುದರಿಂದ ಸರ್ಕಾರದವರು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಈಗ ಸ್ಟೇಟ್ ಹೈವೇ ಏನು ಇದೆ ಇದು ಟೌನ್ ಪ್ರದೇಶದಲ್ಲಿ ಹಾದು ಹೋಗುವಾಗ ಅದರ ಅಗಲ 50 ಅಡಿ ಇರಬೇಕೆಂದು ಮಾಡಿ ಕೆಲವು ಮನೆಗಳನ್ನು ಕೆಡಹುವುದು ಇದೆ, ಆದುದರಿಂದ ಅದನ್ನು 40 ಅಡಿ ಮಾಡಿದರೆ ಬಹಳ ಜನರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಇನ್ನು ಕಟ್ಟಡಗಳ ವಿಚಾರದಲ್ಲಿ ಹೇಳಬೇಕಾದರೆ ಬಿಜಾಪುರ ಸಿವಿಲ್ ಹಾಸ್ಪಿಟಲ್‌ಗೆ ಸಿಬ್ಬಂಧಿ ವರ್ಗಕ್ಕೆ ಅಗತ್ಯವಾಗಿ ಬೇಕಾಗಿರುವ ವಸತಿ ಸೌಕರ್ಯವನ್ನು ಒದಗಿಸಿಲ್ಲ, ಅಲ್ಲಿ ತರಬೇತಿ ಹೊಂದಿರತಕ್ಕ ದಾದಿಗಳಿಗೆ ಅಲ್ಲಿ ವಸತಿ ಸೌಕರ್ಯವಿಲ್ಲ, ಅಷ್ಟೇ ಅಲ್ಲದೇ ಬಟ್ಟಬಯಲಾಗಿರತಕ್ಕ ಈ ದವಾಖಾನೆಗೆ ಒಂದು ಕಾಂಪೌಂಡ್ ಹಾಕಿಕೊಡಬೇಕೆಂದು ನಾವು ಪದೇ ಪದೇ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದರೂ ಕೂಡ ಇಲ್ಲಿಯವರೆಗೂ ಸರ್ಕಾರದವರು ಈ ಒಂದು ಸೌಕರ್ಯವನ್ನು ಕಲ್ಪಿಸಲು ಹಣ ಒದಗಿಸದಿರುವುದು ಬಹಳ ವಿಷಾದನೀಯ. ಇನ್ನು ದೊಮ್ಮಾಳ ಕೆರೆ ಹೊರ್ತಿಕೆರೆ ಒಡೆದು ಹೋದ ಬಗ್ಗೆ ಹೇಳಬೇಕು ಎಂದರೆ ಅಲ್ಲಿ ಕೆರೆಯ ಏರಿಯನ್ನು ಉಟಾವಣಿ ಮಾಡದೇ ಇರುವುದೇ ಕಾರಣವಾಗಿದೆ, ಇದನ್ನು ಅಲ್ಲಿ ಕೆಲಸ ಮಾಡಿಸುತ್ತಿದ್ದ ಜೂನಿಯರ್ ಇಂಜಿನಿಯರು ಮತ್ತು ಅಸಿಸ್ಟೆಂಟ್ ಇಂಜಿನಿಯರ್ ಅವರು ಸೇರಿಕೊಂಡು ಇದರಲ್ಲಿ ಸುಮಾರು 25 ಸಾವಿರ ರೂಪಾಯಿವರೆಗೆ ದುಡ್ಡು ಹೊಡೆದಿದ್ದಾರೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಇನ್ನು ನಮ್ಮ ಕಡೆಗಳಲ್ಲಿ ಎಂ. ಎಲ್. ಎ. ಕಡೆಗಳಿಂದ ರಸ್ತೆಗಳನ್ನು ಉದ್ಘಾಟನೆ ಮಾಡಿಸಿದರು. ಆದರೆ ಆ ರಸ್ತೆಯನ್ನು ಕಾಮಗಾರಿ ಇನ್ನು ತೆಗೆದುಕೊಂಡಿಲ್ಲ, ಇದರಿಂದಾಗಿ ಇಂಡಿ, ಸಿಂದಗಿ, ಸಿಂಬಾಳ, ವಯಾ ಹಂಜಿಗೆ ಊರುಗಳಿಗೆ ಸಂಬಂಧಪಟ್ಟ ಹಾಗೆ ಹಣ ಒದಗಿಸಿಲ್ಲ, ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಸರ್ಕಾರಕ್ಕೆ ವರದಿ ಕಳುಹಿಸಿದ್ದರೂ ಕೂಡ ಸರ್ಕಾರದವರು ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಆದುದರಿಂದ ಇದನ್ನು ಬೇಗ ತೆಗೆದು ಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಈಗ ಏನಾಗಿದೆ ಎಂದರೆ ಅಲ್ಲಿ ಎಂ. ಎಲ್. ಎ. ಗಳ ಕಡೆಯಿಂದ ರಸ್ತೆಗಳನ್ನು ಉದ್ಘಾಟನೆ ಮಾಡಿಸಿರುವುದರಿಂದ ಎಂ. ಎಲ್. ಎ. ಗಳಿಗೆ ಅವಮಾನವಾಗುತ್ತಿದೆ. ಆದುದರಿಂದ ಇದನ್ನು ಆದಷ್ಟು ಬೇಗ ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ಹೇಳುತ್ತೇನೆ. ಇನ್ನು ಸರ್ವೀಸಸ್ ವಿಚಾರದಲ್ಲಿ ಹೇಳಬೇಕು ಎಂದರೆ ಎಕ್ಸ್ ಬಾಂಬೆ ಸ್ಟೇಟ್‌ನಿಂದ ಬಂದಿರತಕ್ಕ ಸಿಬ್ಬಂದಿ ವರ್ಗದ ಸೀನಿಯಾರಿಟಿ ಲಿಸ್ಟ್ ಇನ್ನು ಇತ್ಯರ್ಥವಾಗಿಲ್ಲ ಇದರ ಬಗ್ಗೆ ಹೈಕೋರ್ಟಿನವರು, ಸುಪ್ರೀಂ ಕೋರ್ಟ್ ಕೂಡ ಆದೇಶ ಕೊಟ್ಟಿದ್ದರೂ ಕೂಡ ಇಲ್ಲಿಯವರೆಗೂ ಸೀನಿಯಾರಿಟಿ ಲಿಸ್ಟ್ ಆಗಿಲ್ಲ ಇದರಿಂದ ಬಾಂಬೆ ಸರ್ಕಾರದಿಂದ ಬಂದಿರತಕ್ಕಂತಹ ಸಿಬ್ಬಂದಿ ವರ್ಗದವರಿಗೆ ಬಹಳ ಅನ್ಯಾಯವಾಗಿದೆ. ಇನ್ನು ಅಸಿಸ್ಟೆಂಟ್ ಇಂಜಿನಿಯರಾಗಲೀ ಫಸ್ಟ್ ಡಿವಿಜನ್ ಗುಮಾಸ್ತರದು ಆಗಲಿ, ಬೇರೆ ಯಾವುದೇ ಒಂದು ವರ್ಗದವರು ಆಗಲಿ ಅದನ್ನು ಸರಿಪಡಿಸಲಿಕ್ಕೆ ತೀವ್ರಗತಿಯಲ್ಲಿ ಆದೇಶ ನೀಡಿ ಈ ಸೀನಿಯಾರಿಟಿ ಬಗ್ಗೆ ಇತ್ಯರ್ಥ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನು ಸಣ್ಣ ನೀರಾವರಿ ಯೋಜನೆ ಬಗ್ಗೆ ಹೇಳಬೇಕಾದರೆ, ಮಹಾರಾಷ್ಟ್ರದಲ್ಲಿ ಭೀಮಾ ನದಿಗೆ ಉಜನಿ ಹತ್ತಿರ ಬರೇಜ್ ಕಟ್ಟುವುದರಿಂದ ನಮ್ಮ ರಾಜ್ಯದ ಉಮರ, ಸಂಖ, ಧೂಳಖೇಡ ಶಿರನಾಳ, ಅಣಜಿ ಬರಗುಡಿ, ಇಂತಹಾ ಏನು ನೀರಾವರಿ ಯೋಜನೆಗಳು ಇವೆ, ಇದಕ್ಕೆ ದೊಡ್ಡ ತಡೆ ಬರುತ್ತದೆ ಎಂದು ಹೇಳುತ್ತೇನೆ,

ಆದುದರಿಂದ, ಕಡನಿ. ಭೂಯ್ಯಾರ್ ಮತ್ತು ಧೂಳಖೇಡ ಹತ್ತಿರ ಬ್ಯಾರೇಜ್ ಕಟ್ಟುವುದರಿಂದ ಅಲ್ಲಿನವರೆಗೆ ಬೇಸಾಯ ಮಾಡಲಿಕ್ಕೆ ಬಹಳ ಅನುಕೂಲವಾಗುತ್ತದೆ. ಮತ್ತು ಭೀಮಾ ನದಿ ನೀರನ್ನು ಸರಿಯಾಗಿ ನಮ್ಮ ಸರ್ಕಾರದವರು ಉಪಯೋಗಿಸಿಕೊಂಡಂತಾಗುತ್ತದೆ. ಅಷ್ಟೇ ಅಲ್ಲದೆ, ಮಹಾರಾಷ್ಟ್ರ ಸರ್ಕಾರದವರು ಭೀಮಾ ನದಿಗೆ ಅಡ್ಡಲಾಗಿ ಅಣೆಕಟ್ಟನ್ನು ಕಟ್ಟುವುದಿದ್ದರೆ, ನಮ್ಮ ರಾಜ್ಯದ

ಯೋಜನೆಗಳಿಗೆ ಸಾಕಾಗುವಷ್ಟು ನೀರನ್ನು ಬಿಟ್ಟು, ವಿಕ್ರಿದಕ್ಕೆ ಬೇಕಾದರೆ ಕಟ್ಟಿಕೊಳ್ಳಿರಿ ಎಂದು ಹೇಳಬೇಕಾಗಿದೆ. ಅಷ್ಟೇ ಅಲ್ಲದೆ, ಕಡಾ, ಭೂಯ್ಯಾರ್ ಮತ್ತು ಧೂಳಖೇಡ ಹತ್ತಿರ ಬ್ಯಾರೇಜುಗಳನ್ನು ಅತ್ಯವಶ್ಯಕವಾಗಿ, ಕೂಡಲೇ ಕಟ್ಟಬೇಕು ಎಂದು ನಾನು ಸರ್ಕಾರಕ್ಕೆ ತಿಳಿಸ ಬಯಸುತ್ತೇನೆ.

12-00 NOON

ಮಾನ್ಯ ಮಂತ್ರಿಗಳು ವಿಜಾಪುರಕ್ಕೆ ಬಂದಿದ್ದಾಗ, ಕಡೆಯುಪಕ್ಷ ಉಮರಾಣಿ ಹತ್ತಿರ ನೀರಾವರಿ ಯೋಜನೆಯ ಕಾಮಗಾರಿಯನ್ನು ಕೈಗೊಳ್ಳುತ್ತೇವೆ ಎಂದು ಹೇಳಿದ್ದರು. ಇದರ ಬಗ್ಗೆ ಸರ್ಕಾರದ ಮಂಜೂರಾತಿಯನ್ನು ಪಡೆದು ಮಾಡುವುದಾಗಿ ತಿಳಿಸಿದ್ದರೂ ಕೂಡ, ಇಲ್ಲಿಯವರೆಗೆ ಅದರ ಬಗ್ಗೆ ಯಾವ ಕೆಲಸ ಕಾರ್ಯವೂ ಆಗಿಲ್ಲದಿರುವುದು ಬಹಳ ವಿಷಾದನೀಯ. ಅಷ್ಟೇ ಅಲ್ಲದೆ ಧೂಳಖೇಡ ಕೆರೆಯ ಕಾಮಗಾರಿಯನ್ನು ತೆಗೆದುಕೊಂಡಿಲ್ಲ; ಚಡಚಣ ಕೆರೆಯ ಕಾಮಗಾರಿಯನ್ನು ತೆಗೆದುಕೊಂಡಿಲ್ಲ; ತುಳಜಾಭವಾನಿವಾರಿ ಹತ್ತಿರ ಕೂಡ ತೆಗೆದುಕೊಂಡಿಲ್ಲ. ಆದುದರಿಂದ ಚಡಚನ ಹಳ್ಳಕ್ಕೆ ಒಂದು ಬ್ಯಾರೇಜನ್ನೂ, ತುಳಜಾಭವಾನಿವಾರಿ ಹತ್ತಿರ ಯಾತ ನೀರಾವರಿ ಕಾಮಗಾರಿಗಳನ್ನು ಆದಷ್ಟು ತೀವ್ರಗತಿಯಲ್ಲಿ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದವನು ಒತ್ತಾಯ ಮಾಡಬಯಸುತ್ತೇನೆ.

ಇನ್ನು ಲ್ಯಾಂಡ ಅರ್ಮಿ ಕಾರ್ಪೊರೇಷನ್ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈ ಕಾರ್ಪೊರೆಷನ್ ಈ ವರ್ಷದ ಮಾರ್ಚ್‌ನೊಳಗೆ ಸುಮಾರು 50 ಲಕ್ಷ ರೂಪಾಯಿ ಖರ್ಚು ಮಾಡಬೇಕಾಗಿದ್ದು, ಕೇವಲ ಐದು ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದೆ. ಇದಕ್ಕೆ ಕಾರಣ ಲ್ಯಾಂಡ್ ಅರ್ಮಿ ಕಾರ್ಪೊರೇಷನ್ನಿನಲ್ಲಿರುವ ಸಿಬ್ಬಂದಿ ದೋಷವೋ, ಅಥವಾ ಆಡಳಿತಗಾರರ ದೋಷವೋ ಎನ್ನುವುದನ್ನು ಸರ್ಕಾರದವರು ವಿಚಾರ ಮಾಡಬೇಕಾಗಿದೆ. ಆದುದರಿಂದ ಸರ್ಕಾರದವರು ಇದರ ಬಗ್ಗೆ ಕೂಡಲೇ ವಿಚಾರ ಮಾಡಿ ಸೂಕ್ತ ಕ್ರಮ ಕೈಗೊಂಡು, ಆ ಸಂಸ್ಥೆಗೆ ಒದಗಿರುವ ಹಣ ಪೂರ್ತಿ ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕಟ್ಟಡಗಳ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಕಟ್ಟಡಗಳ ರಿಪೇರಿಗಾಗಿ ಪ್ರತಿ ವರ್ಷ ಇಷ್ಟು ಹಣ ಎಂದು ಒದಗಿಸದೇ ಯಾರು ಪ್ರಭಾವ ಬೀರುತ್ತಾರೆ ಅವರಿಗೆ ಕೊಡುತ್ತಾರೆ. ಮಿಕವರಿಗೆ ಸಮಾಜಾಯಿಷಿ ಮಾಡುತ್ತಿದ್ದಾರೆ. ಈ ರೀತಿ ಮಾಡದೇ ಪ್ರತಿ ವರ್ಷ ಕಟ್ಟಡಗಳ ರಿಪೇರಿಗೆ ಎಂದು ಹಣ ಒದಗಿಸಿದರೆ ಕಟ್ಟಡಗಳು ಚೆನ್ನಾಗಿ ಉಳಿಯುತ್ತವೆ. ಆದುದರಿಂದ, ಸರ್ಕಾರದವರು ಈ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಾಕ್ಷರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಜಿ. ಚನ್ನಪ್ಪ (ಮಾಗಡಿ) —ಮಾನ್ಯ ಉಪಾಧ್ಯಕ್ಷರೇ, ಸಭೆಯ ಮುಂದಿರುವ ಲೋಕೋಪಯೋಗಿ ಮತ್ತು ಸಣ್ಣ ನೀರಾವರಿ ಬೇಡಿಕೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸಣ್ಣ ನೀರಾವರಿಗೆ ನಿಗದಿ ಮಾಡಿರತಕ್ಕ ಹಣ ಏನಿದೆ, ಅದು ಎಂದೆಂದಿಗೂ ಸಾಲದು ಎಂದು ನನ್ನ ಅಭಿಪ್ರಾಯ. ನಮ್ಮ ದೇಶ ಪ್ರಗತಿ ಸಾಧಿಸಬೇಕಾದರೆ, ಮುಂದುವರಿಯಬೇಕಾದರೆ, ಸಣ್ಣ ಕೈಗಾರಿಕೆ ಮತ್ತು ಸಣ್ಣ ನೀರಾವರಿ ಯೋಜನೆಗಳು ಬಹಳ ಅತ್ಯವಶ್ಯಕವಾಗಿವೆ ಈ ಯೋಜನೆಗಳೇನಾದರೂ ಯಶಸ್ವಿಯಾಗಿ ಕೆಲಸ ಮಾಡಿದರೆ, ದೇಶ ಎಲ್ಲ ವಿಧದಲ್ಲೂ ಮುಂದುವರಿಯುವುದಕ್ಕೆ ಸಾಧ್ಯವಾಗುತ್ತದೆ ಎಂದು ಭಾವನೆ ಹೊಂದಿರತಕ್ಕವರ ಪೈಕಿ ನಾನೂ ಒಬ್ಬನಾಗಿರುವುದರಿಂದ ಈ ವಿಷಯವನ್ನು ಹೇಳುತ್ತಿದ್ದೇನೆ ಸಣ್ಣ ನೀರಾವರಿ ಯೋಜನೆಗಳನ್ನು ಹೆಚ್ಚು ಹೆಚ್ಚು ಮಾಡುವುದರಿಂದ, ದೇಶದಿಂದ ವ್ಯಥಾ ಹೊರಗೆ ಹರಿದು ಹೋಗುವ ನೀರನ್ನು ನಿಲ್ಲಿಸಿ ಅದನ್ನು ಸಾಗುವಳಿಗೆ ಉಪಯೋಗಿಸಿಕೊಳ್ಳಬಹುದಾಗಿದೆ. ಅಷ್ಟೇ ಅಲ್ಲದೆ, ಈ ನೀರು ಭೂಮಿಯೊಳಗಡೆ ಶೇಖರಣೆಯಾಗಿ ಎಲ್ಲ ಪ್ರದೇಶಗಳನ್ನೂ ಯೋಗ್ಯವಾದ ರೀತಿಯಲ್ಲಿ ವ್ಯವಸಾಯ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ. ಈಗ ದೇಶದಲ್ಲಿ ದೊಡ್ಡ ದೊಡ್ಡ ಜಲಾಶಯಗಳನ್ನು ಕಟ್ಟುವುದು ಬಹಳ ವಿರಳವಾಗಿದೆ, ಒಂದು ದೇಶದಲ್ಲಿ ಸಾಮಾನ್ಯವಾಗಿ ಮೂರು–ನಾಲ್ಕು ದೊಡ್ಡ ದೊಡ್ಡ ಜಲಾಶಯಗಳನ್ನು ಕಟ್ಟುವುದಕ್ಕೆ ಸಾಧ್ಯತೆ ಇದೆ. ಆದರೆ ದೇಶದ ಹಲವಾರು ಭಾಗಗಳಲ್ಲಿ ಸಣ್ಣ ಸಣ್ಣ ಜಲಾಶಯಗಳನ್ನೂ, ಸಣ್ಣ ಸಣ್ಣ ಕೆರೆಗಳನ್ನೂ ಕಟ್ಟುವುದಕ್ಕೆ ಸಾಧ್ಯತೆ ಇದೆ. ಇದರಿಂದ, ಅನೇಕ ಎಕರೆ ಭೂಮಿಗೆ ನೀರು ಒದಗಿಸಿದಂತಾಗು

ತ್ತದೆ. ಮಳೆಗಾಲವನ್ನೇ ನಂಬಿರತಕ್ಕ ರೈತನಿಗೆ, ಈ ರೀತಿ ಸಣ್ಣ ಸಣ್ಣ ಜಲಾಶಯ ಹಾಗೂ ಕೆರೆಗಳನ್ನು ಕಟ್ಟಿ ಮಳೆಯಾಗದ ಕಾಲದಲ್ಲಿ ನೀರಾವರಿ ಸೌಲಭ್ಯ ಒದಗಿಸಬಹುದಾಗಿದೆ. ಇದರಿಂದ ರೈತನು ತನ್ನ ಕುಂದ ಕೊರತೆಗಳನ್ನು ಸುಲಭವಾಗಿ ನೀಗಿಕೊಳ್ಳಲು ಸಾಧ್ಯವಾಗುತ್ತದೆ. ಆದುದರಿಂದ, ಸರ್ಕಾರದವರು ಸಣ್ಣ ನೀರಾವರಿ ಯೋಜನೆಗಳನ್ನು ಆದಷ್ಟು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಸೂಚಿಸಬಯಸುತ್ತೇನೆ.

ಇನ್ನು ನಮ್ಮ ತಾಲ್ಲೂಕಿನಲ್ಲಿ ಆಗಬೇಕಾದ ಮೂರು–ನಾಲ್ಕು ಕಾಮಗಾರಿಗಳನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಮತ್ತು ಕೆಲವು ಬಿಟ್ಟುಹೋಗಿರುವ ಕಾಮಗಾರಿಗಳನ್ನೂ ಮಂತ್ರಿಗಳ ಗಮನಕ್ಕೆ ತಂದಿದ್ದಾನೆ ; ಅವುಗಳನ್ನೂ ಸೇರಿಸಿ, ಆದಷ್ಟು ಬೇಗ ಕೆಲಸಗಳನ್ನು ಪ್ರಾರಂಭಿಸಬೇಕೆಂದು ಹೇಳುತ್ತೇನೆ. ನಮ್ಮ ತಾಲ್ಲೂಕು ಗುಡ್ಡಗಾಡುಗಳಿಂದ ಕೂಡಿದ್ದು ಬಹಳ ಹಿಂದುಳಿದ ಪ್ರದೇಶವಾಗಿದೆ. ಆದುದರಿಂದ, ಅಲ್ಲೆಲ್ಲಾ ಪಿಕ್‌ಅಕ್ ಕಟ್ಟಿ ಅಲ್ಲಿನ ಜನರಿಗೆ ನೀರಾವರಿ ಸೌಲಭ್ಯಗಳನ್ನೂ ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಸರ್ಕಾರದವರು ಅನೇಕ ರಸ್ತೆಗಳನ್ನು ಮಾಡಿಸುತ್ತಿದ್ದಾರೆ. ಆದರೆ ಆ ರಸ್ತೆಗಳಿಗೆ ಮೋರಿ ಮತ್ತು ಸೇತುವೆಗಳ ಸೌಲಭ್ಯ ಕೊಡದೇ ಇರುವುದರಿಂದ ಅವುಗಳು ಪ್ರಯೋಜನವಿಲ್ಲದಂತಾಗಿವೆ. ನಮ್ಮ ಕಡೆ ಅನೇಕ ಸಣ್ಣ ಸಣ್ಣ ಮೋರಿಗಳನ್ನು ತಾಲ್ಲೂಕು ಅಭಿವೃದ್ಧಿ ಮಂಡಲಿಯವರೂ ಮತ್ತು ಲೋಕೋಪಯೋಗಿ ಇಲಾಖೆಯವರು ಮಾಡಿದ್ದಾರೆ. ಆದರೆ, ಕೆಲವು ಮೋರಿಗಳು ದೊಡ್ಡ ದೊಡ್ಡ ಮೋರಿಗಳಾಗಿರುವುದರಿಂದ, ಅವುಗಳನ್ನು ಮಾಡಲು ತಾಲ್ಲೂಕು ಬೋರ್ಡಿನವರು ಅದು ನಮ್ಮ ಎಲ್ಲೆಯನ್ನು ಮೀರಿದೆ ಎಂದು ಹೇಳುತ್ತಾರೆ. ಲೋಕೋಪಯೋಗಿ ಇಲಾಖೆಯವರನ್ನು ಕೇಳಿದರೆ, ಅದು ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಮಾಡಬೇಕಾದ ಕೆಲಸ ಎಂದು ಹೇಳುತ್ತಿದ್ದಾರೆ. ಹೀಗಾಗಿ ಅಲ್ಲಿ ರಸ್ತೆಗೆ ಅಪಾರವಾಗಿ ಹಣ ಖರ್ಚು ಮಾಡಿ ಮೋರಿಗಳನ್ನು ಮಾಡದೇ ಇರುವುದರಿಂದ ಆ ರಸ್ತೆಗಳಿಗೆ ಮಾಡಿದ ಖರ್ಚು ಸಾರ್ಥಕವಿಲ್ಲದಂತಾಗಿದೆ. ಆದುದರಿಂದ ಸರ್ಕಾರದವರು ಈ ಕಡೆ ಹೆಚ್ಚು ಗಮನ ಹರಿಸಿ, ಕಾಮಗಾರಿಗಳಾಗಿರುವ ರಸ್ತೆಗಳಿಗೆ ಆದಷ್ಟು ಬೇಗ ಸೇತುವೆ ಮತ್ತು ಮೋರಿಗಳನ್ನು ಕಟ್ಟಿಸುವರೆಂದು ಆಶೆ ಇಟ್ಟುಕೊಂಡಿದ್ದೇನೆ.

ನಮ್ಮ ನಮ್ಮ ಕ್ಷೇತ್ರಗಳಲ್ಲಿ ಆಗಬೇಕಾದ ಅತಿ ಮುಖ್ಯ ಸೇತುವೆಗಳ ಕಾಮಗಾರಿಗಳ ಪಟ್ಟಿಯನ್ನು ಕಳುಹಿಸಿಕೊಡುವಂತೆ ಸರ್ಕಾರದವರು ನಮ್ಮನ್ನು ಕೇಳಿದ್ದರು. ಇದರ ಪ್ರಕಾರವಾಗಿ ತಾಲ್ಲೂಕು ಬೋರ್ಡ್ ವತಿಯಿಂದ ಮತ್ತು ನಮ್ಮ ವತಿಯಿಂದ ನಮ್ಮ ತಾಲ್ಲೂಕಿನಲ್ಲಿ ಆಗಬೇಕಾಗಿರುವ ಸೇತುವೆ ಕಾಮಗಾರಿಗಳನ್ನು ಕಳುಹಿಸಿಕೊಟ್ಟಿದ್ದೆವು. ಆದರೆ ಒಂದು ಸೇತುವೆಯ ಕೆಲಸವನ್ನೂ ಕಾರ್ಯಗತ ಮಾಡಿಲ್ಲ.

ಶ್ರೀ ಎಚ್. ಎಂ, ಚನ್ನಬಸಪ್ಪ.—ಕಳುಹಿಸಿಕೊಟ್ಟ ದಿನವೇ ಕಾರ್ಯಗತ ಮಾಡುವುದಕ್ಕೆ ಆಗುತ್ತದೆಯೋ ?

ಶ್ರೀ ಹೆಚ್. ಜಿ. ಚನ್ನಪ್ಪ,—ಕಳುಹಿಸಿಕೊಟ್ಟಿದ್ದೇವೆ ; ಅವುಗಳನ್ನು ಅತಿ ಶೀಘ್ರದಲ್ಲಿ ಕಾರ್ಯಗತಗೊಳಿಸಬೇಕೆಂದು ನಾನು ಹೇಳುತ್ತಿರುವುದು. ನಾವು ಕಳುಹಿಸಿಕೊಟ್ಟಿರುವ ಕಾಮಗಾರಿಗಳನ್ನು ಸರ್ಕಾರದವರು ಬೇಗ ಮಾಡಿಕೊಟ್ಟರೆ, ಅಲ್ಲಿನ ಜನತೆಗೆ ಬಹಳ ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ.

ರಸ್ತೆಗಳನ್ನು ವಿಶಾಲ ಮಾಡುವಾಗ, ಸರ್ಕಾರದವರು ಈಗ ಅನುಸರಿಸುತ್ತಿರುವ ಕ್ರಮದ ಬಗೆ ಮಾನ್ಯ ಸದಸ್ಯರೆಲ್ಲರೂ ಹೇಳಿದ್ದಾರೆ. ನಾನೂ ಕೂಡ ಹೇಳುತ್ತಿರುವುದು ಬಹುಶಃ ಮಾನ್ಯ ಮಂತ್ರಿಗಳಿಗೆ ಬೇಸರವಾಗಬಹುದು. ಈ ರಸ್ತೆಗಳು ಮೊದಲು ಲೋಕೋಪಯೋಗಿ ಇಲಾಖೆಗೆ ಸೇರಿರಲಿಲ್ಲ. ಈಗ, ತಾಲ್ಲೂಕು ಅಭಿವೃದ್ಧಿ ಮಂಡಲಿ ಮತ್ತು ಗ್ರಾಮಪಂಚಾಯಿತಿಗಳ ರಸ್ತೆಗಳು ಲೋಕೋಪಯೋಗಿ ಇಲಾಖೆಗೆ ಸೇರಿ, ಅವುಗಳನ್ನು ವಿಶಾಲ ಮಾಡುವ ಪರಿಸ್ಥಿತಿ ಬಂದಿದೆ. ಇದರಿಂದ ಅಕ್ಕಪಕ್ಕದ ಕೆಲವು ಕಟ್ಟಡಗಳನ್ನು ಒಡೆದು ಹಾಕುವ ಪರಿಸ್ಥಿತಿ ಬಂದಿದೆ. ಈಗ ಇಲಾಖೆಯವರು ಈ ರಸ್ತೆಗಳು ಅರವತ್ತು ಅಡಿ ಇರಬೇಕೆಂದು ನಿಯಮಾವಳಿ ಮಾಡಿಕೊಂಡು ಅದರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಅರವತ್ತು ಅಡಿ ಬದಲಿಗೆ, ಮೂವತ್ತು–ನಲವತ್ತು ಅಡಿ ಇರಬೇಕೆಂದು ಮಾಡಿದರೆ, ಎಷ್ಟೋ ಮನೆಗಳು ಉಳಿಯುತ್ತವೆ. ಮತ್ತು, ಹೀಗೆ ರಸ್ತೆಗಳನ್ನು ಅಗಲ ಮಾಡುವ ಉದ್ದೇಶದಿಂದ, ಮನೆಗಳನ್ನು ಒಡೆದು ಹಾಕುವಾಗ, ಒಂದು ವೇಳೆ ಅದು ಬಡವನೊಬ್ಬನ ಮನೆಯಾಗಿದ್ದರೆ, ಅವರಿಗೆ ಪರ್ಯಾಯ ವ್ಯವಸ್ಥೆ ಕೊಡಬೇಕಾಗುತ್ತದೆ. ಆದುದರಿಂದ, ಅಂಥಾ ಬಡವರಿಗೆ ಜನತಾ ಗೃಹನಿರ್ಮಾಣ ಯೋಜನೆಯ ಮೇಲೆ ಒಂದು ನಿವೇಶನ

ಕೊಟ್ಟು, ಆದರಲ್ಲಿ ಅವನಿಗೊಂದು ಮನೆಯನ್ನು ಕಟ್ಟಿಕೊಡುವುದಕ್ಕೆ ಸರ್ಕಾರದವರು ಏರ್ಪಾಡು ಮಾಡಿ, ತನ್ಮೂಲಕ ಬಡವರಿಗೆ ಸಹಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಸಲಹೆ ಮಾಡ ಬಯಸುತ್ತೇನೆ.

ಎಲ್ಲ ಡಿವಿಯೇಷನ್ ರಸ್ತೆಗಳಿವೆ. ಅಂಥಾ ಭಾಗದಲ್ಲಿ ಕ್ರಮ ತೆಗೆದುಕೊಳ್ಳುವ ಬಗ್ಗೆ ಮಂತ್ರಿಗಳು ತಡೆ ಆಜ್ಞೆ ಕೊಡಬೇಕೆಂದೂ, ಈ ಬಗ್ಗೆ ಅದರ ಪರಿಶೀಲನೆ ಮಾಡಿ, ಕಾರ್ಯಗತ ಮಾ ಬೇಕೆಂದೂ ಹೇಳುತ್ತೇನೆ. ನಾನು ಇನ್ನೂ ಹಲವಾರು ವಿಚಾರಗಳನ್ನು ಕುರಿತು ಹೇಳುವವನಿದ್ದರೂ, ವೇಳೆ ಇಲ್ಲದ್ದ ರಿಂದ, ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ತಾರೇಗೌಡ(ಕಳ್ಳಂಬೆಳ್ಳ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಲೋಕೋಪಯೋಗಿ ಮಂತ್ರಿಗಳೂ ಹಾಗೂ ಸಣ್ಣ ನೀರಾವರಿ ಮಂತ್ರಿಗಳು ತಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಮಂಡಿಸಿರತಕ್ಕ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ಬೆಂಬಲಿಸುತ್ತಾ ಕೆಲವು ವಿಷಯಗಳನ್ನು ಸೂಚಿಸುತ್ತೇನೆ. ಮಾನ್ಯ ವಿರೋಧ ಪಕ್ಷದ ಸದಸ್ಯರಾದ ಶ್ರೀಮಾನ್ ಬಂಗಾರಪ್ಪನವರು ಲೋಕೋಪಯೋಗಿ ಇಲಾಖೆ ಮೇಲೆ ಅಸಾಧ್ಯವಾದ ಟೀಕೆಗಳನ್ನು ಮಾಡುತ್ತಾ ಲೋಕೋಪಯೋಗಿ ಮಂತ್ರಿಗಳ ಮೇಲೆ ಆಪಾದನೆಯನ್ನೂ ಮಾಡಿದರು. ನಾನಾದರೂ ಕೂಡ ಶ್ರೀಮಾನ್ ಚನ್ನಬಸಪ್ಪನವರು ದಕ್ಷರೂ, ಅನುಭವಿಗಳೂ ಪ್ರಾಮಾಣಿಕರೂ ಹಾಗೂ ನಿಷ್ಠಾವಂತರೂ ಎಂದು ಹೇಳುತ್ತೇನೆ. ಅವರು ೧೯೫೨ರಲ್ಲಿ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರ ಮಂತ್ರಿಮಂಡಲದಲ್ಲಿ, ಜತ್ತಿಯವರ ಮಂತ್ರಿಮಂಡಲದಲ್ಲಿ ಮತ್ತು ಈಗ ಶ್ರೀಮಾನ್ ದೇವರಾಜ್ ಅರಸ್‌ರವರ ಮಂತ್ರಿಮಂಡಲದಲ್ಲಿ ಲೋಕೋಪಯೋಗಿ ಇಲಾಖಾ ಸಚಿವರಾಗಿ ಬರಬೇಕಾದರೆ, ಅವರಲ್ಲಿದ್ದ ನಿಷ್ಠೆ ಮತ್ತು ಪ್ರಾಮಾಣಿಕತೆ ಎಂದು ಹೇಳುತ್ತೇನೆ. ಇವರ ಮೇಲೆ ಅಸಾಧಾರಣವಾದ ಆರೋಪಗಳನ್ನು ಮಾಡುವುದರಲ್ಲಿ ಎಳ್ಳಷ್ಟು ಹುರುಳಿಲ್ಲ. ಆಕಸ್ಮಾತ್ತಾಗಿ ಚನ್ನಬಸಪ್ಪ ನವರ ಗಮನಕ್ಕೆ ಬಾರದೇ ಏನಾದರೂ ನಡೆದಿದ್ದರೆ, ಅದನ್ನು ಸರಿಪಡಿಸತಕ್ಕಂಥವರಲ್ಲಿ ಯೋಗ್ಯರು ಎನ್ನತಕ್ಕಂಥದ್ದನ್ನು ಈ ಸಮಯದಲ್ಲಿ ತಿಳಿಸಲಿಚ್ಛಿಸುತ್ತೇನೆ. ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿ, ರಾಜ್ಯದಲ್ಲಿನ ಸಂಪರ್ಕ ರಸ್ತೆಗಳು, ಕೆರೆಗಳು, ಅಭಿವೃದ್ಧಿ ಕಾರ್ಯಗತ ವಿಚಾರದಲ್ಲಿ ಆಳವಾಗಿ ಅನುಭವ ಮತ್ತು ಅಭಿಮಾನ ಇರತಕ್ಕವರು. ಸಣ್ಣ ನೀರಾವರಿ ಇಲಾಖಾ ಸಚಿವರು ಕೂಡ ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿ ಜನಾನುರಾಗಿಗಳಾಗಿ ನೀರಾವರಿ ವಿಚಾರದಲ್ಲಿ ಹೆಚ್ಚಿನ ಆಸಕ್ತಿ ಇರತಕ್ಕವರು ಇರುವುದರಿಂದ ನಮಗೆ ಬಹಳ ಸಂತೋಷ. ಇವರ ಕಾಲದಲ್ಲಿ ಇಲಾಖೆಯಲ್ಲಿ ಮೂರು ನಾಲ್ಕು ವರ್ಷದಿಂದ ಹೆಚ್ಚಿಗೆ ಅಭಿವೃದ್ಧಿ ಕಾರ್ಯಗಳು ಮುಂದುವರಿದಿವೆ ಎನ್ನುವುದನ್ನು ತಿಳಿಸಲಿಚ್ಛಿಸುತ್ತೇನೆ. ಒಂದಾನೊಂದು ಕಾಲದಲ್ಲಿ ದಿವಂಗತ ಚಕ್ರವರ್ತಿ ರಾಜಗೋಪಾಲಚಾರಿಯವರು ಮುಖ್ಯಮಂತ್ರಿಗಳಾಗಿದ್ದಾಗ ಲೋಕೋಪ ಯೋಗಿ ಇಲಾಖೆಯನ್ನು "ಎನಿಮಿ ನಂಬರ್ ೧" ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಮಾನ್ಯ ಚನ್ನಬಸಪ್ಪನವರು ಲೋಕೋಪಯೋಗಿ ಇಲಾಖೆಯನ್ನು ವಹಿಸಿಕೊಂಡಮೇಲೆ ಈ ಅಭಿಪ್ರಾಯ ಇಲಾಖಾ ಅಧಿಕಾರಿಗಳಲ್ಲಿ ಹಾಗೂ ಜನತೆಯಲ್ಲಿ ಕಡಿಮೆಯಾಗುತ್ತಾ ಬಂತು. ಅನೇಕ ಜನ ಲೋಕೋಪಯೋಗಿ ಅಧಿಕಾರಿಗಳಲ್ಲಿ ಲಂಚರುಷುವತ್ತು, ಮತ್ತೆ ಯಾವುದೇ ರೀತಿ ಅಚಾತುರ್ಯಗಳು ಕಡಿಮೆಯಾಗಿದ್ದು, ಯಾವಾಗ ನಮ್ಮನ್ನು ಸಸ್ಪೆಂಡ್ ಮಾಡುತ್ತಾರೋ ಎನ್ನುವ ಭಯ ಬಂದಿದೆ. ಇವರ ಕಾಲದಲ್ಲಿ ಅನೇಕ ರಸ್ತೆ ಸಂಪರ್ಕದ ಕಾಮಗಾರಿಗಳು, ಇತರ ಲೋಕೋಪಯೋಗಿ ಇಲಾಖೆ ಸಂಬಂಧಪಟ್ಟಂತೆ ಕಾಮಗಾರಿಗಳು ಹೆಚ್ಚಿನ ರೀತಿಯಲ್ಲಿ ಮುಂದುವರಿಯುತ್ತಿವೆ. ರಾಷ್ಟ್ರೀಯ ಹೆದ್ದಾರಿಗೆ ಕೇಂದ್ರದಿಂದ ಹಣ ಬರುವುದು ಕಡಿಮೆಯಾದುದರಿಂದ, ಅದಕ್ಕೆ ಬೇರೆ ಇದ್ದ ಚೀಫ್ ಇಂಜಿನಿಯರನ್ನು ತಪ್ಪಿಸಿ, ಅದನ್ನು ಸಾಮಾನ್ಯ ಇಲಾಖೆ ಕಮ್ಯುನಿಕೇಷನ್ ಅಂಡ್ ಬ್ರಿಡ್ಜಸ್ ಸಂಬಂಧಪಟ್ಟ ಚೀಫ್ ಇಂಜಿನಿಯರ್‌ರವರಿಗೆ ಒಪ್ಪಿಸಿ ಖರ್ಚನ್ನು ಕಡಿಮೆ ಮಾಡಿದ್ದಾರೆ. ನಮ್ಮ ಕ್ಷೇತ್ರದಲ್ಲಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ೫೧–೫೨ನೇ ಮೈಲಿಯಲ್ಲಿರತಕ್ಕ ಪ್ರದೇಶವನ್ನು ಡೀವಿಯೇಷನ್ ರಸ್ತೆಯನ್ನು ನೇರ ಮಾಡುವ ಕೆಲಸ ಸುಮಾರು ೨–೩ ವರ್ಷಗಳಿಂದ ನಿಂತಿತ್ತು. ಅದನ್ನು ಮಾಡಿಕೊಡುವುದಾಗಿ ಚನ್ನಬಸಪ್ಪನವರು ಒಪ್ಪಿಕೊಂಡಿದ್ದಾರೆ ಅದಷ್ಟು ಜಾಗ್ರತೆ ಈ ಕೆಲಸವನ್ನು ಮಾಡಿಸಿಕೊಡಬೇಕೆಂದು ನನ್ನ ಪ್ರಾರ್ಥನೆ. ಅಲ್ಲದೆ ಸೇತುವೆಗಳ ಮೇಲೆ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಹಾಕಿ ರೆಗ್ಯೂಲೇಟೆಟ್ ಮಾರ್ಕೆಟಿಂಗ್ ಸೆಸ್ ಇದರಲ್ಲಿ ಸ್ವಲ್ಪ ಭಾಗವನ್ನು ಸೇತುವೆಗಳ ನಿರ್ಮಾಣಕ್ಕೆ ಇಟ್ಟಿದ್ದಾರೆ. ಅಲ್ಲದೆ ಈ ಕೆಲಸವನ್ನು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿಗೆ ಜವಾಬ್ದಾರಿ ವಹಿಸಿ ಈ ಕೆಲಸವನ್ನು ಶೀಘ್ರವಾಗಿ ಆಗುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಕಾಲಾವಕಾಶ ಕಡಿಮೆ ಇರುವುದರಿಂದ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಯ ಬೇಡಿಕೆಗಳ ಬಗ್ಗೆ ಚರ್ಚೆಯಾಗಿ ಅನೇಕ ಸದಸ್ಯರುಗಳು ಬಹಳ ಉಪಯುಕ್ತವಾದಂತ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಸರ್ಕಾರದ ಪರವಾಗಿ ಅವರಿಗೆ ವಂದನೆಯನ್ನು ಅರ್ಪಿಸತಕ್ಕಂಥಾದ್ದು ನನ್ನ ಕರ್ತವ್ಯ. ಹಾಗೆಯೇ ಕೆಲವು ಮಾನ್ಯ ಸದಸ್ಯರು ಟೀಕೆ ಟಿಪ್ಪಣಿಗಳನ್ನೂ ಮಾಡಿದ್ದಾರೆ. ಅವರ ಟೀಕೆ ಟಿಪ್ಪಣಿಗಳನ್ನು ಕೂಡ ಸರ್ಕಾರ ಸ್ವಾಗತಿಸಿ ಅವರ ಟೀಕೆಟಿಪ್ಪಣಿಗಳು ರಚನಾತ್ಮಕವಾಗಿದ್ದಾವೆಯೋ ಎಂದು ಪರಿಶೀಲಿಸಿ ರಚನಾತ್ಮಕವಾಗಿದ್ದಂತ ಟೀಕೆ ಟಿಪ್ಪಣಿಗಳನ್ನೂ ಕೂಡ ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸುತ್ತದೆ. ರಾಜ್ಯದ ಆರ್ಥಿಕ ಬೆಳೆವಣಿಗೆ ಚೆನ್ನಾಗಿರಬೇಕಾದರೆ. ಪ್ರತಿ ಹಳ್ಳಿಗಳಿಗೆ ಉತ್ತಮ ಹಳ್ಳಿಗಳಿಗೆ ಉತ್ತಮ ದರ್ಜೆಯ ರಸ್ತೆಗಳು ಮತ್ತು ಸೇತುವೆಗಳಾಗಬೇಕು. ಈ ವಿಚಾರದಲ್ಲಿ ಯಾರದೂ ಭಿನಾಭಿಪ್ರಾಯ ಇಲ್ಲ. ನಮ್ಮ ದೇಶ ಬಹಳ ದೊಡ್ಡದು. ಮತ್ತೆ ಬಹಳ ವಿಸ್ತಾರವಾದುದು. ನಮ್ಮ ರಾಜ್ಯ ಕೂಡ ಬಹಳ ವಿಸ್ತಾರವಾದುದು. ಅನೇಕ ವರ್ಷಗಳಿಂದ ರಾಜ್ಯದ ಎಲ್ಲಾ ಕಡೆಗೆ ಅವಶ್ಯಕವಾದ ರಸ್ತೆಗಳು ಇಲ್ಲದೆ. ಯಾವ ವಿಧವಾದ ಪ್ರಗತಿಯೂ ಕೂಡ ಹೋಗುವುದಕ್ಕೆ ಆಗಲಿಲ್ಲ. ಆದುದರಿಂದ ಈ ವಿಚಾರವನ್ನು ಎಲ್ಲಾ ರೀತಿಯಲ್ಲೂ ಯೋಚನೆಮಾಡಿದರೆ. ಮೊಟ್ಟಮೊದಲು ರಸ್ತೆಗಳು ಇದ್ದರೆ, ಪ್ರಗತಿಗೆ ದಾರಿಯಾಗುತ್ತದೆ. ರಸ್ತೆಗಳು ಇಲ್ಲದಿದ್ದರೆ, ಹಳ್ಳಿಗಳಿಗೆ ಅಧಿಕಾರಿಗಳು ಹೋಗುವುದು ಕಡಿಮೆ, ಯಾರೇ ಹೋಗುವುದು ಕಡಿಮೆಯಾಗುತ್ತದೆ. ಈ ವಿಚಾರವನ್ನು ಅನುಕರಣೆಗೆ ತೆಗೆದುಕೊಂಡು ಹಳ್ಳಿಗಳ ರಸ್ತೆಗಳ ಬಗ್ಗೆ ಈ ಆಯವ್ಯಯಪಟ್ಟಿಯಲ್ಲಿ ಬಹುಶಃ ಹಳ್ಳಿಗಳಿಗೆ ಪಕ್ಷಪಾತವಿಲ್ಲದ ಬಡ್ಜೆಟ್ ಎಂದು ಹೇಳಿದರೆ, ಉತ್ಪ್ರೇಕ್ಷೆಯಾಗಲಾರದು. ಹಳ್ಳಿಗಳ ಬೆಳವಣಿಗೆ ವಿಷಯದಲ್ಲಿ ಸರ್ಕಾರ ಒಂದು ಅಗಾಧವಾದ ಪ್ರೇಮ ವಿಶ್ವಾಸ ಇಟ್ಟುಕೊಂಡಿದೆ. ಆ ದೃಷ್ಟಿಯಿಂದ ಯೋಚನೆ ಮಾಡಿದರೆ, ಈ ಬಡ್ಜೆಟ್ಟನಲ್ಲಿ ಹಳ್ಳಿಗಳ ಬೆಳವಣಿಗೆ ತಕ್ಕ ತಳಹದಿ ಹಾಕಿ ಈ ಕೆಲಸ ಮುಂದೆ ಚೆನ್ನಾಗಿ ನಡೆಯಬೇಕು ಎನ್ನುವ ಉದ್ದೇಶದಿಂದ ಈ ಬಡ್ಜೆಟ್ಟನ್ನು ತಯಾರು ಮಾಡಿದ್ದೇವೆ. ಇದರ ಬಗ್ಗೆ ಮಾನ್ಯ ಸದಸ್ಯರು ಅನೇಕರು ಮೆಚ್ಚಿಗೆ ಕೂಡ ವ್ಯಕ್ತಪಡಿಸಿದ್ದಾರೆ. ನಿಜ, ನಮ್ಮ ಅವಶ್ಯಕತೆಗಳು ಬಹಳ ಇವೆ. ಆದರೆ ಅವುಗಳನ್ನು ಪೂರೈಸಬೇಕಾದರೆ, ಯೋಜಿತ ಮಾರ್ಗದಲ್ಲಿ ಹೋಗಬೇಕೇ ವಿನಃ ಎಲ್ಲವನ್ನೂ ಏಕಕಾಲದಲ್ಲಿ ಪೂರೈಸುವುದು ಕಷ್ಟವಾಗುತ್ತದೆ. ಅನೇಕ ಜನ ಸದಸ್ಯರು ಮಾತನಾಡುತ್ತಾ ಅನೇಕ ರೀತಿಯಲ್ಲಿ ಟೀಕೆ ಟಿಪ್ಪಣಿಗಳನ್ನು ಮಾಡಿದಾಗ ಅವರ ಉದ್ದೇಶ ಕೆಲಸ ಬೇಗ ಆಗಲಿ ಎನ್ನುವ ಆತುರವಿದೆಯೇ ಹೊರತು, ಸರ್ಕಾರದಲ್ಲಿ ತಪ್ಪು ಕಂಡು ಹಿಡಿಯುವ ಉದ್ದೇಶ ಇಲ್ಲ ಎನ್ನುವುದು ನನಗೆ ಮನವರಿಕೆಯಾಗಿದೆ. ಈಗ ನಾನು ತಮಗೆ ಹೇಳುವುದಾದರೆ, ತಮ್ಮ ಮುಂದಿಟ್ಟಿರುವ ವರದಿಯಲ್ಲಿ ಇಲಾಖೆಯ ಕೆಲಸ ಯಾವರೀತಿ ನಡೆದಿದೆ ಎನ್ನುವ ಬಗ್ಗೆ ಒಂದು ಪುಸ್ತಕ ಕೊಟ್ಟಿದ್ದೇನೆ. ಬಹುಶಃ ಹಿಂದೆ ಎಂದೂ ಕೂಡ ಮಾಡದೇ ಇರತಕ್ಕ ಕೆಲವು ಪಾಲಿಸಿ ಡಿಸಿಷನ್ ಧ್ಯೇಯಧೋರಣೆಗಳ ಬಗ್ಗೆ ತೀರ್ಮಾನತೆಗೆದು ಕೊಂಡಿರುವುದನ್ನು ತಾವು ಒಪ್ಪಿಕೊಳ್ಳುತ್ತೀರಿ.

ಇನ್ನು ಈ ರಸ್ತೆಗಳ ವಿಷಯದಲ್ಲಿ ಹೇಳುವುದಾದರೆ ಪೂರ್ವ ಕಾಲದಿಂದಲೂ ತಾಲ್ಲೂಕ್ ಬೋರ್ಡ್ ಮತ್ತು ಪಂಚಾಯಿತಿಗಳಿಗೆ ಈ ರಸ್ತೆಗಳ ಬಗ್ಗೆ ಭಾರ ಹೊರಿಸಿ ಸರ್ಕಾರದವರು ಕೇವಲ ಕೆಲವೊಂದು ಮಾತ್ರ ಇಟ್ಟುಕೊಂಡಿದ್ದರು. ಹೀಗಾಗಿ ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿಗಳಿಗೆ ಹಣ ಇಲ್ಲದೆ ಆ ರಸ್ತೆಗಳು ಆಗುವುದಕ್ಕೆ ಸಾಧ್ಯವೇ ಇರಲಿಲ್ಲ, ಹೀಗಿರುವಾಗ ಇನ್ನು ಸೇತುವೆ ಆಗುವುದಕ್ಕಂತೂ ಸಾಧ್ಯವೇ ಇಲ್ಲದ ಹಾಗೆ ಇತ್ತು. ಈಗ ಅದರ ಬಗ್ಗೆ ಸರ್ಕಾರದವರು ಆಲೋಚನೆ ಮಾಡಿ ಅದು ತಾಲ್ಲೂಕು ಬೋರ್ಡ್‌ನದೇ ಇರಲೀ, ಪಂಚಾಯಿತಿದೇ ಇರಲಿ. ಸರ್ಕಾರದ್ದೇ ಇರಲಿ, ಒಟ್ಟಿನಲ್ಲಿ ರಸ್ತೆ ಆಗಬೇಕು, ಸೇತುವೆ ಆಗಬೇಕಾಗಿದೆ ಇದು ಆಗಬೇಕಾದರೆ ಅವರ ಮೇಲೆ ಸ್ವಲ್ಪ ಭಾರ ಹೊರಿಸಿ ಕೇವಲ ಸಣ್ಣ ಪುಟ್ಟ ರಸ್ತೆಗಳು ವಿನಃ ಇನ್ನೆಲ್ಲಾ ರಸ್ತೆಗಳನ್ನೂ ಸರ್ಕಾರವೇ ಜವಾಬ್ದಾರಿ ವಹಿಸಿ ಕೆಲಸ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿರತಕ್ಕಂಥಾದ್ದರ ಬಗ್ಗೆ ತಮ್ಮೆಲ್ಲರಿಂದಲೂ ಸ್ವಾಗತ ಇದೆ ಎಂದು ಅನೇಕರು ತಮ್ಮ ಭಾಷಣದಲ್ಲಿ ತಿಳಿಸಿದ್ದೀರಿ. ಸರ್ಕಾರದ ಉದ್ದೇಶವಾದರೂ ಕೂಡ ಇಷ್ಟು, 3 ಹಂತಗಳಲ್ಲಿ ಈ ರೂರಲ್ ಕಮ್ಯೂನಿಕೇಷನ್ ರೋಡ್ಸ್‌ಗಳ ಕೆಲಸಗಳನ್ನು ಮಾಡಬೇಕು ಅಂತ. ಆ ಕೆಲಸಗಳು ಹಲವಾರು ವರ್ಷಗಳಲ್ಲಿ ಪೂರೈಕೆ ಆಗುವುದಾಗಲಿ ಅಥವಾ ಒಂದು ನಿರ್ದಿಷ್ಟವಾದ ಹಣವನ್ನು ಆದಕ್ಕೆ ಒದಗಿಸಿಕೊಡಬೇಕೆನ್ನುವುದೇ ಆಗಲಿ

ಅದು ಸರ್ಕಾರದ ಉದ್ದೇಶವಾಗಿದೆ. ಈ ಕೆಲಸ ಸಫಲವಾಗಬೇಕು ಎನ್ನುವ ಉದ್ದೇಶದಿಂದಲೇ ಈಗ ರೋಡ್ಸ್ ಅಂಡ್ ಬ್ರಿಡ್ಜಸ್ ಅಂತ ಒಂದು ಫಂಡನ್ನು ಏರ್ಪಾಡು ಮಾಡಿ, ಅದರಿಂದ ಬರ ತಕ್ಕಂಥಾ ಹಣದಿಂದ ಒಂದು ನಿರ್ದಿಷ್ಟವಾದ ಹಣ ಏನು ಅದರಿಂದ ಬರುತ್ತದೋ ಅದನ್ನು ಹಳ್ಳಿ ಗಾಡಿನ ಪ್ರಗತಿಗೆ ಒದಗಿಸಬೇಕು ಅಂತ ಈಗ ನಾನು ಏನು ಹೇಳುತ್ತೇನೆ ಇದು ಒಂದು ಸಂತೋಷದ ಸಂಗತಿ ಎಂದು ತಿಳಿಸಲಿಕ್ಕೆ ಇಚ್ಛಿಸುತ್ತೇನೆ. ಇದುವರೆಗೆ ಏನಿತ್ತು ಎಂದರೆ ಹಳ್ಳಿ ಗಾಡಿಗೆ ರಸ್ತೆಗಳನ್ನು ಕೊಡುವುದಕ್ಕೆ ಒಂದು ವರ್ಷದ ಬಡ್ಜೆಟ್ಟಿನಲ್ಲಿ ಇದ್ದರೆ ಇನ್ನೊಂದು ವರ್ಷದ ಬಡ್ಜೆಟ್ಟಿನಲ್ಲಿ ಇರುತ್ತಿರಲಿಲ್ಲ. ಹೀಗಾಗಿ ಹಣ ಇಲ್ಲದೇ ಆ ರಸ್ತೆಗಳ ಕೆಲಸ ಪೂರ್ಣವಾಗದೆ ಅಪೂರ್ಣವಾಗಿ ಕೆಟ್ಟು ಹೋಗತಕ್ಕಂಥಾ ಪರಿಸ್ಥಿತಿ ಇತ್ತು, ಇನ್ನು ಹೊಸದಾಗಿ ರಸ್ತೆಗಳನ್ನು ತೆಗೆದುಕೊಳ್ಳುವುದಾಗಲಿ ಯಾವುದೇ ಕೆಲಸವೇ ಆಗಲಿ ಆಗುತ್ತಿರಲಿಲ್ಲ. ಇವೆಲ್ಲಾ ಯೋಚನೆ ಮಾಡಿ ಸರ್ಕಾರದವರು 1959 ರಿಂದ 61 ರವರೆಗೂ ಈ ರೂರಲ್ ಕಮ್ಯೂನಿಕೇಷನ್ ಪ್ರೋಗ್ರಾಂಗೆ ಒಂದು ಪ್ರಾಮುಖ್ಯತೆ ಕೊಟ್ಟಿತ್ತು. ಆದರೆ ಕಾರಣಾಂತರದಿಂದ ಕೆಲವಾರು ವರ್ಷ ಆ ಕೆಲಸ ಕುಂಠಿತವಾಗಿ ನಿಂತು ಹೋಯಿತು. ಪುನಃ 1972ನೇ ಇಸವಿಯಲ್ಲಿ ಹುಕುಂ ಮಾಡಿ ಪ್ರತಿ ತಾಲ್ಲೂಕಿಗೂ 80 ಮೈಲಿ ರಸ್ತೆ ಆಗಬೇಕು, ಇಡೀ ರಾಜ್ಯದಲ್ಲಿ 1000 ಕಿಲೋಮೀಟರ್ ಅಷ್ಟು ಉದ್ದದ ರಸ್ತೆಗಳು ಆಗಬೇಕು ಎನ್ನತಕ್ಕಂಥಾ ತೀರ್ಮಾನ ತೆಗೆದುಕೊಂಡಿದ್ದೇವೆ. ಅದರ ಪ್ರಕಾರ ಕೆಲಸ ಆರಂಭವಾಯಿತು. ಆದರೆ ಮುಂದಿನ 1-1½ ವರ್ಷದಲ್ಲಿ ಏನಾಯಿತು ಎಂದರೆ ರಾಜ್ಯದಲ್ಲಿ ಇರ್ರಿಗೇಷನ್ ಮತ್ತು ಪವರ್‌ಗೆ ಹೆಚ್ಚು ಹಣ ಒದಗಿಸಿ ಇದಕ್ಕೆ ಪ್ರಾಮುಖ್ಯತೆ ಕೊಡಬೇಕಾಗಿ ಬಂದುದರಿಂದ ಆಗ ಸ್ವಲ್ಪ ಕುಂಠಿತವಾಯಿತು. ಹೀಗಾದರೆ ನಮ್ಮ ಯೋಜನೆ ಪೂರ್ಣವಾಗುವುದಿಲ್ಲ ಎಂದು ಯೋಚನೆ ಮಾಡಿ, ಇದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕು ಎಂದು ಯೋಚನೆ ಮಾಡಿ ರೋಡ್ಸ್ ಅಂಡ್ ಬ್ರಿಡ್ಜಸ್‌ಗೆ ಒಂದು ಫಂಡ್ ಮಾಡಿದರೆ ಅದರಿಂದ ಬರತಕ್ಕಂಥಾ ಹಣವನ್ನು ಮುಡುಪಾಗಿಟ್ಟರೆ ಆಗ ಈ ಕೆಲಸ ಸುಲಭವಾಗಿ ಆಗಲು ಅನುಕೂಲವಾಗುತ್ತದೆ ಅಂತ ಯೋಚನೆ ಮಾಡಿದೆವು. ಅದರಂತೆ ರೋಡ್ಸ್ ಅಂಡ್ಸ್ ಬ್ರಿಡ್ಜಸ್ ಫಂಡ್ ಮಾಡಿದ್ದರಿಂದ ಈಗಾಗಲೇ ರಾಜ್ಯ ದಲ್ಲಿ 6 ಸಾವಿರ ಕಿಲೋಮೀಟರ್‌ಗಳಲ್ಲಿ 10 ಸಾವಿರ ಕಿಲೋಮೀಟರ್ ರಸ್ತೆಗಳಷ್ಟು ಕಾರ್ಯ ಒಂದನೇ ಘಟ್ಟದಲ್ಲಿ ಪೂರೈಕೆ ಆಗಿದೆ. ಇನ್ನು 6 ಸಾವಿರ ಕಿಲೊಮೀಟರ್ ಅಷ್ಟು ರಸ್ತೆಯನ್ನು 3ನೇ ಹಂತದಲ್ಲಿ ಸೇರಿಸಲಾಗುತ್ತದೆ. ಅಮೇಲೆ ಮತ್ತೆ ಸರ್ಕಾರ ಯೋಚನೆ ಮಾಡಿ ಇದನ್ನು 2ನೇ ಘಟ್ಟದಲ್ಲೇ ಪೂರೈಕೆ ಮಾಡಬೇಕು ಎಂದು ಆಲೋಚನೆ ಮಾಡಿ ಈಗಾಗಲೇ ಈ ಬಗ್ಗೆ ನಮ್ಮ ಇಂಜಿನೀಯರು ಗಳಿಗೆ ತಿಳಿಸಿದ್ದೇವೆ, ತಮಗೂ ಕೂಡ ಅನೇಕ ವೇಳೆ ತಿಳಿಸಿದ್ದೇನೆ, ಇನ್ನು 3—4 ತಿಂಗಳನಲ್ಲಿ 16 ಸಾವಿರ ಕಿಲೋ ಮೀಟರ್ ಅಷ್ಟು ರಸ್ತೆಗಳನ್ನು ಪೂರೈಕೆ ಮಾಡಬೇಕು ಎಂದು ಹುಕುಂ ಮಾಡಿ ದೇನೆ, ಎಂದು. ಅದಕ್ಕೆ ಎಸ್ಟಿಮೇಟ್ ತಯಾರಾಗಿ ಕೆಲಸ ನಡೆಯುವ ಹಾಗೆ ಒಂದು ಪಟ್ಟಿ ಸಿದ್ಧ ಮಾಡಬೇಕು ಎಂದು ಅವರಿಗೆ ತಿಳುವಳಿಕೆ ಕೊಟ್ಟಿದ್ದೇನೆ. ಮತ್ತು ಈ ರಸ್ತೆಗಳು ಒಂದೊಂದು ತಾಲ್ಲೂಕಿನಲ್ಲಿ ಎಷ್ಟೆಷ್ಟು ಆಗಬೇಕು ಅನ್ನುವುದರ ಬಗ್ಗೆ ತಮ್ಮೆಲ್ಲರೊಂದಿಗೂ ಯೋಚನೆ ಮಾಡಿ, ಅಧಿಕಾರಿಗಳೊಂದಿಗೆ ಸಮಾಲೋಚನೆ ಮಾಡಿ ಈ ಕೆಲಸ 2ನೇ ಘಟ್ಟದಲ್ಲೇ ಒಂದು ಬಡ್ಜೆಟ್ಟನ್ನು ತಯಾರುಮಾಡುವಂತೆ ಈಗಾಗಲೇ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಅದರ ಅಂದಾಜನ್ನು ತಯಾರುಮಾಡಿ ಸಿದ್ಧ ಮಾಡಬೇಕು ಎಂದು ಸೂಚನೆ ಕೊಟ್ಟಿದ್ದೇನೆ.

ಶ್ರೀ ಟಿ. ಎಂ. ಮಂಜುನಾಥ್.—ರೂರಲ್ ಕಮ್ಯೂನಿಕೇಷನ್ ರೋಡ್ಸ್ ಬಗ್ಗೆ ಕೆಲಸಗಳನ್ನು ತೆಗೆದುಕೊಳ್ಳಬೇಕಾದರೆ ಕೆಲವು ಅಫಿಷಿಯಲ್ಸ್‌ನ್ನು ಇಟ್ಟುಕೊಂಡು ಇನ್‌ಫರ್ಮೇಷನ್ ತೆಗೆದು ಕೊಳ್ಳುತ್ತೀರಿ. ಈ ರಸ್ತೆಗಳನ್ನು ತೆಗೆದುಕೊಳ್ಳಬೇಕಾದರೆ ಕೆಲವು ನಾರ್ಮ್ಸ್‌ಗಳನ್ನು ಹೇಳಿದಿರಿ. ಆದರೆ ಇದರಲ್ಲಿ ಒಂದು ತೊಡಕು ಏನು ಎಂದರೆ ಒಂದೇ ಒಂದು ರಸ್ತೆ ಎರಡು ತಾಲ್ಲೂಕು ಗಳಿಗೆ ಸಂಬಂಧಪಟ್ಟಿದ್ದರೆ ಯಾವ ಎಂ.ಎಲ್.ಎ. ಮುಂದೆ ಬಂದು ಹೇಳುತ್ತಾನೋ ಆ ಕೆಲಸವನ್ನು ಮುಖ್ಯವಾಗಿ ತೆಗೆದುಕೊಳ್ಳುತ್ತೀರಿ.

ಶ್ರೀ ಹೆಚ್. ಎಂ. ಚೆನ್ನಬಸಪ್ಪ.— ಆ ಎಂ.ಎಲ್.ಎ. ಹೇಳಿದ ರಸ್ತೆ ಮಾಡಬೇಕು, ಈ ಎಂ.ಎಲ್.ಎ. ಹೇಳಿದ ರಸ್ತೆ ಮಾಡಬೇಕು ಎನ್ನುವ ಉದ್ದೇಶ ಇದರಲ್ಲಿ ಇಲ್ಲ. ಆ ರಸ್ತೆ ಯಾವ ತಾಲ್ಲೂಕಿಗೆ ಸಂಬಂಧಪಟ್ಟ ಎಂ.ಎಲ್.ಗೆ ಸೇರಿರಲಿ ಒಟ್ಟಿನಲ್ಲಿ ಪ್ರತಿಯೊಂದು ಹಳ್ಳಿಗೂ ರಸ್ತೆಯಾಗ ಬೇಕು. ಇಟ್ ಈಸ್ ನಾಟ್ ದಿ ಕ್ರಿಟೇರಿಯಾ. ದೇಶದಲ್ಲಿ ಎಲ್ಲಾ ರಸ್ತೆಗಳನ್ನೂ ತೆಗೆದುಕೊಳ್ಳ

ಬೇಕು. ಈವೊತ್ತು ನಾವು ಇಲ್ಲಿಗೆ ಬಂದಿರಬಹುದು ನಾಳೆ ನೀವು ಬರಬಹುದು. ಅದು ಕ್ರಿಟೇರಿಯಾ ಅಲ್ಲ. ನಾನು ಈ ಸಂದರ್ಭದಲ್ಲಿ ತಮ್ಮನ್ನು ಒಂದು ಮಾತು ಕೇಳಿಕೊಳ್ಳುತ್ತೇನೆ ಈ ರಸ್ತೆಗಳನ್ನು ಮಾಡಬೇಕು ಎಂದು ಹುಕುಂ ಮಾಡುವಾಗ ತಾವೆಲ್ಲರೂ ಸಹಾಯ ಮಾಡಿ ಉಳಿದ ರಸ್ತೆಗಳನ್ನು ಕೂಡ ಸೇರಿಸಿ ಕೊಟ್ಟರೆ ಬಹಳ ಅನುಕೂಲವಾಗುತ್ತದೆ ನಾನು ಈಗಾಗಲೇ ಸೂಚನೆ ನೀಡಿದ್ದೇನೆ, ಎಲ್ಲಾ ರಸ್ತೆಗಳ ಒಂದು ಪಟ್ಟಿಯನ್ನು ತಯಾರು ಮಾಡಿ, ಅದರ ಒಂದು ಪ್ಲಾನ್ ಮತ್ತು ಅಂದಾಜನ್ನು ಸಿದ್ಧಗೊಳಿಸಬೇಕು ಎಂದು. ಈಗ ವರ್ಷಕ್ಕೆ 4 ಕೋಟಿ ರೂಪಾಯಿಯಷ್ಟು ಹಣ ಈ ರೂರಲ್ ಕಮ್ಯೂನಿಕೇಷನ್ ರೋಡ್ಸ್‌ಗಳಿಗೆ ಖರ್ಚಾಗುತ್ತಿದೆ. ಬರಬರುತ್ತಾ ಇದಕ್ಕೆ ಇನ್ನೂ ಹೆಚ್ಚು ಹೆಚ್ಚು ಖರ್ಚಾಗುತ್ತದೇ ವಿನಾ ಕಡಿಮೆ ಆಗುವುದಿಲ್ಲ. ಏತಕ್ಕೆಂದರೆ ರೆಗ್ಯುಲೇಟೆಡ್ ಮಾರ್ಕೆಟ್ ವ್ಯಾಪಾರಗಳು ಹೆಚ್ಚುಹೆಚ್ಚು ಆದ ಹಾಗೆ ಅಷ್ಟಷ್ಟು ಹಣ ಈ ರೂರಲ್ ಕಮ್ಯೂನಿಕೇಷನ್‌ಗೆ ಬರುತ್ತದೆ. ಈವೊತ್ತು ಅಧಿಕಾರದಲ್ಲಿ ನಾನೇ ಇರಲಿ ನಾಳೆ ನೀವೇ ಇರಲಿ, ಇನ್ನೊಬ್ಬರೇ ಇರಲಿ ಒಟ್ಟಿನಲ್ಲಿ ನಾನು ಹೇಳುವುದು ಈ ರಸ್ತೆಗಳಿಂದ ಬರತಕ್ಕಂಥಾ ಹಣವನ್ನು ಮುಡುಪಾಗಿಟ್ಟು, ಕೆಲವು ವರ್ಷದಲ್ಲಿ ಪ್ರತಿಯೊಂದು ಹಳ್ಳಿಗೆ ರಸ್ತೆ ಆದಮೇಲೆ ನಂತರ ಮೆಟಲ್ ವರ್ಕ್, ಅನಂತರ ಟಾರ್ ಹಾಕಿಕೊಡುವಂಥಾದ್ದು ಹೀಗೆ ಬರುತ್ತದೆ. ಒಟ್ಟಿನಲ್ಲಿ ಈ ರಸ್ತೆಗಾಗಿ ಬರತಕ್ಕಂಥ ನಿರ್ದಿಷ್ಟವಾದ ಹಣ ಏನು ಇದೆ ಅದನ್ನು ಮುಡುಪಾಗಿ ಇಡಬೇಕು ಹೀಗೆ ಮಾಡಿದರೆ ಹೊಸದಾಗಿ ರಸ್ತೆಗಳು ಆಗಬೇಕು ಎನ್ನುವ ಬೇಡಿಕೆಯೂ ಕೂಡ ಕಡಿಮೆಯಾಗುತ್ತದೆ. ಈ ಬಗ್ಗೆ ಮೊದಲನೇ ಘಟ್ಟದ ರಸ್ತೆ ಆದಮೇಲೆ ಎರಡನೇ ಘಟ್ಟದಲ್ಲಿ ಜಲ್ಲಿ ಹಾಕುವುದು, 3ನೇ ಘಟ್ಟದಲ್ಲಿ ಟಾರ್ ಹಾಕುವಂಥಾ ಕೆಲಸ ಆಗುತ್ತದೆ. ಆದುದರಿಂದ ನಾನು ಹೇಳುವುದು ಹಳ್ಳಿಗಳಿಗೆ ಇದು ಒಂದು ವರದಾನ ಎಂದು ಸ್ಪಷ್ಟವಾಗಿ ತಿಳಿಸುತ್ತೇನೆ. ಇದುವರೆಗೂ ಏನಿತ್ತು ಎಂದರೆ ತಾಲ್ಲೂಕು ಬೋರ್ಡ್‌ಗೆ ಸೇರಿದ ರಸ್ತೆಗಳು ನೀವು ಮಾಡಿರಿ, ಪಂಚಾಯಿತಿಗೆ ಸೇರಿದ ರಸ್ತೆಗಳನ್ನು ನೀವು ಮಾಡಿರಿ ಎಂದು ಹೇಳುತ್ತಿದ್ದೆವು. ಇನ್ನು ಮುಂದೆ ಆ ಪ್ರಶ್ನೆ ಬರುವುದೇ ಇಲ್ಲ. ಒಂದೇ ವೇಳೆ ಅಂಥಾ ಪ್ರಶ್ನೆಗಳು ಬಂದರೂ ಕೂಡ ಕೇವಲ ಸಣ್ಣ ರಸ್ತೆಗಳು ಅಂದರೆ 6 ಫರ್ಲಾಂಗ್, 8 ಫರ್ಲಾಂಗ್, 10 ಫರ್ಲಾಂಗ್ ಇನ್ನೂ ಹೆಚ್ಚು ಎಂದರೆ ಒಂದು ಮೈಲಿ 2 ಮೈಲಿ ರಸ್ತೆಗಳು. ಇವುಗಳನ್ನು ಆಯಾಯ ತಾಲ್ಲೂಕು ಬೋರ್ಡ್‌ನವರು ಮತ್ತು ಪಂಚಾಯಿತಿಯವರೇ ಮಾಡಿಕೊಳ್ಳಬೇಕೇ ವಿನಾ ಎಲ್ಲಾ ರಸ್ತೆಗಳನ್ನೂ ಸಹ ಸರ್ಕಾರವೇ ಮಾಡಬೇಕು ಸರ್ಕಾರವೇ ತೆಗೆದುಕೊಳ್ಳಬೇಕು ಎನ್ನುವ ಜವಾಬ್ದಾರಿ ಇಲ್ಲ ಎನ್ನುವುದು ಸರ್ಕಾರದ ಸ್ಪಷ್ಟ ಅಭಿಪ್ರಾಯ. ಇದರ ಬಗ್ಗೆ ಒಂದು ಹುಕುಂ ಸಹ ಹೊರಡಿಸಲಾಗಿದೆ.

ಇನ್ನು ಎರಡನೆಯದಾಗಿ ಸೇತುವೆಗಳ ವಿಷಯ. ನಮ್ಮ ರಾಜ್ಯದಲ್ಲಿ ಸಣ್ಣಪುಟ್ಟ ಸೇತುವೆಗಳು ಆಗಬೇಕಾಗುತ್ತದೆ. ದೊಡ್ಡ ಸೇತುವೆಗಳೂ ಕೂಡ ಬೇಕಾಗುತ್ತದೆ. ಪೂರ್ವದಲ್ಲಿ ಏನಿತ್ತು ಎಂದರೆ ಹಳ್ಳಿಗಳಲ್ಲಿ ನಾನ್ ಪಿ.ಡಬ್ಲ್ಯು.ಡಿ. ರಸ್ತೆಗಳು ಏನು ಇವೆ, ಸಣ್ಣಪುಟ್ಟ ರಸ್ತೆಗಳು, ಸೇತುವೆಗಳು ಆಗಬೇಕಾದರೆ ತಾಲ್ಲೂಕು ಬೋರ್ಡ್ ಮಾಡಬೇಕು, ಇಲ್ಲವೇ ತಾಲ್ಲೂಕು ಬೋರ್ಡ್ ಅರ್ಧ ಭಾಗ ಹಣ ಕೊಟ್ಟು ಮಾಡಿಸಬೇಕಾಗಿತ್ತು. ಅವರಲ್ಲಿ ಈ ಬಗ್ಗೆ ಹಣ ಇಲ್ಲದೇ ಇದ್ದುದರಿಂದ ಅವರಿಗೆ ರಸ್ತೆ ಕೆಲಸ ಆಗುತ್ತಿರಲಿಲ್ಲ ಸೇತುವೆಗಳ ಕೆಲಸ ಆಗುತ್ತಿರಲಿಲ್ಲ ಹೀಗಾಗಿ ಎಲ್ಲಾ ಕಡೆಗಳಲ್ಲೂ ಕೂಡ ಸಣ್ಣಪುಟ್ಟ ಸೇತುವೆಗಳ ಕೆಲಸ ನಿಂತುಹೋಗಿದೆ ಅದನ್ನು ಸರ್ಕಾರ ಯೋಜನೆ ಮಾಡಿ ಸರ್ಕಾರ ಒಂದು ಆಜ್ಞೆ ಮಾಡಿತು. ಎಲ್ಲಾ ರಸ್ತೆಗಳನ್ನೂ, ಆ ರಸ್ತೆ ಪಿ.ಡಬ್ಲ್ಯು.ಡಿ.ಯವರಿಗೆ ಒಳಪಟ್ಟಿದ್ದೇ ಆಗಿರಲಿ, ಅಥವಾ ನಾನ್ ಪಿ.ಡಬ್ಲ್ಯು.ಡಿ.ಗೆ ಒಳಪಟ್ಟಿದ್ದೇ ಆಗಿರಲಿ ಸಣ್ಣಪುಟ್ಟ ರಸ್ತೆಗಳು ಬಿಟ್ಟು ಬಾಕಿ ರಸ್ತೆಗಳ ಹೊಣೆ ಸರ್ಕಾರವೇ ವಹಿಸಿಕೊಳ್ಳಬೇಕು ಅಂತ ಈಗಾಗಲೇ ಆಲೋಚನೆ ಮಾಡಿದ್ದೇವೆ. ಮತ್ತು ಎಲ್ಲಾ ಸದಸ್ಯರಿಗೂ ಕೂಡ ತಿಳಿಸುತ್ತೇನೆ. ಆದುದರಿಂದ ಮಾನ್ಯ ಸದಸ್ಯರಿಗೆ ಈ ಸಂದರ್ಭದಲ್ಲಿ ತಿಳಿಸುವುದು ಏನೆಂದರೆ ನಮ್ಮ ನಿಮ್ಮ ತಾಲ್ಲೂಕಿನಲ್ಲಿ ಸಣ್ಣಪುಟ್ಟ ಸೇತುವೆಗಳು ಅದು ಪಿ.ಡಬ್ಲ್ಯು.ಡಿ.ಗೆ ಒಳಪಟ್ಟಿದ್ದೇ ಆಗಿರಲಿ, ನಾನ್ ಪಿ.ಡಬ್ಲ್ಯು.ಡಿ.ಗೆ ಒಳಪಟ್ಟಿದ್ದೇ ಆಗಿರಲಿ ಆ ಸೇತುವೆಗಳ ಒಂದು ಪಟ್ಟಿಯನ್ನು ಮಾಡಿ ಕೊಟ್ಟರೆ ನಮ್ಮ ಅಧಿಕಾರಿಗಳು ಕೂಡ ಅದನ್ನು ತರಿಸಿಕೊಂಡು ಅವರೂ ಕೂಡ ಒಂದು ಪಟ್ಟಿ ಮಾಡಿ ಯಾವ ಯಾವ ವರ್ಷ ಎಷ್ಟೆಷ್ಟು ಕೆಲಸವನ್ನು ತೆಗೆದುಕೊಳ್ಳಬೇಕು ಅದರ ಒಂದು ಎಸ್ಟಿಮೇಟ್ ತಯಾರು ಮಾಡಿ ಫೇಸ್ಡ್ ಪ್ರೋಗ್ರಾಂನಲ್ಲಿ ಅವುಗಳನ್ನು ತೆಗೆದುಕೊಳ್ಳುವಂತೆ ಮಾಡುತ್ತಾರೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆಗ ಜನಗಳಿಗೂ ಕೂಡ ಒಂದು ಭರವಸೆ ಸಿಕ್ಕಿದಂತಾಗುತ್ತದೆ. ಅಲ್ಲದೇ ಇನ್ನು

ನಾಲ್ಕಾರು ವರ್ಷಗಳಲ್ಲಿ ಎಲ್ಲ ಸೇತುವೆಗಳ ಕೆಲಸ ಆಗುತ್ತದೆ ಎನ್ನುವ ಭರವಸೆಯೂ ಕೂಡ ಸಿಕ್ಕಿದಂತಾಗುತ್ತದೆ. ಈ ರೀತಿಯಾಗಿ ಒಂದು ವ್ಯವಸ್ಥೆ ಮಾಡಿದ್ದೇವೆ. ಆದುದರಿಂದ ಇನ್ನು ಮುಂದೆ ಹಳ್ಳಿಗಳಿಗೆ ರಸ್ತೆ ಮತ್ತು ಸೇತುವೆಗಳು ಆಗತಕ್ಕಂಥ ವಿಷಯದಲ್ಲಿ ಸರ್ಕಾರ ಸಹಾನುಭೂತಿಯಿಂದ ಇದೆ ಎಂದು ನಂಬಿಕೆ ಉಂಟಾಗುವುದಲ್ಲದೆ ಜನರಿಗೂ ಸಹ ಇದರಲ್ಲಿ ಉಪಯೋಗವಾಗುತ್ತದೆ ಅಂತ ಒಂದು ನಂಬಿಕೆ ಬರುತ್ತದೆ. ಮತ್ತು ಕೆಲಸಗಳೂ ಕೂಡ ನಡೆಯುತ್ತಾ ಇರುತ್ತದೆ. ಇನ್ನು ಕೆಲವು ಸದಸ್ಯರು ಈ ಕೆಲಸ ಹುಕುಂ ಮಾಡಿದ ಕೂಡಲೇ ಕೆಲಸ ಆಗಬೇಕು ಎನ್ನುವ ಅಭಿಪ್ರಾಯ ಹೇಳಿದ್ದಾರೆ. ಮಾನ್ಯ ಬಂಗಾರಪ್ಪನವರು ಹೇಳಿದರು ಬಜೆಟ್ಟಿನಲ್ಲಿ ಹಣ ಇಟ್ಟರೆ ಸಾಲದು ಆ ಕೆಲಸ ಆಗಬೇಕು ಎಂದು. ಅವರು ಹೇಳಿದ್ದು ವಾಸ್ತವಾಂಶವೇ. ಅದರಲ್ಲಿ ನನಗೇನೂ ಭಿನ್ನಾಭಿಪ್ರಾಯ ಇಲ್ಲ. ನಾವು ಬಜೆಟ್ಟಿನಲ್ಲಿ ಈ ಹಣವನ್ನು ಪ್ರೊವೈಡ್ ಮಾಡಿದ ತಕ್ಷಣ ಆ ಕೆಲಸ ಆಯಿತು ಅಂತ ಅರ್ಥವಲ್ಲ. ಅದು ಕೆಲಸಕ್ಕೆ ಪರವಾನಗೆ ಕೊಟ್ಟಿದ್ದೇವೆ ಅಂತ ಅರ್ಥ. ಇದು ತಕ್ಷಣದಲ್ಲೇ ಕೆಲಸ ಆಗಬೇಕು ಎನ್ನುವ ವಿಷಯದಲ್ಲಿ ನಮಗೂ ನಿಮಗೂ ಯಾವ ಭಿನ್ನಾಭಿಪ್ರಾಯವೂ ಇಲ್ಲ ಎಂದು ಹೇಳುತ್ತೇನೆ.

ಇದರಲ್ಲಿ ಅನೇಕ ತೊಂದರೆಗಳಿರುತ್ತಿದ್ದವು; ಅಧಿಕಾರ ವಿಕೇಂದ್ರೀಕರಣವಾಗಿರಲಿಲ್ಲ; ಮತ್ತಿತ್ತ ಸಾಮಾನ್ಯವಾದಂಥ ಇನ್ನೂ ಅನೇಕ ತೊಂದರೆಗಳಿದ್ದವು; ಈಗ ನಮ್ಮ ಒಂದು ಅನುಭವದ ಆಧಾರದ ಮೇಲೆ, ಆ ತೊಂದರೆಗಳನ್ನೆಲ್ಲಾ ಒಂದೊಂದಾಗಿ ಬಗೆಹರಿಸಿ, ತಕ್ಷಣವೇ ಕೆಲಸ ಪ್ರಾರಂಭಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಕೆಲಸಗಳು ಆದಷ್ಟು ಬೇಗ ಮುಗಿಯಬೇಕು ಎನ್ನುವ ಬಗ್ಗೆ ಸರ್ಕಾರ ಕೂಡ ಸಹಾನುಭೂತಿಯಿಂದ ಇದೆ. ಈ ಕಾರಣದಿಂದಲೇ ಎಲ್ಲ ಸೇತುವೆಗಳ ಕೆಲಸವನ್ನು ಈಗ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ವಹಿಸಿದ್ದೇವೆ. ಈ ಮೊದಲು ದೊಡ್ಡ ದೊಡ್ಡ ಸೇತುವೆಗಳ ಕೆಲಸವನ್ನು ಕಂಟ್ರಾಕ್ಟರ್‌ಗಳಿಗೆ ವಹಿಸಲಾಗುತ್ತಿತ್ತು; ಅವರು ಅನೇಕ ಕಾರಣಗಳಿಂದ ಕೆಲಸ ಮಾಡುವುದನ್ನು ನಿಧಾನ ಮಾಡುತ್ತಿದ್ದುದರಿಂದ, ಅವು ಮುಗಿಯಬೇಕಾದರೆ ಅನೇಕ ವರ್ಷಗಳೇ ಆಗುತ್ತಿತ್ತು; ಈ ಕಾರಣದಿಂದಲೇ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಅವರೇ ಇದರ ಹೊರೆಯನ್ನು ಸಂಪೂರ್ಣವಾಗಿ ಹೊರಬೇಕು ಎಂಬುದೇ ಸರ್ಕಾರದ ಆಶಯವಾಗಿದೆ. ಅದರಂತೆ ನಾವು ಅವರಿಗೆ ವಿಶೇಷವಾದಂಥ ಸಹಾಯ ಮತ್ತು ಸೌಲಭ್ಯಗಳನ್ನು ಕೊಡುತ್ತಿರುವುದರ ಜೊತೆಗೆ ಅವರಿಗೆ ಬೇಕಾದಂಥ ಮಿಷನರಿಗಳನ್ನು ಕೊಂಡುಕೊಳ್ಳಲು ಸಾಲ ಮತ್ತು ವರ್ಕಿಂಗ್ ಕ್ಯಾಪಿಟಲ್‌ನ್ನು ಸಹ ಕೊಟ್ಟು, ಯಾವ ಕಾರಣದಿಂದಲೂ ಕೆಲಸವನ್ನು ನಿಲ್ಲಿಸಬಾರದೆಂದು ಹೇಳಿದ್ದೇವೆ. ಇಂತಹ ರೇಟಿನಲ್ಲಿ ಕೆಲಸ ಮಾಡಬೇಕೆಂದು ಅವರಿಗೆ ವಿಧಿಯುಕ್ತ ಮಾಡಿ ಕೆಲಸವನ್ನು ವಹಿಸಿರುವುದರ ಜೊತೆಗೆ ಆದಷ್ಟು ಶೀಘ್ರದಲ್ಲಿಯೇ ಆ ಕೆಲಸಗಳನ್ನು ಪೂರೈಸಬೇಕೆಂದು ಸಹ ನಾವು ಅವರಿಗೆ ಹುಕುಂ ಮಾಡಿದ್ದೇವೆ.

12-30 P.M.

ಇದರ ಜೊತೆಗೆ ಸೇತುವೆಗಳ ಅಂದಾಜು ತಯಾರು ಮಾಡುವುದು, ಡಿಸೈನ್ ತಯಾರು ಮಾಡುವ ಕೆಲಸವನ್ನು ಸಹ ನಾವು ಅವರಿಗೇ ವಹಿಸಿದ್ದೇವೆ. ಅದರಂತೆ ಅವರು ಈಗ ಕೆಲಸ ಮಾಡುತ್ತಿದ್ದಾರೆ. ಈಗ ನಮ್ಮ ರಾಜ್ಯದ ಕೆಲವು ಕಡೆಗಳಲ್ಲಿ ಅನೇಕ ಸೇತುವೆಗಳ ಕೆಲಸ ನಾನಾ ಕಾರಣಗಳಿಂದ ನಿಂತುಹೋಗಿವೆ. ಈ ರೀತಿ ತಕರಾರು ಇರತಕ್ಕಂಥ ಸೇತುವೆಗಳ ಕೆಲಸವನ್ನು ಸಹ ಸರ್ಕಾರದವರೆ ವಹಿಸಿಕೊಂಡು ಸಂಬಂಧಪಟ್ಟ ಕಂಟ್ರಾಕ್ಟರುಗಳನ್ನು ವಜಾ ಮಾಡಿ, ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೇ ಆ ಕೆಲಸವನ್ನೂ ಸಹ ವಹಿಸಬೇಕೆಂದು ನಿರ್ಧಾರ ಮಾಡಿದ್ದೇವೆ. ಅದರಂತೆ ಈಗಾಗಲೇ ಕೆಲವು ಸೇತುವೆಗಳ ಕೆಲಸವನ್ನು ಅವರಿಗೆ ವಹಿಸಿದ್ದೇವೆ. ಉಳಿದ ಸೇತುವೆಗಳ ಕೆಲಸವನ್ನು ಸಹ ಆದಷ್ಟು ಬೇಗ ಅವರಿಗೆ ವಹಿಸಿಕೊಡುತ್ತೇವೆ. ಒಟ್ಟಿನಲ್ಲಿ ಈ ಕೆಲಸಕಾರ್ಯಗಳು ತ್ವರಿತವಾಗಿ ಆಗಬೇಕೆಂಬ ವಿಚಾರದಲ್ಲಿ ನಿಮಗೂ ನಮಗೂ ಯಾವ ವಿಧವಾದಂಥ ಭಿನ್ನಾಭಿಪ್ರಾಯವೂ ಇಲ್ಲ; ಮಾನ್ಯ ಕಬಾಡಿಯವರು ಮಾತನಾಡುವಾಗ ಅಸಾಧುವಾದಂಥ ಕೆಲವು ಟೀಕೆಗಳನ್ನು ಮಾಡಿದರು; ಬಿಜಾಪುರ ಜಿಲ್ಲೆಯಲ್ಲಿ ಒಂದು ಹಿಡಿ ಮಣ್ಣನ್ನು ಸಹ ಹಾಕಿಲ್ಲವೆಂದು ಅವರು ಹೇಳಿದರು; ಆದರೆ ಅಂಕಿಅಂಶಗಳ ಪ್ರಕಾರ ನೋಡುವುದಾದರೆ, ಆ ಜಿಲ್ಲೆಯಲ್ಲಿ ಹೆಚ್ಚು ಹಣವನ್ನು ಬೇರೆ ಜಿಲ್ಲೆಗಳಿಗಿಂತ ಖರ್ಚು ಮಾಡಲಾಗಿದೆ. ಈ ಬಗ್ಗೆ ಅಂಕಿ ಅಂಶಗಳನ್ನು ಕೊಡುತ್ತೇನೆ; ೧೯೭೦ನೇ ಇಸವಿಯಲ್ಲಿ ಬಿಜಾಪುರ ಜಿಲ್ಲೆಯಲ್ಲಿ ೧೬೮ ಲಕ್ಷ ರೂ. ಗಳನ್ನು, ಬೆಂಗಳೂರುಜಿಲ್ಲೆಯಲ್ಲಿ ೯೦ ಲಕ್ಷ ರೂ. ಗಳನ್ನು, ಬೆಳಗಾಂ ಜಿಲ್ಲೆಯಲ್ಲಿ ೧೧೭ ಲಕ್ಷ ರೂ. ಗಳನ್ನು ಬೀದರ್ ಜಿಲ್ಲೆಯಲ್ಲಿ ೧೮ ಲಕ್ಷ ರೂ. ಗಳನ್ನು, ಬಳ್ಳಾರಿ ಜಿಲ್ಲೆಯಲ್ಲಿ ೪೯ ಲಕ್ಷ ರೂ ಗಳನ್ನು ಮಾನ್ಯ ಕೊಡಗಿಯವರ ಜಿಲ್ಲೆಯಲ್ಲಿ ೧೫೫ ಲಕ್ಷ ರೂ ಗಳನ್ನು, ಶಿವಮೊಗ್ಗ ಜಿಲ್ಲೆಯಲ್ಲಿ ೪೯ ಲಕ್ಷ ರೂ. ಗಳನ್ನು ಖರ್ಚು ಮಾಡಿದ್ದೇವೆ. ಈ ಕಾರಣ

ದಿಂದ ಅನುಚಿತವಾದಂಥ ಟೀಕೆಟಿಪ್ಪಣಿಗಳನ್ನು ಮಾಡಬಾರದೆಂದು ಮಾನ್ಯ ಕಬಾಡಿಯವರಿಗೆ ಮತ್ತು ಮಾನ್ಯ ಕೊಡಗಿಯವರಿಗೆ ತಿಳಿಸುತ್ತಿದ್ದೇನೆ, ಇವೊತ್ತಿನದಿವಸ ಯಾವುದಾದರೂ ಜಿಲ್ಲೆಯಲ್ಲಿ ಅತ್ಯಧಿಕ ವಾಗಿ ಹಣವನ್ನು ಸೇತುವೆಗಳಿಗಾಗಿ ಖರ್ಚು ಮಾಡಿದ್ದರೆ ಅದು ದಕ್ಷಿಣಕನ್ನಡ ಜಿಲ್ಲೆ ಎಂದು ಹೇಳಬಹುದು; ಆದಕಾರಣ ಇಂತಹ ಅನುಚಿತವಾದಂಥ ಟೀಕೆಗಳನ್ನು ಮಾಡತಕ್ಕದು ಸರಿಯಲ್ಲವೆಂದು ನಾನು ವಿನಯ ಪೂರ್ವಕವಾಗಿ ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

[ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು]

ಶ್ರೀ ಎ. ಜಿ. ಕೊಡಗಿ.—ತಾವು ಈಗ ೧೯೭೨ನೇ ಇಸವಿಯಲ್ಲಿ ಖರ್ಚು ಮಾಡಿದ ಅಂಕಿಅಂಶಗಳನು ಹೇಳಿದಿರಿ; ಆದರೆ ನಾನು ಅದರ ಮುಂದಿನ ವರ್ಷಗಳ ಅಂಕಿಅಂಶಗಳನ್ನು ಹೇಳಿದ್ದು;

ಶ್ರೀ ಎಚ್ ಎಂ ಚೆನ್ನಬಸಪ್ಪ.—ಅದರ ಮುಂದಿನ ವರ್ಷಗಳಲ್ಲಿಯೂ ಹಣ ಖರ್ಚು ಮಾಡಿದ್ದೇವೆ. ಆದರೆ ತಾವು ಏನೂ ಖರ್ಚು ಮಾಡಿಲ್ಲವೆಂದು ಹೇಳಿದರೆ ಅದು ಅನುಚಿತವಲ್ಲವೋ? ಟೀಕೆ ಮಾಡಿದರೆ ಅದು ವಾಸ್ತವಾಂಶದಿಂದ ಕೂಡಿರಬೇಕು; ಈ ವರ್ಷ ನಾವು ಸೇತುವೆಗಳಿಗಾಗಿ ಐದೂವರೆ ಕೋಟಿ ರೂಪಾಯಿ ಗಳನ್ನು ಖರ್ಚು ಮಾಡಬೇಕೆಂದಿದ್ದೇವೆ. ಇಷ್ಟೊಂದು ಹಣವನ್ನು ಸೇತುವೆಗಳಿಗಾಗಿ ಈ ಹಿಂದಿನ ವರ್ಷ ಗಳಲ್ಲಿ ಒದಗಿಸಿರಲಿಲ್ಲ; ಮತ್ತು ಮಂಜೂರಾತಿ ಕೊಟ್ಟಿರಲಿಲ್ಲ; ಈ ಸೇತುವೆಗಳ ಬಗ್ಗೆ ವಿವರಗಳನ್ನು ಕೊಡ ಬೇಕೆಂದಿದ್ದರೆ, ಈ ಸಲದ ಬಜೆಟ್‌ನಲ್ಲಿ ೧೦೭ ಸೇತುವೆಗಳನ್ನು ೫೫೪ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿಸಲು ಹಣವನ್ನು ಪ್ರೊವೈಡ್ ಮಾಡಿದ್ದೇವೆ. ಅದೇರೀತಿ ಒಂದೂ ಲಕ್ಷಕ್ಕೂ ಕಡಿಮೆ ವೆಚ್ಚದಲ್ಲಿ ಆಗುವಂತಹ ಸೇತುವೆಗಳನ್ನು ಕಟ್ಟಿಸಲು ೧೧೪ ಲಕ್ಷ ರೂ. ಗಳನ್ನು ಒದಗಿಸಲಾಗಿದೆ. ಮತ್ತು ಈಗಾಗಲೇ ಈ ಸೇತುವೆಗಳ ಕೆಲಸ ಪ್ರಾರಂಭ ಮಾಡಲು ಚೀಫ್ ಇಂಜಿನಿಯರ್ ಅವರು ಮಂಜೂರಾತಿ ಕೊಟ್ಟಿದ್ದಾರೆ. ಅದರಂತೆ ಕೆಲಸ ಪ್ರಾರಂಭವಾಗಿದೆ, ಒಟ್ಟಿನಲ್ಲಿ ೨೨೧ ಸೇತುವೆಗಳನ್ನು ಕಟ್ಟಿಸಲು ೭೨೨ ಲಕ್ಷ ರೂಪಾಯಿ ಗಳನ್ನು ಈ ಸಲದ ಬಜೆಟ್‌ನಲ್ಲಿ ಪ್ರೊವೈಡ್ ಮಾಡಿದ್ದೇವೆ. ಇದರ ಜೊತೆಗೆ ನಾರ್ಮಲ್ ಪ್ಲಾನ್ ಪ್ರಕಾರ ೧೫೫ ಸೇತುವೆಗಳ ಕೆಲಸ ಈಗ ನಡೆಯುತ್ತಿದೆ ಇದನ್ನು ಸಹ ಲೆಕ್ಕಕ್ಕೆ ತೆಗೆದುಕೊಂಡರೆ, ಒಟ್ಟು ೩೭೬ ಸೇತುವೆಗಳ ಕೆಲಸ ಈ ವರ್ಷದಲ್ಲಿ ನಡೆಯುತ್ತಿದೆ. ಈ ಸೇತುವೆಗಳ ಮೇಲೆ ಒಟ್ಟು ೧೦ ಕೋಟಿ ೪೨ ಲಕ್ಷ ರೂಪಾಯಿಗಳವರೆಗೆ ವೆಚ್ಚವಾಗುತ್ತದೆ. ಈ ಹಿಂದೆ ಈ ಲೋಕೋಪಯೋಗಿ ಇಲಾಖೆಯ ಇತಿಹಾಸದಲ್ಲಿಯೇ ಇಷ್ಟು ಭಾರಿ ಪ್ರಮಾಣದಲ್ಲಿ ಹಣವನ್ನು ಸೇತುವೆಗಳ ಮೇಲೆ ಖರ್ಚು ಮಾಡಿರುವುದೇ ಆಗಲೀ, ಮಂಜೂ ರಾತಿ ಮಾಡಿರುವುದೇ ಆಗಲೀ ಇಲ್ಲವೆಂದು ಹೇಳಬಹುದು; ಇದರ ಜೊತೆಗೆ ಹಳ್ಳಿಗಳಲ್ಲಿ ಸಣ್ಣಪುಟ್ಟ ಸೇತುವೆ ಗಳನ್ನು ಕಟ್ಟಿಸಲು ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಹುಕುಂ ಮಾಡಿದ್ದೇವೆ. ಈಗ ನನ್ನ ಹತ್ತಿರ ಒಂದು ಲಿಸ್ಟ್ ಇದೆ; ಅದರಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಸೇತುವೆಗಳನ್ನು ಮಂಜೂರು ಮಾಡಲಾಗಿದೆ, ಮತ್ತು ಅದಕ್ಕೆ ಎಷ್ಟೆಷ್ಟು ಹಣ ಒದಗಿಸಲಾಗಿದೆ ಎಂಬುದರ ವಿವರಗಳು ಇವೆ; ಮಾನ್ಯ ಸದಸ್ಯರು ಯಾರಾದರು ನನ್ನ ಬಳಿ ಬಂದರೆ, ಅವರಿಗೆ ಅದನ್ನು ತೋರಿಸಿ ಕೊಡುತ್ತೇನೆ ೧೯೭೧-೭೨ರಲ್ಲಿ ನಾವು ಅಧಿಕಾರಕ್ಕೆ ಬಂದಿದ್ದು; ಅಂದಿನಿಂದ ಇಲ್ಲಿಯವರೆಗೆ ಬೇಕಾದಷ್ಟು ಹಣವನ್ನು ಈ ಸೇತುವೆಗಳ ಮೇಲೆ ಖರ್ಚು ಮಾಡಿದ್ದೇವೆ. ಇನ್ನೂ ಅನೇಕ ಸೇತುವೆಗಳನ್ನು ಕಟ್ಟ ಬೇಕಾಗಿದೆ; ಇಲ್ಲಿಯವರೆಗೆ ಆಗಿರತಕ್ಕಂಥ ಕೆಲಸಗಳ ಬಗ್ಗೆ ವಿವರ ಕೊಡಲು ಹೆಚ್ಚು ಕಾಲಾವಕಾಶವಿಲ್ಲದ ಕಾರಣ ಅದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ;

ಇನ್ನು ಐ.ಸಿ ಆರ್.ಸಿ. ಪ್ರೋಗ್ರಾಂ ಬಗ್ಗೆ ಹೇಳಬೇಕೆಂದರೆ, ೧೯೬೧ ರಿಂದ ೧೯೭೨ರ ವರೆಗೆ ಅಂದರೆ ಕಳೆದ ೧೨ ವರ್ಷಗಳಲ್ಲಿ ೮ ಕೋಟಿ ೭೨ ಲಕ್ಷ ರೂಪಾಯಿಗಳನ್ನು ಹಳ್ಳಿಗಾಡಿನ ರಸ್ತೆಗಳಿಗಾಗಿ ಖರ್ಚು ಮಾಡಿದ್ದರೆ, ೧೯೭೨ ರಿಂದ ಈ ವರ್ಷದ ಕೊನೆಯವರೆಗೆ ಅಂದರೆ ಕಳೆದ ಮೂರುವರೆ ವರ್ಷಗಳಲ್ಲಿ ೧೧ ಕೋಟಿ ೨೫ ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ ರೂರಲ್ ಕಮ್ಯುನಿಕೇಷನ್‌ಗಾಗಿ ನಾವು ಇಷ್ಟೊಂದು ಹಣ ಖರ್ಚು ಮಾಡಿದ್ದರೂ ಸಹ ಮಾನ್ಯ ಕಬಾಡಿಯವರು ಏನು ಖರ್ಚು ಮಾಡಿಲ್ಲ; ತಮ್ಮ ಜಿಲ್ಲೆಯಲ್ಲಿ ಒಂದು ಹಿಡಿಮಣ್ಣನು ಸಹ ಹಾಕಿಲ್ಲವೆಂದು ಟೀಕೆ ಮಾಡಿ ಹೊರಟು ಹೋದರು; ಅವರು ಈಗ ಸಭೆಯಲ್ಲಿ ಇಲ್ಲ; ಇಂತಹ ನಾಚಿಕೆಗೇಡಿನ ಟೀಕೆ ಟಿಪ್ಪಣಿಗಳನ್ನು ಮಾಡುವುದು ಸರಿಯಲ್ಲವೆಂದು ನಾನು ಅವರಿಗೆ ತಿಳಿಯಬಯಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ.—ಕೆಲವು ರೋಡ್‌ಗಳಲ್ಲಿ ಜನರು ಓಡಾಡುವುದಕ್ಕೇ ಸಾಧ್ಯವಾಗುತಿಲ್ಲ; ಅಂತಹ ಪರಿಸ್ಥಿತಿಯಲ್ಲಿವೆ; ಅದಕ್ಕಾಗಿ ತಾವು ನಾಚಿಕೆ ಪಡಬೇಕು;

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಕಳೆದ ಮೂರೂವರೆ ವರ್ಷಗಳಲ್ಲಿ ೧೧ ಕೋಟಿ ೨೫ ಲಕ್ಷ ರೂಪಾಯಿಗಳನ್ನು ರಸ್ತೆಗಳಿಗಾಗಿ ಖರ್ಚು ಮಾಡಿದ್ದೇವೆಂದು ಹೇಳಿದ ಮೇಲೆ ತಾವು ರಸ್ತೆಗಳೇ ಚೆನ್ನಾಗಿಲ್ಲ ವೆಂದು ಹೇಳಿದರೆ ಹೇಗೆ, ಅಂದರೆ ನಾವೇನು ಅಷ್ಟೊಂದು ಹಣವನ್ನು ತೆಗೆದುಕೊಂಡು ಹೋಗಿ ಸಮುದ್ರಕ್ಕೆ ಹಾಕಿದ್ದೇವೆಂದು ತಮ್ಮ ಅರ್ಥವೋ? ಈಗ ತಾವು ಒಂದು ಕಡೆ ಮಗುವನ್ನು ಚಿವುಟುತ್ತೀರಿ, ಮತ್ತೊಂದು ಕಡೆ ತೊಟ್ಟಿಲನ್ನು ತೂಗುವ ಕೆಲಸವನ್ನೂ ಮಾಡುತ್ತಿದ್ದೀರಿ; ಕಾಸ್ಟ್ ಆಫ್ ಮೇಯಿಂಟೆನೆನ್ಸ್ ಒಂದಕ್ಕೆ ರಡರಷ್ಟು ಆಗಿದೆ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡು ಒಂದು ವಿಶೇಷ ಯೋಜನೆಯನ್ನು ಮಾಡಿ ೪,೫೦೦ ರೂಪಾಯಿಗಳನ್ನು ಹೆಚ್ಚಿಗೆ ಮಾಡಿದ್ದೇವೆ. ಯಥಾಪ್ರಕಾರವಾಗಿ ಎಂ. ಡಿ. ಆರ್. ಮತ್ತು ಐ.ಡಿ.ಆರ್ ಒಂದೊಂದು ಕಿಲೋಮೀಟರಿಗೂ ಒಂದುಸಾವಿರದಿಂದ ಒಂದುವರೆ ಸಾವಿರದವರೆಗೆ ಜಾಸ್ತಿ ಮಾಡಿದ್ದೇವೆ. ಇನ್ನು ತಾಲ್ಲೂಕು ಬೋರ್ಡುಗಳಿಗೆ ಕೊಡುತ್ತಿದ್ದ ಸಹಾಯವನ್ನು ತಪ್ಪಿಸಿ ಸರ್ಕಾರದವರೇ ಆ ರಸ್ತೆ ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡಿದ್ದೇವೆ. ಇನ್ನು ಸೇತುವೆಗಳನ್ನು ಕಟ್ಟಿಸುವುದು, ಅದನ್ನು ಕೂಡ ಹಳ್ಳಿಗಾಡಿನವರಿಗೆ ಜಾಸ್ತಿ ಸಹಾಯ ಮಾಡಬೇಕೆಂಬ ದೃಷ್ಟಿಯಿಂದ ವಹಿಸಿಕೊಂಡು ಬಹಳ ಉದಾರ ಮನಸ್ಸಿನಿಂದ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇವೆ. ಆದರೂ ಕೂಡ ಯಾವುದೇ ಕೆಲಸ ಕಾರ್ಯಗಳನ್ನು ಮಾಡಬೇಕಾದರೂ ವಿಧಿನಿಯಮಗಳಿಲ್ಲದೆ ಮಾಡುವುದಕ್ಕೆ ಬರುವುದಿಲ್ಲ. ಯಾವುದು ತಳಹದಿ ಮುಖ್ಯ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಸ್ವಾಮಿ ಈ ಪಬ್ಲಿಕ್ ಹೆಲ್ತ್ ಇಂಜನೀಯರಿಂಗ್ ಬಗ್ಗೆ ಯಾರು ಟೀಕೆ ಗಳನ್ನು ಮಾಡಿಲ್ಲ, ಆದರ ಗತಿ ಕುಲಗೆಟ್ಟು ಹೋಗಿದೆ. ಇದನ್ನು ಮೊದಲು ದುರಸ್ತು ಮಾಡಿ ಇಲ್ಲವೇ ನೀವು ಅಲ್ಲಿ ಇರಬೇಡಿ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ನಾನು ಇಲ್ಲದಿದ್ದರೆ ದುರಸ್ತು ಆಗುವುದಿಲ್ಲ. ನಾನು ಇದೆ ಮಾಡಬೇಕು. ಸೇತುವೇಗಳ ವಿಷಯದಲ್ಲಿ ನಮ್ಮ ನಿಮ್ಮ ಅಭಿಪ್ರಾಯ ಎಲ್ಲಾ ಒಂದಾಗಿದೆ. ನಾವು ನೀವು ಕೂಡಿ ಪ್ರಗತಿಯಾಗುವಂತೆ ಮಾಡಬೇಕು. ಅದಕ್ಕೆ ತಮ್ಮ ಸಹಕಾರ ಕೋರುತ್ತೇನೆ. ಇನ್ನು ಸಕ್ಕರೆ ಕಾರ್ಖಾನೆಗಳು ಎಲ್ಲೆಲ್ಲಿ ಇವೆ ಅಲ್ಲಿಗೆ ಹೋಗುವ ರಸ್ತೆಗಳನ್ನೆಲ್ಲಾ ನಾವು ನೋಡಿಕೊಳ್ಳುವ ಹಾಗೆ ಏರ್ಪಾಡು ಮಾಡಿದ್ದೇವಲ್ಲ ಆ ರಸ್ತೆಗಳ ರಿಪೇರಿಗೋಸ್ಕರ ೬೦ ಲಕ್ಷ ರೂಪಾಯಿಗಳನ್ನು ತೆಗೆದು ಇಟ್ಟಿ ದ್ದೇವೆ. ಒಂದು ಸಕ್ಕರೆ ಕಾರ್ಖಾನೆ ರಸ್ತೆಗೋಸ್ಕರ ಒಂದು ಕಿಲೋಮೀಟರ್‌ಗೆ ಎರಡೂವರೆ ಸಾವಿರ ರೂಪಾಯಿ ಹಂಚಿದ್ದೇವೆ. ಜೊತೆಗೆ ಮೂರರಷ್ಟು ಅಂದಾಜು ತಯಾರುಮಾಡಿ ೬೦ ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಮುಂದಿನ ವರ್ಷವೂ ಕೊಡುತ್ತೇವೆ. ಶುಗರ್ ಕಾರ್ಖಾನೆಗೆ ಹೋಗ ತಕ್ಕಂಥ ರಸ್ತೆಗಳು ಏನು ಇವೆ ಅವುಗಳ ಸ್ಪೆಷಲ್ ರಿಪೇರ್ಸ್‌ನ್ನು ಮಾತ್ರ ಅವರು ಮಾಡಿಕೊಳ್ಳಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ಮಲೆನಾಡು ಭಾಗದಲ್ಲಿ ಒಂದು ಪಂಚ ಕೆ. ಕೆ. ಎಂದು ಒಂದು ರಸ್ತೆ ಇದೆ ಅದನ್ನು ನೋಡಬೇಕು.

ಶ್ರೀ ಎಚ್. ಎಂ ಚೆನ್ನಬಸಪ್ಪ.—ಇಂತಹ ಸಣ್ಣಪುಟ್ಟ ಕೆಲಸಗಳನ್ನು ನಮ್ಮ ಎಕ್ಸಿಕ್ಯೂಟೀವ್ ಇಂಜೀನೀಯರ್‌ಗಳು ಮತ್ತು ಇತರೆ ಅಧಿಕಾರಿಗಳು ಕೂತುಕೊಂಡು ತೀರ್ಮಾನ ಮಾಡುತ್ತಾರೆ. ಈಗ ಕೆಟ್ಟಿರುವುದನ್ನು ಕೆಟ್ಟಿವೆ ಕೆಟ್ಟಿವೆ ಎಂದು ಹೇಳುವುದರಿಂದ ಏನು ಪ್ರಯೋಜನ ? ಅದನು ಸರಿಪಡಿಸುವುದು ಬುದ್ಧಿವಂತರ ಲಕ್ಷಣ. ಎಲ್ಲರೂ ನಮ್ಮ ಊರಿಗೆ ಟಾರ್, ನಮ್ಮ ಊರಿಗೆ ಟಾರ್ ಬೇಕು ಎಂದರೆ ಹೇಗೆ? ಅದಕ್ಕೆ ಸರಿಯಾದ ತಳಹದಿ ಇರಬೇಕು. ಅದು ಭದ್ರವಾಗಿ ಇಲ್ಲದೆ ಹೋದರೆ ದಿನ ಕ್ರಮೇಣದಲ್ಲಿ ಟ್ರಾಫಿಕ್ ಹೆಚ್ಚಾಯಿತು ಎಂದರೆ ಅದು ಎಲ್ಲಾ ಹಾಳಾಗಿ ಹೋಗುತ್ತದೆ. ಆದ್ದರಿಂದ ಯಾವುದಕ್ಕೂ ತಳಹದಿ ಬಂದೋಬಸ್ತಾಗಿ ಮಾಡಿದರೆ ೧೧–೧೨ ವರ್ಷಗಳು ಇರುತ್ತವೆ. ಯಾವ ಯಾವ ರಸ್ತೆಗಳಿಗೆ ೩ನೇ ಪ್ರಾಯಾರಿಟಿ ಮತ್ತು ೪ನೇ ಪ್ರಾಯಾರಿಟಿ ಕೊಟ್ಟಿದ್ದರಿಂದ ಈ ರೀತಿಯ ಕೆಲಸಗಳಾಗುತ್ತವೆ ಇಂತಹು ಗಳನ್ನು ಕ್ರಮಾ ಕ್ರಮೇಣ ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ. ಇವನ್ನೆಲ್ಲಾ ಯೋಚನೆಮಾಡಿ ಕೆಲಸಮಾಡಬೇಕು. ಒಟ್ಟು ೩೩ ಕೋಟಿ ೬೦ ಲಕ್ಷದ ೭ ಸಾವಿರ ರೂಪಾಯಿ. ರೋಡ್ಸ್ ಮತ್ತು ಬ್ರಿಡ್ಜಸ್‌ಗೆ ೨೧ ಕೋಟಿ ೬೦ ಲಕ್ಷ ಹೋಗುತ್ತದೆ. ಹಿಂದೆ ೧೮ ಕೋಟಿ ರೂಪಾಯಿ ಇದ್ದದ್ದು ಈಗ ಸುಮಾರು ೨೧ ಕೋಟಿರೂಪಾಯಿ ಹೆಚ್ಚು ಮಾಡಿದ್ದೇವೆ. ಈ ಸಾರಿ ನಾವು ಸ್ವಲ್ಪ ಕೈಯಾಡಿಸಿ ಕೆಲಸ ಮಾಡಬಹುದು. ಮತ್ತೆ ಸ್ಪೆಸಿಫಿಕ್ ರಸ್ತೆಗಳು ಇಂತಿಂಥ ಕಡೆಗಳಲ್ಲಿ ತೆಗೆದುಕೊಂಡಿಲ್ಲ ಮತ್ತು ಬಡ್ಜೆಟ್ಟಿನಲ್ಲಿ ಸೇರಿಸಿಲ್ಲ ಎಂದು ಮಾನ್ಯ ಬಂಗಾರಪ್ಪನವರು ಹೇಳಿದರು. ಅಂತಹವು ಯಾವುದಾದರೂ ಅವಶ್ಯಕವಾಗಿ

ಸೇತುವೆ ಮತ್ತು ರಸ್ತೆಗಳನ್ನು ಮಾಡಲೇ ಬೇಕಾದರೆ, ಜರೂರು ಮಾಡಬೇಕೆಂದರೆ ವಿಚಾರಮಾಡಿ ಲಂಪ್ ಸಮ್ ಗ್ರಾಂಟ್ ಏನು ಇದೆ ಅದರಿಂದ ಪ್ರಾರಂಭಮಾಡಬಹುದು. ಅದಕ್ಕೆ ನನ್ನದೇನು ಅಡಿಯಿಲ್ಲ. ಈ ದಿಶೆಯಲ್ಲಿ ಬೇಕಾದಷ್ಟು ಕೆಲಸಗಳು ಇರುತ್ತವೆ ಅಂತಾದ್ದರಲ್ಲಿ ಯಾವ ಜಿಲ್ಲೆಯಲ್ಲಿ ಯಾವ ಸೇತುವೆಗಳನ್ನು ಮಾಡಲೇಬೇಕು ಎಂದು ಕಂಡುಬರುತ್ತದೆ, ಆವಶ್ಯಕತೆ ಇರುವ ಪಕ್ಷದಲ್ಲಿ ಸೂಕ್ತ ಪರಿಹಾರ ಮಾಡಲೇಬೇಕಾಗುತ್ತದೆ. ಹಣಕಾಸಿನ ಲಿಮಿಟ್ ಎಷ್ಟಿದೆ ಅಷ್ಟರಲ್ಲಿ ಮಾಡೋಣ ಇಲ್ಲದೆ ಹೋದರೆ ಕಷ್ಟವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ರಸ್ತೆ ವಿಷಯದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಅದರಲ್ಲಿಯೂ ಹಳ್ಳಿಗಾಡುಗಳಲ್ಲಿ ಮಣ್ಣು ರಸ್ತೆ ಮಾಡುವುದಕ್ಕಿಂತ ಟಾರ್ ರಸ್ತೆಯನ್ನೇ ಮಾಡಬೇಕೆಂದು ಹೇಳುತ್ತೇನೆ. ಇದಕ್ಕೆ ವಿಶೇಷವಾಗಿ ಹಣ ಕೊಡಬೇಕು ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇವತ್ತು ತಮ್ಮ ಅವಗಾಹನೆಗಾಗಿ ತರುವುದು ಏನು ಎಂದರೆ ಆರ್. ಸಿ. ರಸ್ತೆಗಳನ್ನು ಮಲೆನಾಡು ಭಾಗಕ್ಕೆ ಕೊಟ್ಟೇ ಕೊಡುತ್ತೇವೆಂದು ಜೊತೆಗೆ ೨೫ ಪರ್ಸೆಂಟ್ ಹಣವನ್ನು ಜಾಸ್ತಿ ಕೊಡಬೇಕೆಂದು ಅರ್ಜಿ ಮಾಡಿದ್ದೇವೆ

ಶ್ರೀ ಟಿ. ಎಂ. ಮಂಜುನಾಥ.—ಅಷ್ಟೇ ಪ್ರಮಾಣದಲ್ಲಿ ಬ್ಯಯಲು ಸೀಮೆಗೆ ರಸ್ತೆಗಳನ್ನು ಜಾಸ್ತಿಮಾಡಿ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಈಗಿರತಕ್ಕಂಥ ರಸ್ತೆಗಳು ಏನು ಮಣ್ಣುರಸ್ತೆಗಳು ಇವೆ ಅವಕ್ಕೂ ಟಾರ್ ಹಾಕಲು ವ್ಯವಸ್ಥೆಮಾಡಬೇಕು.

ಶ್ರೀ ಎಚ್. ಎಂ. ಚೆನ್ನಬಸಪ್ಪ —ಸ್ಟೇಟ್‌ಫಂಡ್ ರೋಡುಗಳಿಗೆಲ್ಲಾ ಟಾರ್ ಹಾಕಬೇಕೆಂದು ಆಗಲೇ ಅರ್ಜಿ ಮಾಡಿದ್ದೇನೆ ಅದನ್ನು ಫೇಸ್ಡ್ ಪ್ರೋಗ್ರಾಮಿನಲ್ಲಿ ಹಣ ನೋಡಿ ಕೆಲಸಮಾಡಬೇಕಾಗುತ್ತದೆ. ಆದರೆ ಏನೂ ಕೆಲಸವಾಗಿಲ್ಲವೆಂದರೆ ಒಪ್ಪತಕ್ಕಮಾತಲ್ಲ. ಒಂದೊಂದು ಆರ್. ಸಿ. ಪ್ರೋಗ್ರಾಮಿನಲ್ಲಿ ಮಲೆನಾಡು ರಸ್ತೆಗಳಿಗೆ ೨೫ ಪರ್ಸೆಂಟ್ ಹೆಚ್ಚು ಕೊಡಬೇಕೆಂದು ಅರ್ಜಿ ಮಾಡಿದ್ದೇವೆ. ಇನ್ನು ಬಾರ್ಡರ್ ಏರಿಯಾ ನಲ್ಲಿರುವ ತಾಲ್ಲೂಕುಗಳಿಗೆ ೫೦ ಸಾವಿರ ರೂಪಾಯಿ ಹೆಚ್ಚಿಗೆ ಕೊಡಬೇಕೆಂದು ಮಾಡಿದ್ದೇವೆ. ತಾಲ್ಲೂಕು ಬೋರ್ಡುಗಳ ರಸ್ತೆಗಳು ಮತ್ತು ಸಿಡಿ ವರ್ಕ್ಸ್ ಏನು ಇತ್ತು ಅವನ್ನೆಲ್ಲಾ ವಜಾಮಾಡಿ ಅವನ್ನೆಲ್ಲಾ ನಾವೇ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ತಾಲ್ಲೂಕು ಬೋರ್ಡಿಗೆ ಏನು ಸಹಾಯಧನ ಕೊಡುತ್ತಿದ್ದೆವು ಅದನ್ನು ಕ್ಯಾನ್ಸಲ್‌ಮಾಡಿ ತಾಲ್ಲೂಕುಬೋರ್ಡಿನಲ್ಲಿದ್ದ ರೋಡುಗಳನ್ನು ನಾವೇ ವಹಿಸಿಕೊಂಡು ಏಸಿ ಮತ್ತು ಆರ್ ಸಿ ಪ್ರೋಗ್ರಾಮಿನಲ್ಲಿ ಈ ರಸ್ತೆಗಳನ್ನು ನೋಡಿಕೊಳ್ಳುತ್ತೇವೆ. ಇವನ್ನೆಲ್ಲಾ ಆಟೋಮ್ಯಾಟಿಕ್ ಆಗಿ ಮೇಯಿಂಟ್‌ನೆನ್ಸ್ ಮಾಡುತ್ತೇವೆ. ಇನ್‌ಕ್ರೀಸ್ ಆಫ್ ಮೇಯಿಂಟೆನೆನ್ಸ್ ಚಾರ್ಜಸ್ ಒಂದು ಕಿಲೋ ಮೀಟರಿಗೆ ಒಂದಕ್ಕೆರಡರಷ್ಟು ಮಾಡಿದ್ದೇವೆ.

ಇನ್ನೊಂದು ವಿಷಯ. ಎಲ್ಲೆಲ್ಲಿ ಆಯಕಟ್ಟು ರಸ್ತೆಗಳು ಇವೆಯೋ ಅಲ್ಲೆಲ್ಲಾ ಹಾಗೂ ನೀರಾವರಿ ಇರತಕ್ಕ ಜಾಗದಲ್ಲಿ ಒಂದುವೇಳೆ ರಸ್ತೆಗಳು ಇಲ್ಲದಿದ್ದರೆ ಹೊಸದಾಗಿ ರಸ್ತೆಗಳನ್ನು ಮಾಡುವುದಕ್ಕೆ ಹುಕುಂ ಮಾಡುವ ಯೋಚನೆ ಇಟ್ಟುಕೊಂಡಿದ್ದೇವೆ. ಅನೇಕ ದೊಡ್ಡದೊಡ್ಡ ಪ್ರಾಜೆಕ್ಟ್‌ಗಳಲ್ಲಿ ಮೇಂಟೆನೆನ್ಸ್ ಗ್ರಾಂಟ್ ಇಲ್ಲದೇ ಅನೇಕ ಕೆಲಸ ಕಾರ್ಯಗಳು ಆಗುತ್ತಾ ಇವೆ ಅದನ್ನು ಈಗ ಪಿ.ಡಬ್ಲ್ಯು.ಡಿ.ಗೆ ತೆಗೆದುಕೊಳ್ಳಬೇಕೆಂದು ಹುಕುಂ ಮಾಡಿದ್ದೇವೆ. ಎಲ್ಲೆಲ್ಲಿ ಅಚ್ಚುಕಟ್ಟುಗಳು ಇವೆಯೋ ಅಂತಹ ಸ್ಥಳಗಳಲ್ಲಿ ಹಳ್ಳಿಗಾಡುಗಳಲ್ಲಿ ಗೊಬ್ಬರ ಕೊಟ್ಟು ತೆಗೆದುಕೊಂಡು ಹೋಗುವುದಕ್ಕೆ ಅನುಕೂಲವಾಗುವಂತೆ ಒಳ್ಳೆಯ ರಸ್ತೆಗಳನ್ನು ಮಾಡುವುದು ಬಹಳ ಒಳ್ಳೆಯದು.

ಶ್ರೀ ಟಿ. ಎಂ. ಮಂಜುನಾಥ್.—ರಸ್ತೆಗಳು ಸಾಕಷ್ಟು ನಮ್ಮ ಕಡೆ ಆಗಿಲ್ಲ ಕಡಿಮೆ ಮಾಡುತ್ತಿದ್ದಾರೆ. ಅಲ್ಲಿ ರಸ್ತೆಗಳು ಆಗದೇ ಇರುವುದರಿಂದ ಅನೇಕರು ಹಣ ಕೊಡುವುದಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ನಿಮ್ಮಂತಹವರು ಕೊಡುವುದಿಲ್ಲ ನೀವು ಮನೆಗಳನ್ನು ಹೊಡೆಯಬಹುದು, ಜಮೀನು ತೆಗೆದುಕೊಳ್ಳಬೇಡಿ ಎಂಬುದಾಗಿ ಹೇಳುವವರು ನೀವು. ಹೈಬ್ರಿಡ್ಡ್ ಪ್ರೋಗ್ರಾಮಿನಲ್ಲಿ ಅದರಲ್ಲಿಯೂ ಬಹಳ ದೊಡ್ಡ ಪ್ರಮಾಣದಲ್ಲಿ ಆನ್ಲೈನ್ ಆಗಿ ಈ ಕೆಲಸ ಕಾರ್ಯಗಳನ್ನು ಮಾಡುವಾಗ ಎಕ್ಸ್‌ಟ್ರಾ ಮೇಂಟೆನೆನ್ಸ್ ಗ್ರಾಂಟ್ ಏನಿದೆಯೋ ಅದನ್ನು ಈಗಾಗಲೇ ಕೊಡಲಾಗಿದೆ. ಅದರಲ್ಲಿಯೂ ಮಲೆನಾಡಿನಲ್ಲಿ ಒಂದೊಂದು ಕಡೆಗೂ 4500 ರೂಪಾಯಿಗಳು ಮತ್ತು ಶೇಕಡ 25 ರಷ್ಟು ಆ ಗ್ರಾಂಟನ್ನು ಕೊಡಲಾಗಿದೆ. ಅಲ್ಲಿ ಮಳೆ ಹೆಚ್ಚಾಗಿ ಇರುವುದರಿಂದ

ಅಲ್ಲಿಗೆ ಯಾರು ಹೋದರೂ ಮೂರು ದಿವಸ ಇರುವುದಿಲ್ಲ ಈಗಾಗಲೇ ಸಾರ್ವಜನಿಕರ ತಿಳುವಳಿಕೆಗಾಗಿ ರೋಡ್ ಡೆವಲಪ್‌ಮೆಂಟ್ ಇನ್ ಕರ್ನಾಟಕ ಎಂಬುದಾಗಿ ಒಂದು ಪುಸ್ತಕವನ್ನು ಪ್ರಕಟಣೆ ಮಾಡಿದ್ದೇವೆ. ಹಿಂದಿನ ಕಾಲದಲ್ಲಿ ಏನೇನು ಡೆವಲಪ್‌ಮೆಂಟ್ ಆಗಿದೆ ಎಂಬುದನ್ನೂ ಸಹ ಕೊಟ್ಟಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಅದು ಕನ್ನಡದಲ್ಲಿದೆಯೋ ಅಥವಾ ಇಂಗ್ಲಿಷ್‌ನಲ್ಲಿದೆಯೋ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಮಗೆ ಇಂಗ್ಲಿಷ್ ತಿಳಿಯದೇ ಹೋದರೆ ಕನ್ನಡದಲ್ಲಿ ಅದನ್ನು ಮಾಡಿಸಿಕೊಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಕರ್ನಾಟಕದ ಜನರಿಗೆ ಅದು ಇಂಗ್ಲೀಷ್‌ನಲ್ಲಿದ್ದರೆ ಚೆನ್ನಾಗಿ ತಿಳಿಯುವುದಿಲ್ಲ, ಕನ್ನಡದಲ್ಲಿಯೇ ಇರಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕರ್ನಾಟಕದಲ್ಲಿ ಕನ್ನಡಿಗರು ಮತ್ತು ನಾನ್ ಕನ್ನಡಿಗರು ಎಂಬುದಾಗಿ ಭೇದಭಾವವೇನೂ ಇಲ್ಲ. ಕರ್ನಾಟಕದ ಬಗ್ಗೆ ಮಾನ್ಯ ಸದಸ್ಯರಿಗೆ ಎಷ್ಟು ಅಭಿಮಾನವಿದೆಯೋ ಅದಕ್ಕಿಂತಲೂ ಹೆಚ್ಚಿನ ಅಭಿಮಾನ ನಮಗೆ ಇದೆ. ಅದನ್ನು ಮಾಡುವುದಕ್ಕೆ ಏನೂ ಅಭ್ಯಂತರವಿಲ್ಲ. ಅದರಲ್ಲಿ ಯಾವ ಭಿನ್ನಾಭಿಪ್ರಾಯವೂ ಸಹ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಹಿರಿಯಾ ಪಟ್ಟಣದಲ್ಲಿ ಆಗದೇ ಇರುವ ರಸ್ತೆಗಳು ಮತ್ತು ಸೇತುವೆಗಳು ಎಷ್ಟು ಇವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ಎಲ್ಲಾ ರಸ್ತೆಗಳು ಆಗಿಹೋದರೆ ಇನ್ನು ನಮಗೆ ಅಲ್ಲಿಂದ ಅರ್ಜಿಗಳು ಬರುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಪ್ರತಿಯೊಂದು ತಾಲ್ಲೂಕಿನಲ್ಲಿ ಇಂತಹ ಸಮಸ್ಯೆಗಳು ಬಗೆಹರಿಯದೇ ಇದ್ದರೂ ಮೊಟ್ಟಮೊದಲು ಹಿರಿಯಾ ಪಟ್ಟಣದಲ್ಲಿ ಆಗಬೇಕು.

ಅಧ್ಯಕ್ಷರು.—ಅವರು ಒಪ್ಪಿಕೊಂಡಮೇಲೆ ಇನ್ನು ಏತಕ್ಕೆ ಪ್ರಶ್ನೆಹಾಕಬೇಕು? ಅದು ಸರಿಯಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದರಲ್ಲಿ ನಿಮ್ಮ ತಾಲ್ಲೂಕು, ನಮ್ಮ ತಾಲ್ಲೂಕು, ಆ ತಾಲ್ಲೂಕು, ಈ ತಾಲ್ಲೂಕು ಎಂಬ ಪ್ರಶ್ನೆಯೇ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಬೇರೆ ಬೇರೆ ತಾಲ್ಲೂಕಿನವರು ಪಿ. ಡಬ್ಲ್ಯೂ. ಡಿ. ಮಂತ್ರಿಯಾಗಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಬಾಗ್ಯ ನನಗೆ ಬಂತು.

ಅಧ್ಯಕ್ಷರು.—ದೇವರು ಕೊಟ್ಟ ಬಾಗ್ಯ ಅದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಮನೆಯಿನ್ನು ವಿಸ್ತಾರ ಮಾಡಬೇಕೆಂಬ ವಿಷಯದಲ್ಲಿ ಏನೋ ತಪ್ಪು ಅಭಿಪ್ರಾಯ ಇರುವುದು ಆಗಿದೆ. ಬಹಳ ಸಂತೋಷವಾಯಿತು ಮೊನ್ನೆ 19 ಪಾಯಿಂಟ್ಸ್ ಇರತಕ್ಕ ಒಂದು ಸ್ಟೇಟ್‌ಮೆಂಟನ್ನು ನಾನು ಮಾಡಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಒಂದನ್ನಾದರೂ ಜಾಸ್ತಿಮಾಡಿ. ಅವರಿಗೆ ಪ್ರಧಾನಿಯವರಿಗಿಂತ ಜಾಸ್ತಿ ಆಗಬಾರದೆಂದು ಇರಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರಧಾನಿಯವರು ಹಾಕಿರತಕ್ಕ 20 ಪಾಯಿಂಟ್‌ಗಳಲ್ಲಿ ಅದೂ ಒಂದು. ಇದರಲ್ಲಿ ತಪ್ಪು ಅಭಿಪ್ರಾಯ ಇರಬಾರದು. ನಿನ್ನೆ ಮತ್ತು ಮೊನ್ನೆ ದಿವಸದಿಂದ ರಸ್ತೆಗಳ ವಿಚಾರವನ್ನು ತೆಗೆದುಕೊಂಡಿದ್ದೇವೆ. ಸರ್ಕಾರದ ಜಮೀನಿನಲ್ಲಿ ಒತ್ತುವರಿ ಮಾಡಿರತಕ್ಕದ್ದನ್ನು ಬಿಡಿಸುವುದು. ನಾವು ಅವನ್ನು ಪಿ.ಡಬ್ಲ್ಯೂ.ಡಿ.ಗೆ ತೆಗೆದುಕೊಂಡಾಗ ನಮ್ಮ ರಸ್ತೆಗಳು ಹೋಗುವುದಿಲ್ಲ. ಎಲ್ಲೆಲ್ಲಿ ರೆವಿನ್ಯೂ ಮ್ಯಾಪಿನಲ್ಲಿ ರೋಡ್ಸ್ ಇವೆಯೋ ಎಷ್ಟು ಇನ್ನು ಆಗಿಲ್ಲದೇ ಇದೆಯೋ ಅಷ್ಟೊಂದು ಮಾತ್ರ ಬಿಡಿಸಿಕೊಳ್ಳುತ್ತೇವೆ ಅದರ ಮೇಲೆ ಮತ್ತೆ ಒಂದು ಇಂಚೂ ಸಹ ತೆಗೆದುಕೊಳ್ಳುವುದಿಲ್ಲ ಮೊದಲು 50 ಅಡಿಯೆಂದು ಫಿಕ್ಸ್ ಮಾಡುತ್ತೇವೆ. ಕೆಲವು ಕಡೆಗಳಲ್ಲಿ ಸರ್ಕಾರದ ಜಮೀನು 66-90-136 ಅಡಿಗಳವರೆಗೂ ಸರ್ಕಾರದ ಜಮೀನು ಇರುತ್ತದೆ. ಅಲ್ಲಿ

ಚೆನ್ನಾಗಿ ಮನೆಯನ್ನು ಕಟ್ಟಿಸಿಕೊಂಡಿರುತ್ತಾರೆ. ಒತ್ತುವರಿ ಮಾಡಿಕೊಂಡಿರುತ್ತಾರೆ. ಹಣವಿರುವವರು ಬಹುಭಾಗ ಆ ರೀತಿ ಮಾಡುತ್ತಾರೆ. ಬಡವರು ಆ ರೀತಿಯಾಗಿ ಕಟ್ಟುವುದಕ್ಕೆ ಆಗುವುದಿಲ್ಲ. ಅದು ಬಹಳ ಅಪರೂಪ ಅಂಥಾದ್ದನ್ನು ತೆಗೆದರೆ ನಿಮಗೆ ಮನೆ ಇರುವುದಿಲ್ಲ. ಕೊನೆಯ ಪಕ್ಷ 50 ಅಡಿಗಳವರೆಗೆ ಇರಬೇಕೆಂದು ತೀರ್ಮಾನ ಮಾಡಿ ಬಾಕಿದ್ದನ್ನು ಅವರಿಗೆ ಬಿಡುತ್ತೇನೆ. ಅಂದಮೇಲೆ 50 ಅಡಿಗಳವರೆಗೆ ಸೀಮಿತ ಮಾಡುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ್.—ಬಹಳ ಒಳ್ಳೆಯದು, ಕೆಲವು ಕಡೆಗಳಲ್ಲಿ ಸಾವಿರಾರು ಅಡಿಗಳಷ್ಟು ಸರ್ಕಾರದ ಜಮೀನು ಒತ್ತುವರಿಯಿಂದ ಡೀವಿಯೇಷನ್ ಮಾಡದೇ ಇರುವ ಕಡೆಗಳಲ್ಲಿ ಬಹಳ ತೊಂದರೆ ಇದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಿಪಟೂರಿನಲ್ಲಿ ಒಳ್ಳೆಯ ಶ್ರೀಮಂತರು ಇದ್ದಾರೆ ಬಹಳ ಚೆನ್ನಾಗಿ ಕಟ್ಟಿಕೊಂಡಿದ್ದಾರೆ.

ಶ್ರೀ ಟಿ. ಎಂ. ಮಂಜುನಾಥ್.—ಅಲ್ಲಿ ಬಡವರ ಮನೆಗಳು ಸಹ ಇರುತ್ತವೆ ಯಾರು ಅವರಿಗೆ ತಡೆಯುತ್ತಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಡವರ ವಿಷಯದಲ್ಲಿ ನಿಮಗೆ ಎಷ್ಟು ಅಭಿಮಾನ ಇರುತ್ತದೋ ಅದರ ನೂರ್ಮಡಿಯಷ್ಟು ನಮಗೆ ಇದೆ.

ಶ್ರೀ ಕೆ. ಎಚ್. ಹನುಮೇಗೌಡ.—ಬೆಂಗಳೂರಿನಲ್ಲಿ ಚಿಕ್ಕಪೇಟೆ ಕಡೆಯಲ್ಲಿ ಮಾನ್ಯ ಸಚಿವರು ಸ್ವಲ್ಪ ಓಡಾಡಿ ಬರಬೇಕು, ಅಲ್ಲಿ ಎಷ್ಟರಮಟ್ಟಿಗೆ ಸರ್ಕಾರದ ಜಮೀನು ಒತ್ತುವರಿಯಾಗಿದೆಯೆಂದು ಗೊತ್ತಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಚರ್ಚೆ ಮಾಡುತ್ತಾ ಇರುವುದು ಏನೆಂದರೆ ಎಲ್ಲೆಲ್ಲಿ ಸರ್ಕಾರದ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೋ ಅದನ್ನು ಬಿಡಿಸುವುದು ಮಾತ್ರ

ಶ್ರೀ ಕೋಣಂದೂರು ಲಿಂಗಪ್ಪ.—ಪೆರಿಯಾಪಟ್ಟಣದಲ್ಲಿ ಯಾವ ಮನೆಗಳೂ ಹೋಗುವುದಿಲ್ಲವೆಂದು ನನಗೆ ಕಾಣುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿಯೂ ಮನೆಗಳನ್ನು ಒಡೆಯುತ್ತಿದ್ದೇವೆ. ಹೋಗಿ ನೋಡಿ. ಹುಣಸೂರು, ಬಿಳಿಕೆರೆ, ಮುಂತಾದ ಕಡೆಗಳಲ್ಲಿಯೂ ಮನೆಗಳನ್ನು ಒಡೆಯುತ್ತಿದ್ದೇವೆ. ನೋಡಿಕೊಂಡು ಬನ್ನಿ. ಅಂದಮೇಲೆ ಈ ರೀತಿಯಾಗಿ ಅನುಚಿತವಾದ ಟೀಕೆಟಿಪ್ಪಣಿಗಳನ್ನು ಮಾಡಬಾರದು. ಈ ಒಂದು ಕಾನೂನಿಗೆ ಯಾವ ರೀತಿಯ ಎಗ್ಜೆಂಪ್ಷನ್ ಇಲ್ಲ. ಅದರಲ್ಲಿಯೂ ಎಲ್ಲೆಲ್ಲಿ ಕಡಿಮೆ ಇದೆಯೋ ಅಂತಹ ಕಡೆಗಳಲ್ಲಿ ಕೊನೆಯ ಪಕ್ಷ 30 ಅಡಿಗಳವರೆಗಾದರೂ ವಿನಾಯಿತಿ ಸೀಮಿತಮಾಡುತ್ತೇವೆ. 50 ಅಡಿಗಳವರೆಗೆ ಹಾಕುವುದಿಲ್ಲ ಮೊದಲು 66 ಅಡಿಗಳವರೆಗೆ ಇರುತ್ತಿತ್ತು. ಈಗ ಕೇವಲ 50 ಅಡಿಗಳೆಂದು ನಿಗಧಿಮಾಡಿದ್ದೇವೆ. ಅದರ ಬಗ್ಗೆ ಜನರಲ್ ಇನ್‌ಸ್ಟ್ರಕ್ಷನ್ಸ್ ಸಹ ಕೊಟ್ಟಿದ್ದೇವೆ. ಆ ಮೇಲೆ ಕೆಲವು ವಿಷಯಗಳು ನನ್ನ ಗಮನಕ್ಕೆ ಬಂದಮೇಲೆ ನಾನೇ ಖುದ್ದಾಗಿ ಹೋಗಿ ವಿಚಾರ ಮಾಡಿದ ಮೇಲೆ ಕೆಲವರು ಆ ಮಾರ್ಕ್‌ಗಳನ್ನು ತೋರಿಸಲಿಲ್ಲ. ಅಂತಹ ಜಮೀನುಗಳ ಬಗ್ಗೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಕೆಲವು ಕಡೆಗಳಲ್ಲಿ 30–40 ಅಡಿಗಳಷ್ಟಕ್ಕೇ ಸೀಮಿತಗೊಳಿಸಿ ಎಂಬುದಾಗಿ ಹುಕುಂ ಮಾಡಿದ್ದೇವೆ. ಅದರಲ್ಲಿ ನಿಮ್ಮ ಆಬ್‌ಜಕ್ಷನ್ಸ್ ಏನೆಂದು ಕೇಳಿದ್ದೇವೆ.

ಶ್ರೀ ಸಿ. ಬೈರೇಗೌಡ.—ಕೆಲವು ಕಡೆಗಳಲ್ಲಿ ಮೊದಲ ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗಿದ್ದರೆ, ನೋಟೀಸ್ ಕೊಟ್ಟಿರುವುದನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ದೊಡ್ಡ ಪಟ್ಟಣಗಳಲ್ಲಿ 50-60 ಅಡಿಗಳು ಎಂಬುದಾಗಿ ಒಂದು ಸೀಮಿತಮಾಡಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಷ್ಟು ಅಡಿ ಎಂದೇನೂ ಅಲ್ಲ ಅದು ಇಷ್ಟೇ ಅಡಿ ಇರಬೇಕೆಂದು ನಿರ್ಧಾರ ಮಾಡಿಲ್ಲ. ಮ್ಯಾಪ್‌ನಲ್ಲಿ ಎಷ್ಟು ಇದೆಯೋ ಅಷ್ಟಕ್ಕೆ ನಾವು ಬಾಧ್ಯರು. ಹೆಚ್ಚಿಗೆ ಬೇಕಾದರೆ ನಾವು ಅಕ್ವೈರ್ ಮಾಡಿಕೊಳ್ಳುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಈಗ ನ್ಯಾಷನಲ್ ಹೈವೆ ಕೆಲವು ಕಡೆಗಳಲ್ಲಿ ಹಾದುಹೋಗುತ್ತದೆ ಅಲ್ಲಿ ಅಷ್ಟೇ ಇರಬೇಕೆಂದು ಹೇಳುತ್ತೀರಿ. ಅಲ್ಲಿ ಇದಕ್ಕೆ ಮೊದಲು ಮನೆ ಕಟ್ಟಿರುವವರು ಅದು ನಮ್ಮ ಜಾಗ ಎಂಬುದಾಗಿ ಹೇಳುತ್ತಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮ್ಮ ಜಾಗ 30 ಅಡಿಗಳು ಎಂಬುದಾಗಿ ಅವರು ಹೇಳಬಹುದು. ಆದರೆ ನಮಗೆ 60 ಅಡಿಗಳು ಬೇಕೆಂದು ಆ ಜಾಗವನ್ನು ನಾವು ಅಕ್ವೈರು ಮಾಡಿಕೊಳ್ಳುತ್ತೇವೆ. ಅದಕ್ಕೆ ಅಡ್ಡಿ ಇಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಕೆಲವರು ಎಷ್ಟೋ ಖಾಸಗಿ ಜಮೀನೂ ಸಹ ಸರ್ಕಾರಕ್ಕೆ ಸೇರಿ ಹೋಗಿದೆ ಎಂಬುದಾಗಿ ಹೇಳಿದರು. ಆಗ ಏನು ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಗ ಹೀಗೆ ಮಾಡುವುದಿಲ್ಲ ನಮಗೆ ಬೇಕಾದರೆ ಹೈವೆ ಆಕ್ಟ್ ಪ್ರಕಾರ ಯಾವ್ಯಾವ ರಸ್ತೆ ಎಷ್ಟೆಷ್ಟು ಇರಬೇಕೆಂದು ನಿರ್ಧಾರ ಮಾಡುತ್ತಾರೋ ಅದರ ಪ್ರಕಾರ ನೋಟಿಫಿಕೇಷನ್ ಇಷ್ಯೂ ಮಾಡುತ್ತೇವೆ, ಜಮೀನು ಅಕ್ವೈರ್ ಮಾಡುತ್ತೇವೆ ಮತ್ತು ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುತ್ತೇವೆ. ಅಂದರೆ ಸರ್ಕಾರದ ಜಮೀನನ್ನು ಅಕ್ರಮಣ ಮಾಡಿಕೊಂಡಿದ್ದರೆ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂಬುದು ಅದರ ಅಭಿಪ್ರಾಯ.

ಶ್ರೀ ಎಸ್. ಬಂಗಾರಪ್ಪ.—ಆಗ ರಸ್ತೆಗಳನ್ನು ಅಗಲ ಮಾಡುವ ವಿಷಯದಲ್ಲಿ ಮನೆ ಒಡೆಯುವ ಮಾತು ಬರುತ್ತದೆ. ಇದರಲ್ಲಿ ಒಂದು ವಿಷಯವನ್ನು ಗಮನಿಸಬೇಕು. ಎಲ್ಲೆಲ್ಲಿ ಡೀವಿಯೇಷನ್ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೋ ಆ ಡೀವಿಯೇಷನ್ ಅವರಿಗೇ ಮಾಡಿಕೊಟ್ಟರೆ ಆಗ ನಾವು ಒಪ್ಪುತ್ತೇವೆಂದು ಹೇಳುವುದು. ಅದರ ಬಗ್ಗೆ ನೀವು ಹೇಳಬೇಕು. ಅವನ್ನು ಇವರಿಗೆ ಬಿಡಬೇಡಿ.

1–00 P.M.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಅದರ ಬಗ್ಗೆ ಹೇಳುತ್ತೇನೆ ಇವತ್ತು ನಾವು ಡೀವಿಯೇಷನ್ ರಸ್ತೆಗಳನ್ನು ಮಾಡಿದರೂ ಕೂಡ, ಈ ಹೆವಿ ಟ್ರಾಫಿಕ್ ಏನಿದೆ, ಲಾರಿಗಳು, ಬಸ್ಸುಗಳು ಮುಂತಾದ ವಾಹನಗಳ ಡ್ರೈವರ್‌ಗಳು ಊರ ಆಚೆ ಕಡೆಯಿಂದ ಹೋಗುವುದಕ್ಕೆ ಇಷ್ಟಪಡುವುದಿಲ್ಲ ಏತಕ್ಕೆಂದರೆ ಅವರು ಊಟಮಾಡಬೇಕಾಗುತ್ತದೆ, ಕಾಫಿ ಕುಡಿಯಬೇಕಾಗುತ್ತದೆ. ಊರ ಹೊರಗಡೆಯಾದರೂ ಹೋಟೆಲ್‌ಗಳು ಇರುವುದಿಲ್ಲ. ಇದರಿಂದ ಅವರಿಗೆ ತೊಂದರೆಯಾಗುತ್ತದೆ. ಆದುದರಿಂದ ಊರ ಒಳಗಡೆಯಿಂದಲೇ ಹೋಗುವುದಕ್ಕೆ ಬಯಸುತ್ತಾರೆ. ಡೀವಿಯೇಷನ್ ರಸ್ತೆಗಳನ್ನು ಒಂದೇ ಅವಧಿಯಲ್ಲಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಇದಕ್ಕೆ ಸಂಬಂಧಪಟ್ಟಂತೆ ಒಂದು ಸ್ಪಷ್ಟೀಕರಣವನ್ನು ತಮ್ಮಿಂದ ಕೇಳಬೇಕಾಗಿದೆ. ಈಗ 50–60 ವರ್ಷಗಳಿಂದ ಅವರು ಅದೇ ಜಾಗದಲ್ಲಿ ಇದ್ದುಕೊಂಡು ಬರುವುದರಿಂದ ತಾವು ಆ ಜಾಗವನ್ನು ತೆಗೆದುಕೊಳ್ಳುತ್ತಿರುವುದು ಅಡವರ್ಸ್ ಪೊಸೆಷನ್ ಆಗುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಏನೂ ನಮಗೆ ಜಾಗ ಕೊಡುವುದಿಲ್ಲ. 15 ವರ್ಷಗಳಿಂದ ಇರಲಿ 50 ವರ್ಷಗಳಿಂದಲೇ ಇರಲಿ ಕಾನೂನು ಪ್ರಕಾರ ಅದು ನಮ್ಮದು ಎನ್ನುವ ಬಗ್ಗೆ ಕಾಗದ ಪತ್ರಗಳು ಇರುತ್ತವೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅದನು ನಿರ್ಧಾರ ಮಾಡುವವರು ಯಾರು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಮ್ಮ ಹತ್ತಿರ ಆರ್ಡರ್ ಕಾಪಿ ಇದ್ದರೆ ತಂದುಕೊಡಿ, ಕಾನೂನು ಪ್ರಕಾರ ಆ ಜಾಗ ನಮ್ಮದು ಆಗಿದ್ದ ಪಕ್ಷದಲ್ಲಿ ನಾವು ಯಾರನ್ನೂ ಕೂಡ ಕೇಳಬೇಕಾದ್ದು ಏನೂ ಇಲ್ಲ.

SRI H. T. KRISHNAPPA.—Who should decide that issue ?

SRI H. M. CHANNABASAPPA.—Appropriate authorities will decide. I cannot go into the details. If the land is belonging to you I don't want it.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅದನ್ನು ತೀರ್ಮಾನ ಮಾಡುವವರು ಯಾರು ?

SRI H. M. CHANNABASAPPA.—To the satisfaction of the Deputy Commissioner you have to convince him if that is belonging to you legally and morally.

SRI H. T. KRISHNAPPA.—Will they give notice ? Why do you make a reverse one ?

SRI H. M. CHANNABASAPPA.—All land belonging to others is belonging to the Government.

ಶ್ರೀ ಟಿ. ಎಂ. ಮಂಜುನಾಥ್.—ಮಾನವೀಯತೆಯ ದೃಷ್ಟಿಯಿಂದ ನೋಡಬೇಕು ಸ್ವಾಮಿ.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ ಹಿಂದೆ 15-20 ಅಡಿ ಜಾಗ ಬಿಟ್ಟು ಕಟ್ಟಬೇಕೆಂದು ಹೇಳಿದ್ದರಿಂದ ಕಟ್ಟಡಗಳನ್ನು ಕಟ್ಟಿದ್ದಾರೆ. ಆದರೆ ತಾವು ಈಗ 60 ಅಡಿ ಜಾಗ ಬೇಕೆಂದು ಅಲ್ಲ ಕಟ್ಟಡಗಳನ್ನು ಒಡೆಯುವುದಕ್ಕೆ ಹೋಗುತ್ತಿದ್ದೀರಿ.

SRI H. M. CHANNABASAPPA.—I have been making it very clearly. I am not here to widen. I am only telling the cases of encroachment in Government lands.

ಶ್ರೀ ಎಸ್. ಎಂ. ಶೀರಾಳ್ನಳಿ ಚಂದ್ರಶೇಖರ್.—ತಾವು ವಿಧಿನಿಯಮಗಳ ಪ್ರಕಾರ ಕೆಲಸ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಆದರೆ ತಾವು ಹೇಳುತ್ತಿರುವುದು ಒಂದು ಅಲ್ಲಿ ಆಗುತ್ತಿರುವುದು ಒಂದು. ಆದುದರಿಂದ ಅದರ ಬಗ್ಗೆ ತಾವು ಕೂಡಲೇ ಕ್ರಮ ತೆಗೆದುಕೊಳ್ಳಬೇಕು.

SRI H. M. CHANNABASAPPA.—I am sorry, you take back that word Government does not do what it does not mean.

ಶ್ರೀ ಎಸ್.ಎಂ, ಶೀರಾಳ್ನಳಿ ಚಂದ್ರಶೇಖರ್.—ತಾವು ಹೇಳುವ ಹಾಗೆ ಆಗುತ್ತಿಲ್ಲವಲ್ಲಾ.

ಶ್ರೀ ಎಚ್.ಎಂ. ಚನ್ನಬಸಪ್ಪ.—ಅಂಥ ನಿರ್ದಿಷ್ಟ ಕೇಸ್‌ಗಳಿದ್ದರೆ ತೆಗೆದುಕೊಂಡು ಬನ್ನಿ ನಾನು ನೋಡುತ್ತೇನೆ. If there are any specific cases I will look into the matter. You bring those particular cases to me and I will examine them.

ಶ್ರೀ ಎಸ್.ಎಂ. ಶೀರಾಳ್ನಳಿ ಚಂದ್ರಶೇಖರ್.—ಶಿವಮೊಗ್ಗದ ತೀರ್ಥಹಳ್ಳಿಯಲ್ಲಿ ಆ ರೀತಿಯಾಗಿದೆ.

ಶ್ರೀ ಎಚ್.ಎಂ. ಚನ್ನಬಸಪ್ಪ.—ನಾನು ಆಗಲೇ ಸ್ಪೆಸಿಫಿಕ್ ಕೇಸ್ ಇದ್ದರೆ ತೆಗೆದುಕೊಂಡು ಬಂದು ಹೇಳಿ ಅದನ್ನು ನಾನು ಎಕ್ಸಾಮಿನ್ ಮಾಡಿಸುತ್ತೇನೆಂದು ಹೇಳಿದೆ.

ಶ್ರೀ ಎಸ್.ಎಂ. ಶೀರಾಳ್ನಳಿ ಚಂದ್ರಶೇಖರ್.—ಸ್ವಾಮಿ. ನಾನು ಸ್ಪಷ್ಟವಾಗಿ ತೀರ್ಥಹಳ್ಳಿಯಲ್ಲಿ ಆ ರೀತಿಯಾಗಿದೆ ಎಂದು ಹೇಳುತ್ತಿದ್ದೇನೆ. ನಾವು ಇನ್ನೂ ಯಂಗ್ ಸ್ಟರ್ಸ್ ನಾವು ಇನ್ನೂ ರಾಜಕೀಯದಲ್ಲಿ ಬಹಳ ವರ್ಷಗಳ ಇರತಕ್ಕಂಥವರು ಇಷ್ಟು ದಿವಸ ಒಳ್ಳೆಯ ಕೆಲಸ ಮಾಡಿದ್ದೆಲ್ಲಾ ಹೋಗಿ ಕೆಟ್ಟ ಹೆಸರು ಬರುತ್ತಿದೆ. ಎಲೆಕ್ಷನ್ ಕೂಡ ಹತ್ತಿರ ಬರುತ್ತಿದೆ. ಇಂಥ ಸಮಯದಲ್ಲ ನಮಗೆ ಕೆಟ್ಟ ಹೆಸರು ಬರುವ ಹಾಗೆ ಮಾಡಬೇಡಿ.

ಶ್ರೀ ಎಚ್.ಎಂ. ಚನ್ನಬಸಪ್ಪ.—ಇಷ್ಟು ವರ್ಷಗಳ ಕಾಲ ಮಾಡಿದಂಥ ಕೆಲಸಗಳಿಗಿಂತ ಇದು ಉತ್ತಮವಾದಂಥ ಕೆಲಸವಿದು. ನಾನು ಸಹ ಹೋಗಿ ತೀರ್ಥಹಳ್ಳಿಯಲ್ಲಿ ನೋಡಿದ್ದೇನೆ. ಕಾನೂನು ಪ್ರಕಾರ ಯಾರ ಯಾರ ಮನೆ ಹೋಗಬೇಕೋ ಅವರ ಮನೆಗಳೆಲ್ಲಾ ಹೋಗಲೇ ಬೇಕಾಗುತ್ತದೆ.

ಶ್ರೀ ಎಚ್.ಟಿ. ಕೃಷ್ಣಪ್ಪ.—ಸ್ವಾಮಿ, ತಾವು ಈಗ ತಾನೇ ಕಾನೂನು ಪ್ರಕಾರ ಯಾರ ಯಾರ ಮನೆಗಳು ಹೋಗಬೇಕೋ ಅವುಗಳೆಲ್ಲಾ ಹೋಗುತ್ತವೆ ಎಂದು ಹೇಳಿದಿರಿ. ಹಾಗಾದರೆ ಕಾನೂನು ಪ್ರಕಾರ ಬಾಕಿ ಕೆಲವರ ಮನೆಗಳನ್ನು ಮಾತ್ರ ಒಡೆಯದಿರುವುದಕ್ಕೆ ಕಾರಣವೇನು? ಈ ರೀತಿಯ ತಾರತಮ್ಯವೇತಕ್ಕೆ?

ಶ್ರೀ ಎಚ್.ಎಂ. ಚನ್ನಬಸಪ್ಪ.—ನಾನು ಆಗಲೇ ನನ್ನ ಸ್ಟೇಟ್‌ಮೆಂಟ್‌ನಲ್ಲಿ ಇದರ ಬಗ್ಗೆ ಹೇಳಿದ್ದೇನೆ 66,90 ಫೀಟ್ ಇದ್ದರೂ ಕೂಡ 50 ಫೀಟ್‌ಗೇ ಸೀಮಿತ ಮಾಡಿದ್ದೇನೆ ಎಂದು ಆಗಲೇ ಹೇಳಿದ್ದೇನೆ.

ಶ್ರೀ ಎಚ್.ಟಿ. ಕೃಷ್ಣಪ್ಪ.—ಎರಡು ಅಡಿ ಹೆಚ್ಚು ಕಡಿಮೆ ಇದ್ದರೂ ಕೂಡ ಅನಾಹುತವಾಗುತ್ತಿದೆ. ಇದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಎಚ್.ಎಂ. ಚನ್ನಬಸಪ್ಪ.—ಅಂಥ ಸಂದರ್ಭಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಅವರ ಒಂದು ಡಿಸ್ಕ್ರಿಷನ್‌ಗೆ ಬಿಟ್ಟಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ರಸ್ತೆ ಅಗಲ ಮಾಡಬೇಕು ಎನ್ನತಕ್ಕಂಥ ಉದ್ದೇಶದಿಂದ ಕಟ್ಟಡಗಳನ್ನು ಒಡೆಯುತ್ತಿರುವುದು ಎಂದು ಹೇಳಿದ್ದಿರಿ. They have un-authorisedly put these constructions on the land belonging to the Government.

ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಆದರೆ ಇವತ್ತು ನೀವು ರಸ್ತೆ ಅಗಲ ಮಾಡುವುದಕೋಸ್ಕರವಾಗಿ ಒಡೆಯುತ್ತಿದ್ದೀರಿ, ಆದಕ್ಕೆ ಈ ಕಾರಣವನ್ನು ಹೇಳುತ್ತಿದ್ದೀರಿ. ಆದರೆ ಇವತ್ತು ನಿಮ್ಮ ಉದ್ದೇಶವೇನು ಎನ್‌ಕ್ರೋಚ್ ಮಾಡಿರತಕ್ಕಂಥ ಜಾಗವನ್ನು ತೆಗೆದುಕೊಳ್ಳಬೇಕು ಎನ್ನುವುದೇ ಆಗಿದೆ.

ಶ್ರೀ ಎಚ್.ಎಂ. ಚನ್ನಬಸಪ್ಪ.—ನಾನು ಆಗಲೇ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ಸರ್ಕಾರದ ಜಮೀನನ್ನು ದುರಾಕ್ರಮಣ ಮಾಡಿರತಕ್ಕಂಥವರಿಂದ ರಸ್ತೆ ಅಗಲ ಮಾಡುವುದೇ ನಮ್ಮ ಉದ್ದೇಶವಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಚೈನಾದವರು ನಮ್ಮ ದೇಶದ 30 ಸಾವಿರ ಚದರ ಮೈಲಿ ಜಾಗವನ್ನು ಅತಿಕ್ರಮ ಮಾಡಿಕೊಂಡಿದ್ದಾರೆ ಅದನ್ನು ಬಿಡಿಸಿಕೊಳ್ಳುವುದಕ್ಕೆ ನಿಮಗೆ ಆಗಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ ಇದು ಬಹಳ ಮುಖ್ಯವಾದ ವಿಷಯ. ಇವತ್ತು ಎಲ್ಲೆಲ್ಲಿ ಎನ್‌ಕ್ರೋಚ್‌ಮೆಂಟ್ ಮಾಡಲಾಗಿದೆ ಅಲ್ಲೆಲ್ಲಾ ಪಿ.ಡಬ್ಲ್ಯು.ಡಿ. ಯವರು ತೆಗೆದು ಕೊಳ್ಳುತ್ತಿದ್ದಾರೆಯೆ?

ಶ್ರೀ ಎಚ್.ಎಂ. ಚನ್ನಬಸಪ್ಪ.—ರಾಜ್ಯದಲ್ಲಿ ಎಲ್ಲೇ ಅತಿಕ್ರಮ ಮಾಡಿರಲಿ, ಈಗ ಕೆರೆ ಅಂಗಳದಲ್ಲಿ ಅತಿಕ್ರಮಣ ಮಾಡಿಕೊಂಡಿರಲಿ ಅದನ್ನು ಸಹ ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದೇ ಸರ್ಕಾರದ ಉದ್ದೇಶ.

ಶ್ರೀ ಎಸ್. ಬಂಗಾರಪ್ಪ.—ಕೆರೆ ಅಂಗಳದಲ್ಲಿ ಅತಿಕ್ರಮಣ ಮಾಡಿಕೊಂಡಿದ್ದರೆ ಅದನ್ನು ತೆಗೆದುಕೊಳ್ಳಿ. ಆದರೆ ಇವತ್ತು ರಸ್ತೆಯ ಪಕ್ಕದಲ್ಲಿ ಎನ್‌ಕ್ರೋಚ್‌ಮೆಂಟ್ ಮಾಡಿರತಕ್ಕಂಥದ್ದರ ಬಗ್ಗೆ ತಾವು ಕ್ರಮ ತೆಗೆದುಕೊಂಡಿರತಕ್ಕಂಥದ್ದು ಸರಿಯಲ್ಲ.

ಶ್ರೀ ಎಚ್.ಎಂ. ಚನ್ನಬಸಪ್ಪ.—ಇಷ್ಟು ರಸ್ತೆಗೆ ಇಷ್ಟು ಅಗಲ ಇರಬೇಕೆಂದು ನಿಯಮವಿದೆ. ಅವರು ರಸ್ತೆಯ ಪಕ್ಕದಲ್ಲಿ ಅತಿಕ್ರಮಣ ಮಾಡಿಕೊಂಡಿದ್ದರೆ ಅದು ಸಾರ್ವಜನಿಕ ಹಿತದೃಷ್ಟಿಯಿಂದ ತೆಗೆದು ಕೊಳ್ಳಬೇಕು ಎಂದು ಅಭಿಪ್ರಾಯ ಪಟ್ಟಾಗ ತೆಗೆದುಕೊಳ್ಳಲೇ ಬೇಕಾಗುತ್ತದೆ. Now that is so far as encroachment is concerned if there is any further point.

ಶ್ರೀ ಟಿ.ಎಂ. ಮಂಜುನಾಥ್.—ಟೌನ್ ಪ್ಲಾನ್ ನಂತೆ ಇಷ್ಟು ಜಾಗ ಬಿಟ್ಟು ಮನೆಗಳನ್ನು ಕಟ್ಟಬಹುದೆಂದು ಮುನಿಸಿಪಾಲಿಟಿಯವರು ಲೈಸನ್ಸ್ ಕೊಟ್ಟಿರುತ್ತಾರೆ. ಅವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಡಗಳನ್ನು ಕಟ್ಟಿರುತ್ತಾರೆ. ಅದು ಕೂಡ ಈಗ ಎನ್‌ಕ್ರೋಚ್‌ಮೆಂಟ್ ಆಗುತ್ತದೆಯೋ?

SRI H.M. CHANNABASAPPA.—The Local bodies cannot transfer the Government lands. I know the case of Tiptur Municipality much better than the Hon'bel member. The local bodies cannot transfer the ownership of the Government land to anybody. I have made this point clear in my statement.

ಶ್ರೀ ಟಿ.ಎಂ. ಮಂಜುನಾಥ್ —ಮುಖ್ಯವಾಗಿ ಲೋಕಲ್ ಬಾಡಿಗಳವರು ಟೌನ್ ಪ್ಲಾನಿಂಗ್ ಪ್ರಕಾರ ಇಷ್ಟು ಜಾಗವನ್ನು ಬಿಟ್ಟು ಕಟ್ಟಡವನ್ನು ಕಟ್ಟಬೇಕೆಂದು ಲೈಸೆನ್ಸ್ ಕೊಟ್ಟಿದ್ದಾರೆ. ಆ ಪ್ರಕಾರ ಜನಗಳು ಕಟ್ಟಡಗಳನ್ನು ಕಟ್ಟಿಕೊಂಡು ಓನರ್‌ಷಿಪ್ ಪಡೆದುಕೊಂಡಿದ್ದಾರೆ, ಈಗ ಅದನ್ನು ಒಡೆದು ಹಾಕುವುದಾದರೆ ಅವರ ಗತಿ ಏನು?

ಶ್ರೀ ಎಚ್.ಎಂ. ಚನ್ನಬಸಪ್ಪ.—ಈಗ ನಮ್ಮ ಸ್ನೇಹಿತರಾದ ಡಿ.ಕೆ. ನಾಯ್ಕರ್ ಅವರು ನಮ್ಮ ಜಮೀನನ್ನು ಬೇರೆಯವರಿಗೆ ಬರೆದುಕೊಟ್ಟರೆ ಅದೂ ಅವರಿಗೆ ಓನರ್‌ಷಿಪ್ ಬರುತ್ತದೆಯೇ?

ಶ್ರೀ ಟಿ.ಎಂ. ಮಂಜನಾಥ್.—ನನ್ನ ಮನೆ ಹಾಳಾದರೆ ಹೋಗಲಿ. ಮನೆ ಕಟ್ಟಿಕೊಂಡಿರುವ ಬಡವರ ಗತಿ ಏನಾಗಬೇಕು?

SRI H.M. CHANNABASAPPA.—The responsibility to prove that the lands belong to him should be proved with proper records. If he does it, we will certainly appreciate it.

ಶ್ರೀ ಎಚ್.ಟಿ. ಕೃಷ್ಣಪ್ಪ.—ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೆ. ತಾವು ಹೇಳಿದ ವಾದವನ್ನು ನಾನು ಒಪ್ಪುತ್ತೇನೆ. ಮುನಿಸಿಪಾಲಟಿಯವರು ಹಕ್ಕನ್ನು ಬೇರೆಯವರಿಗೆ ಬದಲಾಯಿಸುವುದಕ್ಕೆ ಆಗುವುದಿಲ್ಲ. ಮಾಲಿಕತ್ವವನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ನಾನು ಅದನ್ನು ಒಪ್ಪುತ್ತೇನೆ. ಇಲ್ಲಿ ಪ್ರಶ್ನೆ ಏನೆಂದರೆ ೪೦-೫೦ ವರ್ಷಗಳಿಂದ ಕೆಲವರು ಮನೆಗಳನ್ನು ಕಟ್ಟಿಕೊಂಡು ವಾಸವಾಗಿದ್ದಾರೆ ಆದ್ದರಿಂದ ಅವರಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಸ್ವಲ್ಪ ಸರಳವಾಗಿ ಈ ಕಾನೂನು ಮಾಡಿದರೆ ಒಳ್ಳೆಯದು

ಶ್ರೀ ಎಚ್.ಎಂ. ಚನ್ನಬಸಪ್ಪ.—ಸರಳ ಮಾಡುವುದು ಎಂದರೆ ನನಗೆ ಅರ್ಥವಾಗಲಿಲ್ಲ.

ಶ್ರೀ ಎಚ್.ಟಿ. ಕೃಷ್ಣಪ್ಪ.—ಈಗ ಯಾರಾದರೂ ಸರ್ಕಾರಿ ಜಮೀನನ್ನು ಬಗರ್ ಹುಕುಂ ಮಾಡಿಕೊಂಡು ಬಂದಿದ್ದರೆ ಅಂಥವರಿಗೆ ನೋಟಿಸ್ ಕೊಡಬೇಕು. ನಿಮ್ಮ ಪರವಾಗಿ ಯಾವುದಾದರೂ ದಾಖಲೆಗಳು ಇದ್ದರೆ ತೆಗೆದುಕೊಂಡು ಬನ್ನಿ ಎಂದು ಹೇಳಬೇಕು. ಅದೇ ರೀತಿ ಇದನ್ನೂ ಮಾಡಬೇಕು.

ಶ್ರೀ ಎಚ್.ಎಂ. ಚನ್ನಬಸಪ್ಪ.—ಅದೇ ರೀತಿ ಇದನ್ನು ಮಾಡಿದೆ.

ಶ್ರೀ ಎಚ್.ಟಿ. ಕೃಷ್ಣಪ್ಪ.—ಮಂತ್ರಿಗಳು ಮನೆಮುರುಕು ಕೆಲಸ ಮಾಡಿದರು ಎನ್ನುವ ಕಳಂಕ ನಿಮಗೆ ಬರಬಾರದು.

ಶ್ರೀ ಎಚ್.ಎಂ. ಚನ್ನಬಸಪ್ಪ.—ತಾಲ್ಲೂಕು, ಜಿಲ್ಲೆ ಊರು ಚೆನ್ನಾಗಿ ಆದಮೇಲೆ ಜನಗಳು ಬಂದು ಒಳ್ಳೆಯ ಕೆಲಸ ಮಾಡಿದಿರಿ ಎಂದು ಅವರೇ ಹೇಳುತ್ತಾರೆ.

ಶ್ರೀ ಎಚ್.ಟಿ. ಕೃಷ್ಣಪ್ಪ.—ಈ ಹೆದ್ದಾರಿಗಳ ಒತ್ತುವರಿ ಜಮೀನನ್ನು ಬಿಡಿಸುವ ಕಾರ್ಯಕ್ಕೆ ಸಂಬಂಧಪಟ್ಟ ಕೆಲಸವನ್ನು ನಿರ್ವಹಿಸುವ ಜವಾಬ್ದಾರಿಯನ್ನು ಡೆಪ್ಯುಟಿ ಕಮಿಷನರಿಗೆ ಕೊಟ್ಟಿದ್ದೀರಿ, ಇದನ್ನು ಲೋಕಲ್ ಆಫೀಸರುಗಳಿಗೆ ಏತಕ್ಕೆ ಕೊಡಬಾರದು?

SRI H. M. CHANNABASAPPA.—I cannot entrust this responsibility of deciding this matter to anybody who is lower than the rank of the Deputy Commissioner. He will make such inquisies as he deemsfit.

ಶ್ರೀ ಕೋಣಂದೂರು ಲಿಂಗಪ್ಪ.—ಒತ್ತುವರಿ ಬಿಡಿಸುವ ಕ್ರಮದಿಂದ ನಿಮ್ಮ ಮನೆ ಹೋಗುತ್ತೆ.

ಶ್ರೀ ಎಚ್.ಎಂ ಚನ್ನಬಸಪ್ಪ.—ಸರ್ಕಾರಿ ಜಮೀನಿನ ದುರಾಕ್ರಮಣದ ಕೆಲಸಕ್ಕೆ ಹೋಗುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಹಳ್ಳಿಗಳಲ್ಲಿ ಏನಾಗುತ್ತದೆ ಎಂದರೆ ಸರ್ವೆ ಮ್ಯಾಪ್ ನೋಡದೆ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಹೋಗುತ್ತಾರೆ. ಅಂಥಾ ಸಂದರ್ಭದಲ್ಲಿ ನಿಜವಾಗಿ ಮಾಲೀಕತ್ವವನ್ನು ಹೊಂದಿರುವವರಿಗೂ ತೊಂದರೆಯಾಗುತ್ತದೆ.

SRI H. M. CHANNABASAPPA.—We are not going to touch any place where road is not shown in the village map.

ಶ್ರೀ ಎಚ್. ಟಿ. ಕೃಷ್ಣಪ್ಪ.—ಸ್ಥಳೀಯ ಸಂಸ್ಥೆಗಳವರು ಕಟ್ಟಡವನ್ನು ಕಟ್ಟುವುದಕ್ಕೆ ಲೈಸೆನ್ಸ್ ಕೊಟ್ಟಿರುವುದರಿಂದ ಅವರನ್ನು ಈ ಬಗ್ಗೆ ಕನ್ಸಲ್ಟ್ ಮಾಡುವಂತೆ ಮಾಡುತ್ತೀರಾ?

SRI H M. CHANNABASAPPA.—If there is any fresh point, you can discuss with me. I will certainly give you a hearing. I cannot give this power to any officer lower than the Deputy Commissioner.

SRI H. T. KRISHNAPPA.—It is a great insult to the local bodies if you do not entrust this responsibility to them.

SRI H. M. CHANNABASAPPA.—If any Municipality has given a licence without proper anuthority, it is wrong.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರದ ಜಮೀನಿನಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಒಂದುವೇಳೆ ಮುನಿಸಿಪಾಲಿಟಿಯವರು ಲೈಸೆನ್ಸ್ ಕೊಟ್ಟಿದ್ದರೆ ರಾಜ್ಯಾದ್ಯಂತ ಎಲ್ಲಾ ಮುನಿಸಿಪಾಲಿಟಿಗಳ ಮೇಲೂ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ಥಳೀಯ ಸಂಸ್ಥೆಗಳು ಕಾನೂನಿಗೆ ವಿರುದ್ಧವಾಗಿ ಯಾವ ಕಾರ್ಯಕ್ರಮತೆಗೆದುಕೊಂಡಿದ್ದರೂ ಅದು ಸರ್ಕಾರದ ಗಮನಕ್ಕೆ ಬಂದರೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಬಿ. ಬೈರಪ್ಪಾಜಿ.—ಒಂದು ವೇಳೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಯ ಕಟ್ಟಡ ಇದ್ದರೆ ಅದನ್ನು ಏನು ಮಾಡುತ್ತೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನೆಲ್ಲಾ ನನ್ನ ಸ್ಟೇಟ್‌ಮೆಂಟಿನಲ್ಲಿ ಹೇಳಿದ್ದೇನೆ. ಈಗ ರಸ್ತೆಗಳ ವಿಷಯ, ಎನ್‌ಕ್ರೋಚ್‌ಮೆಂಟ್ ವಿಷಯ, ಸೇತುವೆಗಳ ವಿಷಯ ಎಲ್ಲಾ ಮುಂಗಿಯಿಂತ ಕುಡಿಯುವ ನೀರಿನ ವಿಷಯದಲ್ಲಿ ಏನೂ ಮಾಡಿಲ್ಲಾ ಎಂದೂ ಮಾನ್ಯ ಸದಸ್ಯರು ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಆ ಇಲಾಖೆಯನ್ನು ಮುಚ್ಚಿಬಿಡಿ. ನೂರಕ್ಕೆ ೧೦ ಗ್ರಾಮಗಳಲ್ಲಿ ಸರಿಯಾಗಿ ನೀರನ್ನು ಕುಡಿಯುತ್ತಾರೆ ಎಂದು ಅಂಕಿ ಅಂಶ ತೋರಿಸಿಬಿಡಿ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಅಂಕಿ ಅಂಶ ತೋರಿಸಿದರೆ ನೀವು ರಾಜಿನಾಮೆ ಕೊಡುತ್ತೀರಾ ?

ಶ್ರೀ ಎಚ್. ಟಿ. ಕೃಷ್ಣಪ್ಪ.— ನೀವು ಕೊಡುತ್ತೀರಾ ? ಅಲ್ಲಿ ಕೆಲಸವೇ ಆಗಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಕೆಲಸ ಆಗಿದೆ.

ಶ್ರೀ ಎಚ್. ಟಿ. ಕೃಷ್ಣಪ್ಪ. — ಸವಾಲು, ಪ್ರತಿ ಸವಾಲನ್ನು ಒಪ್ಪಿಕೊಳ್ಳುವುದಾದರೆ ಮಂಡ್ಯಕ್ಕೆ ಬನ್ನಿ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಒಟ್ಟು ೭೨೫ ಫಂಕ್ಷನ್ ಮಾಡುತ್ತಾ ಇವೆ. ಒಂದೂ ಇಲ್ಲ ಎರಿದರೆ ಅದನ್ನು ಒಪ್ಪುವುದಕ್ಕೆ ಆಗುವುದಿಲ್ಲ. ಒಟ್ಟು ೭೩೨೫ ಸ್ಯಾಂಕ್ಷನ್ಡ್ ಸ್ಕೀಮ್ಸ್. ಇದರಲ್ಲಿ ೮೮೮ ಕಂಪ್ಲೀಟ್ ಮಾಡಿದ್ದಾರೆ. ಸವಾಲು ಮಾಡುವುದಕ್ಕೆ ಹೋಗಬೇಡಿ, ಏನೂ ಮಾಡಿಲ್ಲ ಎಂದು ಹೇಳಿದರೆ ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಸ್ಪೆಸಿಫಿಕ್ಕಾಗಿ ಕಂಪ್ಲೀಟ್ ಆಗಿವೆ ಎಂದರೆ ಒಪ್ಪಿಕೊಳ್ಳೋಣ, ಕೆಲಸ ಮಾಡುತ್ತಾ ಇವೆ ಎನ್ನುವುದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಮ್ಮನ್ನು ನನ್ನ ಜೊತೆಯಲ್ಲಿ ಕರೆದುಕೊಂಡು ಹೋಗಿ ೭೨೫ ಕೆಲಸ ಮಾಡುತ್ತಾ ಇವೆ ಎನ್ನುವುದನ್ನು ತೋರಿಸುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಅದು ಸಾಧ್ಯವಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.— ನೀವು ಹಾಗೆ ಅಂದುಕೊಂಡರೆ ನಾನೇನು ಮಾಡಲಿ.

ಶ್ರೀ ಎಚ್. ಟಿ. ಕೃಷ್ಣಪ್ಪ.— ನೀವು ಹಿರಿಯರು, ಅನುಭವಶಾಲಿಗಳು, ಬುದ್ಧಿವಂತರು, ಬೇಕಾದಷ್ಟು ಕಾಂಪ್ಲಿಮೆಂಟ್ಸ್ ಕೊಡಬಹುದು. ನಿಮ್ಮ ಜೊತೆಯಲ್ಲಿ ನಾವು ಇದ್ದರೆ ನಿಮ್ಮ ಅನುಭವಪಡೆಯಬಹುದು. ದಯವಿಟ್ಟು ಎಲ್ಲೆಲ್ಲಿ ಕೆಲಸ ನಡೆಯುತ್ತಾ ಇದೆ ಎನ್ನುವುದನ್ನು ಹೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.— ನಮ್ಮ ಊರಿನಲ್ಲಿ ಕೆಲಸ ಮಾಡುತ್ತಾ ಇದೆ. ನಮ್ಮ ಪಕ್ಕದ ಊರಿನಲ್ಲಿ ಕೆಲಸ ಮಾಡುತ್ತಾ ಇದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ನಿಮ್ಮ ಊರಿನ ವಿಚಾರ ಬೇರೆ. ಅದಕ್ಕೂ ಬೇರೆ ಕಡೆಗೂ ಸಂಬಂಧವಿಲ್ಲ.

ಶ್ರೀ ಎಚ್. ಎಂ. ಚನಬಸಪ್ಪ.— ೧೩೨೫ ಸ್ಕೀಮ್ಸ್ ಸ್ಯಾಂಕ್ಷನ್ ಮಾಡಿದೆ. ಅದರಲ್ಲಿ ೮೦೮ ಕಂಪ್ಲೀಟ್ ಆಗಿದೆ. ಇನ್ನು ೧೧೭ ಬ್ಯಾಲೆನ್ಸ್ ಇದೆ, ಮಾಡಬೇಕಾಗಿದೆ ೭೨೫ ಫಂಕ್ಷನ್ ಆಗುತ್ತಾ ಇದೆ. ೮೩ ನಾನ್ ಫಂಕ್ಷನ್. ಕೆಲವು ವಿದ್ಯುಚ್ಛಕ್ತಿ ದುಡ್ಡು ಕೊಡದೇ ನಿಂತು ಹೋಗಿವೆ. ಇನ್ನು ಕೆಲವು ಮಿಷನರಿ ಟ್ರಬಲ್‌ನಿಂದ ನಿಂತು ಹೋಗಿವೆ. ೪೮ ನಾನ್ ಪೇಮೆಂಟ್ ಆಫ್ ಚಾರ್ಜ, ೩೫ ಫಾರ್ ಅದರ್ ಟೆಕ್ನಿಕಲ್ ಟ್ರಬಲ್ಸ್ ಬ್ಯಾಲೆನ್ಸ್ ೫೭ ರಲ್ಲಿ ಫಂಕ್ಷನ್ ವರ್ಕ್ಸ್ ಡ್ರಾಪ್ ಮಾಡಿದ್ದೇವೆ. ಏಕೆಂದರೆ, ೧೦ ಪರ್ಸೆಂಟ್ ಕೊಟ್ಟಿಲ್ಲ. ೮೩ ಸ್ಯಾಂಕ್ಷನ್ ಮಾಡಿದ್ದು ಡ್ರಾಪ್ ಮಾಡಿದ್ದೇವೆ. ೪೩೪ ಕಂಪ್ಲೀಟ್ ಮಾಡಬೇಕಾಗಿದೆ. ಅನ್ ಪ್ರೊಗ್ರೆಸ್. ೪೨೪ರಲ್ಲಿ ೨೯೩ ಪ್ರೋಗ್ರೆಸ್, ೧೪೧ ಎಟ್ ಟುಬಿ ಟೇಕನ್. ಈಚೆಗೆ ಅನೇಕ ಲಕ್ಷಾಂತರ ರೂಪಾಯಿ ಸ್ಯಾಂಕ್ಷನ್ ವರ್ಕ್ಸ್‌ಗೆ ಎಸ್ಟಿಮೇಟ್ ಆಗಿದೆ. ಇದೇ ರೀತಿ ಹೋದರೆ ಅನೇಕ ಹಳ್ಳಿಗಳಿಗೆ ನೀರನ್ನು ಕೊಡುವುದಕೆ ಆಗುವುದಿಲ್ಲ. ಹಳ್ಳಿಗಳಿಗೆ ಕುಡಿಯುವ ನೀರನ್ನು ಕೊಡತಕ್ಕುದ್ದು ಸರ್ಕಾರದ ಜವಾಬ್ದಾರಿ ಇದೆ ಒಂದೊಂದು ಊರಿಗೆ ೨-೩ ಲಕ್ಷ ರೂಪಾಯಿ ಖರ್ಚು ಮಾಡುತ್ತಾ ಹೋದರೆ ಮುಂದೆ ಕಷ್ಟವಾಗುತ್ತದೆ. ಈ ಸ್ಕೀಮನ್ನು ಕರ್ಟೈಲ್ ಮಾಡಿ, ಹಳ್ಳಿಯ ಮಧ್ಯದಲ್ಲಿ ನೀರನ್ನು ತೆಗೆದುಕೊಂಡು ಹೋಗಿ ಕೊಡುತ್ತೇನೆ. ಅಲ್ಲಿ ಓವರ್ ಟ್ಯಾಂಕ್ ಕಟ್ಟಿ. ಪೈಪ್ಸ್ ಹಾಕಿ ನೀರನ್ನು ಕೊಡುತ್ತೇವೆ. ಸ್ವಲ್ಪ ದೊಡ್ಡಹಳ್ಳಿಯಾದರೆ ೨ ಕಡೆ ಮಾಡೋಣ. ಇನ್ನೂ ಸ್ವಲ್ಪ ದೊಡ್ಡ ಹಳ್ಳಿಯಾದರೆ ೨-೩ ಕಡೆ ಮಾಡೋಣ. ಅದಕ್ಕಿಂತ ದೊಡ್ಡದಾದರೆ ೩-೪ ಕಡ ಮಾಡೋಣ. ಅಲ್ಲಿಂದ ಮನೆಮನೆಗೆ ತೆಗೆದುಕೊಂಡು ಹೋಗತಕ್ಕ ಕೆಲಸವನ್ನು ಲೋಕಲ್‌ಬಾಡಿ ಮಾಡಬೇಕು. ಈ ರೀತಿ ಮಾಡುವುದರಿಂದ ೧೦೦ ಹಳ್ಳಿಗಳಿಗೆ ಕೊಡುವುದಕ್ಕೆ ಸಾಧ್ಯವಾದರೆ ೩೦೦ ಹಳ್ಳಿಗಳಿಗೆ ಕೊಡಬಹುದು. ಕರ್ಟೈಲ್ ಮಾಡುವುದಕ್ಕೆ ಸಾಧ್ಯವಾದರೆ ಕರ್ಟೈಲ್ ಮಾಡಿ ಎಂದು ಕೂಡ ಹೇಳಿದ್ದೇವೆ. ಈ ರೀತಿ ಮಾಡುವುದರಿಂದ ಬೇಗನೆ ಹಳ್ಳಿಗಳಿಗೆ ನೀರನ್ನು ಕೊಡಬಹುದು. ಯಾರು ಯಾರು ೧೦ ಪರ್ಸೆಂಟ್ ಕೊಟ್ಟಿದ್ದಾರೆ, ಪರ್ಸೆಂಟ್ ಕೊಟ್ಟಿರತಕ್ಕದ್ದು ಸುಮಾರು ೧೩೮ ಗ್ರಾಮಗಳಿವೆ. ಅವೆಲ್ಲಕ್ಕೂ ಮಾಡಿಸಿಕೊಡುತ್ತೇವೆ.

ಶ್ರೀ ಕೊಣಂದೂರು ಲಿಂಗಪ್ಪ.— ಹೋದ ವರ್ಷ ಇದೇ ರೀತಿ ಹೇಳಿದ್ದಿರಿ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಹೋದವರ್ಷ ಈ ಖಾತೆ ನನ್ನಕೈಯಲ್ಲಿ ಇರಲಿಲ್ಲ. ಸುಮ್ಮನೆ ಏಕೆ ಹೇಳುತ್ತೀರಿ ?

Sri H. T. KRISHNAPPA.— I do not accept your figures as Corret.

Sri H. M. CHANNABASAPPA.— I will ask my officer to take you round the whole State.

Sri H. T. KRISHNAPPA.—If what I say is found to be true—

Sri H. M. CHANNABASAPPA.— I will take action against the officer who has given me wrong information. ಆಫೀಸರ್ ಕೊಟ್ಟಿರುವುದನ್ನು ನಾನು ಕೊಡುತ್ತಿದ್ದೇನೆಯೇ ವಿನಹ ನಾನು ಕೊಡುತ್ತಿದ್ದೇನೆಯೇ? ಆದುದರಿಂದ ೧೩೨ ಹಳ್ಳಿಗಳಲ್ಲಿ ೧೦ ಪರ್ಸೆಂಟ್ ಡಿಪಾಜಿಟ್ ಕೊಟ್ಟಿದ್ದಾರೆ, ಅವುಗಳನು ಸ್ಯಾಂಕ್ಷನ್ ಮಾಡಿ ಕೊಡುತ್ತೇವೆ ಇದರಲ್ಲಿ ಇದುವರೆಗೆ ರಿಪೇರಿ ಆಗದೇ ಜನ ಬಹಳ ಕಷ್ಟಪಡುತ್ತಿದ್ದಾರೆ. ಅದಕ್ಕೋಸರ ಒಂದು ಹೊಸ ನೀತಿಯನ್ನು ಹಾಕಿ ೧೦ ಪರ್ಸೆಂಟ್ ಕೊಟ್ಟಿರುವುದನ್ನು ಪೂಲ್ ಮಾಡಿಬಿಟ್ಟು, ಇನ್ನು ೫ ವರ್ಷಗಳ ಎಲ್. ಆರ್. ಡಬ್ಲ್ಯೂ ಸ್ಕೀಮಿನಲ್ಲ ಸರ್ಕಾರವೇ ರಿಪೇರಿ ಮಾಡಬೇಕು ಎಂದು ಮಾಡಿದ್ದೇವೆ. ಈ ೧೦ ಪರ್ಸೆಂಟ್ ಕೊಡುವ ದುಡ್ಡನ್ನು ಸರ್ಕಾರದ ಖರ್ಚು ಮಾಡುವುದಿಲ್ಲ. ಇದನ್ನು ಒಂದು ಫಂಡಾಗಿ ಕ್ರಿಯೇಟ್ ಮಾಡುತ್ತೇವೆ.

We are not going to ask for a single pie more. We will undertake to repair and replace for a period of five years. We will appoint a proper authority at taluk level to go round and see that they are repaired. ಇನ್ನು ಮುಂದಾದರೂ ಎಲೆಕ್ಟ್ರಿಸಿಟಿ ಚಾರ್ಜ್ ಕೊಡದೇ ನಿಂತು ಹೋದರೆ, ಅದು ಅವರ ಜವಾಬ್ದಾರಿಯೇ ವಿನಹ, ಸರ್ಕಾರದ ಜವಾಬ್ದಾರಿಯಲ್ಲ. ತಾಂತ್ರಿಕ ಕಾರಣಗಳಿಂದ ನಿಂತು ಹೋದರೆ ನಮ್ಮ ಕರ್ತವ್ಯ. ಈ ರೀತಿ ಹೊಸ ನೀತಿಯನ್ನು ಹಾಕಿದ್ದೇವೆ. ಇನ್ನು ಮುಂದೆ ತಾಂತ್ರಿಕ ಕಾರಣ ಗಳಿಂದ ನಿಂತು ಹೋಗುವುದು ತಪ್ಪಿ ಹೋಗುತ್ತದೆ.

ಶ್ರೀ ಸಿ. ಬೈರೇಗೌಡ.—ಹಿಂದೆ ಮಾಡಿದ್ದು ಈಗ ನಿಂತು ಹೋಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಹಿಂದೆ ಮಾಡಿರುವುದಕ್ಕೆ ನಾನು ಜವಾಬ್ದಾರಿಯಲ್ಲ.

ಶ್ರೀ ಜಿ. ಚನ್ನಪ್ಪ .— ಹ್ಯಾಂಡ್ ಪಂಪ್ ಫಿಕ್ಸ್ ಮಾಡಿದ್ದಾರೆ, ಕೆಲವು ಕಡೆ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಕೆಲವು ಕಡೆ ತಾಂತ್ರಿಕ ಕಾರಣಗಳಿಂದ ಹ್ಯಾಂಡ್ ಪಂಪ್ಸ್ ಸರಿಯಾಗಿ ಕೆಲಸ ಮಾಡದೇ ಇರಬಹುದು. ಈ ಹೊಸ ತರಹ ಪಂಪ್‌ಗಳನ್ನು ವಾಟರನ್ನು ಲಿಫ್ಟ್ ಮಾಡುವುದಕ್ಕೆ ಇಂಟರ್‌ಡ್ಯೂಸ್ ಮಾಡಿದ್ದೇವೆ. ಅದು ಬಹಳ ಚೆನ್ನಾಗಿ ಕೆಲಸ ಮಾಡುತ್ತಾ ಇದೆ. ಎಲ್ಲೆಲ್ಲಿ ತೊಂದರೆಗಳಿವೆ, ಅಲ್ಲೆಲ್ಲಾ ರೀಪ್ಲೇಸ್ ಮಾಡಿಕೊಡುತ್ತೇನೆ. ಹಾಕದೇ ಇರುವ ಕಡೆ ಹಾಕಿ ಕೊಡುತ್ತೇನೆ, ಕೆಟ್ಟು ಹೋಗಿರುವ ಕಡೆ ರಿಪೇರಿ ಮಾಡಿಸುತ್ತೇನೆ.

ಇನ್ನು ಪೋರ್ಟ್ಸ್ ವಿಷಯ ಇದೆ. ಇದರಲ್ಲಿ ಯಾವ ಯಾವ ಅಧಿಕಾರಿ ಎಷ್ಟರಮಟ್ಟಿಗೆ ಪ್ರಯತ್ನ ಮಾಡಬೇಕು, ಎನ್ನುವುದು ಇದೆ, ಈಗ ಕೆಲಸ ನಡೆದಿದೆ. ಇದರ ಬಗ್ಗೆ ಹೇಳತಕ್ಕದ್ದು ಅನಾವಶ್ಯಕ

ಶ್ರೀ ಕೋಣಂದೂರು ಲಿಂಗಪ್ಪ —ಅಲ್ಲಿಗೆ ಉದ್ಯೋಗಕ್ಕೆ ಬರತಕ್ಕವರಿಗೆ ಸ್ಕೂಲುಗಳ ಸೌಲಭ್ಯವನ್ನು ಮಾಡಿಕೊಡಬೇಕು. ಕೇರಳ ಮತ್ತು ತಮಿಳುನಾಡಿನಿಂದ ಬಂದಿರತಕ್ಕವರಿಗೆ ವಿದ್ಯಾಭ್ಯಾಸಕ್ಕೆ ಟ್ರೈನಿಂಗ್ ಸ್ಕೂಲಿನ ಸೌಲಭ್ಯವನ್ನು ಏರ್ಪಾಡು ಮಾಡಬೇಕು.

ಶ್ರೀ ಎಚ್. ಎಂ ಚನ್ನಬಸಪ್ಪ.— ಈ ವಿಷಯವನ್ನು ಪರ್ಯಾಲೋಚನೆ ಮಾಡೋಣ. It is a good suggestion and we will certainly have it examined. ಇದು ಸ್ವಾಗತಾರ್ಹವಾದ ಸಲಹೆ. ಇದನ್ನು ಪರ್ಯಾಲೋಚನೆ ಮಾಡಿ ಅವಶ್ಯಕವಾದ ಕಾರ್ಯಕ್ರಮವನ್ನು ತೆಗೆದು ಕೊಳ್ಳುತ್ತೇನೆ.

1-30 P.M.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಪಿ.ಡಬ್ಲ್ಯು.ಡಿ. ಸ್ಕೂಲ್ ಬಿಲ್ಡಿಂಗ್ಸ್ ಕಟ್ಟಿದ ಮೇಲೆ ಮತ್ತೆ ಅದನ್ನು ನೋಡಿಯೇ ಇಲ್ಲ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಪೂರ್ವದಲ್ಲಿ ಏನು ಹಣ ಇತ್ತು, ಅದರ ಮೇಲೆ 1 ಪರ್ಸೆಂಟ್ ಅಥವಾ 2 ಪರ್ಸೆಂಟ್ ಹಣವನ್ನು ಕೊಡುತ್ತಾ ಇತ್ತು. ಆದರೆ ಅದು ಸಾಲುತ್ತಾ ಇರಲಿಲ್ಲ. ಈಗ ಆರೀತಿ ಆಗಬಾರದು ಎಂದು ಇನ್ನೂ ಹೆಚ್ಚಿಗೆ ಹಣವನ್ನು ಮಂಜೂರು ಮಾಡಿದ್ದೇವೆ. ಅಲ್ಲದೆ ಆಯಾಯ ಸ್ಥಳೀಯ ಅಧಿಕಾರಿಗಳಿಗೆ ಹಣವನ್ನು ಮಂಜೂರು ಮಾಡಲಿಕ್ಕೆ, ಕ್ರಮ ತೆಗೆದುಕೊಳ್ಳಲಿಕ್ಕೆ ಹೇಳಿದ್ದೇವೆ. ಈಗ ಎಲ್ಲ ಮಾನ್ಯ ಸದಸ್ಯರೂ ಕೇಳಿದ ಪ್ರಶ್ನೆಗಳಿಗೆ ಸೂಕ್ತ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದೇನೆ. ನನ್ನ ಉತ್ತರದಿಂದ ಎಲ್ಲರಿಗೂ ತೃಪ್ತಿಯಾಗಿದೆ ಎಂದು ನಾನು ಅಂದುಕೊಂಡಿದ್ದೇನೆ ಮತ್ತು ಈಗ ಹಳ್ಳಿಗಾಡಿನ ರಸ್ತೆ ಇತ್ಯಾದಿ ವಿಷಯಗಳಲ್ಲಿ ನಾವು ಏನು ಒಂದು ಕಾರ್ಯಕ್ರಮವನ್ನು ಕೈ ಕೊಂಡಿದ್ದೇವೆ ಅದನ್ನು ತಾವೂ ಕೂಡ ಸ್ವಾಗತ ಮಾಡಿದ್ದೀರಿ. ಅದಕ್ಕೆ ನನ್ನ ಸಂತೋಷವನ್ನು ವ್ಯಕ್ತಪಡಿಸುತ್ತೇನೆ.

ಇನ್ನು ನ್ಯಾಷನಲ್ ಹೈವೇಸ್‌ಗಾಗಿ 15 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. ಸಕಲೇಶಪುರದಿಂದ ಸುಮಾರು ಉಪ್ಪಿನ ಅಂಗಡಿಯವರೆಗೆ ರಸ್ತೆ ಕೆಟ್ಟುಹೋಗಿದೆ ಎಂದು ಮಾನ್ಯ ಸದಸ್ಯರು ಹೇಳಿದರು ಅದು ನನಗೂ ಗೊತ್ತಿದೆ. ಆದರೆ ಇದಕ್ಕೆ ಕೇಂದ್ರ ಸರ್ಕಾರದವರೂ ಇದುವರೆಗೂ ಕೊಡುತ್ತಿದ್ದ ಹಣ ಏನಿತ್ತು ಅದನ್ನು ಇವತ್ತು ಕಡಿಮೆ ಮಾಡಿದ್ದಾರೆ. ಇದರಿಂದಾಗಿ ನಾವು ಈ ರಸ

ಗೋಸ್ಕರವಾಗಿ ಸ್ಪೆಷಲ್ ಆಗಿ ೧೮ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. ಈಗಾಗಲೇ ಕೆಲಸ ಪ್ರಾರಂಭವಾಗಿದೆ. ಇನ್ನು ಕೆಲವು ದಿವಸಗಳಲ್ಲಿಯೇ ಈ ಕೆಲಸವನ್ನು ಮುಗಿಸುತ್ತೇವೆ. ಎನ್ನುವ ಭರವಸೆಯನ್ನೂ ಕೂಡ ಕೊಡುತ್ತೇನೆ.

ಕೊನೆಯದಾಗಿ ಇನ್ನೊಂದು ವಿಷಯವನ್ನು ಎಲ್ಲ ಮಾನ್ಯ ಸದಸ್ಯರಿಗೂ ತಿಳಿಸುವುದು ಏನೆಂದರೆ, ತಮ್ಮ ತಮ್ಮ ಭಾಗದಲ್ಲಿ ಏನು ಸಣ್ಣಪುಟ್ಟ ಸೇತುವೆಗಳ ಕೆಲಸ ಇದೆ ಅದು ಎಷ್ಟೆಷ್ಟು ಆಗಬೇಕು ಎಂಬುದನ್ನು ಎಲ್ಲರೂ ಒಂದೊಂದು ಪಟ್ಟಿಯನ್ನು ಮಾಡಿ ಕಳುಹಿಸಿಕೊಡಬೇಕು. ಅದೇ ರೀತಿ ರಸ್ತೆಗಳನ್ನೂ ಕೂಡ ಪಟ್ಟಿ ಮಾಡಿ ಕಳುಹಿಸಿಕೊಡಬೇಕು. ಮತ್ತು ಮೂರನೆಯದಾಗಿ ವಿಶೇಷವಾಗಿ ಯಾವುದಾದರೂ ಸೇತುವೆಗಳು ಆಗಬೇಕಾದದ್ದು ನಿಂತಿದ್ದರೆ ಅಂಥಾದ್ದನ್ನೂ ಕೂಡ ಒಂದು ಪಟ್ಟಿ ಮಾಡಿ ಕಳುಹಿಸಿಕೊಟ್ಟರೆ ಅದಕ್ಕೆ ನಾವು ವಿಶೇಷವಾದ ಗಮನವನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಇನ್ನೊಂದು ವಿಷಯ ಹೇಳುವುದಾದರೆ ಚಿಕ್ಕಹೊಳೆ ವಿಷಯದಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆ ವಿಷಯದಲ್ಲಿಯೂ ಕೂಡ ನನ್ನ ಸಲಹೆ ಇದೆ. ಇದು ನನ್ನ ಖಾತೆಗೆ ಸೇರಿದ್ದಲ್ಲ. ಈ ಖಾತೆ ಮಾನ್ಯ ಮುಖ್ಯ ಮಂತ್ರಿಯವರಿಗೆ ಸಂಬಂಧ ಪಟ್ಟಿದ್ದು. ಆದುದರಿಂದ ನಾನು ಇದರ ಬಗ್ಗೆ ಯಾವ ಉತ್ತರವನ್ನೂ ಕೊಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಯವರೇ ನಾಳೆ ಬಂದು ಇದಕ್ಕೆ ಸೂಕ್ತ ಉತ್ತರವನ್ನು ಕೊಡುತ್ತಾರೆ. ಚಿಕ್ಕಹೊಳೆ ವಿಷಯದಲ್ಲಿ ರಿಪೋರ್ಟ್ ಕೂಡ ಬಂದಿದೆ. ಅದನ್ನು ನೋಡಿಕೊಂಡು ಉತ್ತರವನ್ನು ಕೊಡುತ್ತಾರೆಂದು ಇಷ್ಟುಮಾತ್ರ ಹೇಳಲಿಚ್ಛಿಸುತ್ತೇನೆ.

†ಶ್ರೀ ಎಸ್. ಬಿ. ನಾಗರಾಳ್ (ಸಣ್ಣ ನೀರಾವರಿ ಶಾಖೆಯ ರಾಜ್ಯ ಮಂತ್ರಿಗಳು) — ಮಾನ್ಯ ಅಧ್ಯಕ್ಷರೆ, ಈ ಸಣ್ಣ ನೀರಾವರಿ ಖಾತೆಯಲ್ಲಿ ಎಂದೆಂದೂ ಕೂಡ ಮಂಡಿಸಲಾಗದಂಥ ಒಂದು ವೈಶಿಷ್ಟ್ಯಪೂರ್ಣವಾದ ಬೇಡಿಕೆಗಳನ್ನು ಸಂತೋಷ ಪೂರ್ವಕವಾಗಿ ಮಂಡಿಸಿದ್ದಾಗಿದೆ. ಅದೇನೆಂದರೆ, ಇವತ್ತಿನವರೆಗೂ ಅಂದರೆ ೧೦-೧೫ ವರ್ಷಗಳ ಹಿಂದಿನ ಅಂಕಿಸಂಖ್ಯೆಗಳನು ತೆಗೆದುಕೊಂಡು ನೋಡಿದರೆ ಈ ಸಣ್ಣ ನೀರಾವರಿ ಯೋಜನೆಗಳಿಗೆ ೧, ೨, ೩, ೪, ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಎಂದೂ ಕೂಡ ಕೊಟ್ಟಿಲ್ಲ ೧೯೭೪-೧೯೭೫ ರಲ್ಲಿ ೫-೮ ಕೋಟಿ ರೂಪಾಯಿಗಳನ್ನು ಕೊಟ್ಟಿತ್ತು. ಹೋದ ವರ್ಷ ೧೧ ಕೋಟಿ ರೂಪಾಯಿಗಳನ್ನು ಕೊಟ್ಟಿತ್ತು. ಈ ವರ್ಷ ಸುಮಾರು ೧೫ ಕೋಟಿ ರೂಪಾಯಿಗಳ ಒಂದು ಬೇಡಿಕೆಯನ್ನು ಈ ಸಭೆಯ ಅನುಮೋದನೆಗಾಗಿ ಮಾಡಿಸಿದ್ದಾಗಿದೆ. ಈ ಸಣ್ಣ ನೀರಾವರಿ ಬಗ್ಗೆ ಸದನದ ಅನೇಕ ಮಾನ್ಯ ಸದಸ್ಯರು ಬಹಳ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳೆಲ್ಲವನ್ನೂ ನಾನು ಸಂತೋಷದಿಂದ ಸ್ವಾಗತಿಸುತ್ತೇನೆ. ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ಜಾಗದಲ್ಲಿ ಕೆರೆಗಳನ್ನು ಕಟ್ಟಬೇಕು ಎನ್ನುವ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದ್ದಾಗಿದೆ. ನನಗನಿಸುತ್ತದೆ ಈ ಸಣ್ಣ ನೀರಾವರಿ ಶಾಖೆಯಲ್ಲಿ ಇದುವರೆಗೂ ೨೦೩೭೭ ಕೆರೆಗಳ ಶಿಲ್ಕು ಉಳಿದಿತ್ತು. ಈಗ್ಗೆ ೩-೪ ವರ್ಷಗಳಲ್ಲಿ ಸುಮಾರು ೧೮೫೦ ಕೆರೆಗಳ ಕೆಲಸವನ್ನು ಮುಗಿಸಿ ೭೨೭ ಹೊಸ ಕೆರೆಗಳ ಕೆಲಸವನ್ನು ಕೈಗೊಂಡಿದೆ. ಆದರೆ ಈ ಸಣ್ಣ ನೀರಾವರಿ ಶಾಖೆಯ ವಿಷಯದಲ್ಲಿ ಮಾನ್ಯ ಸದಸ್ಯರೆಲ್ಲರೂ ವಿಶೇಷವಾಗಿ ವ್ಯಕ್ತಪಡಿಸಿರತಕ್ಕಂಥ ಸಲಹೆ ಎಂದರೆ ಪ್ರಮುಖ್ಯವಾಗಿ ಕೆರೆಗಳಲ್ಲಿ ಹೂಳು ತುಂಬಿಕೊಂಡು ನೀರು ನಿಲ್ಲುವುದಿಲ್ಲ, ಆದುದರಿಂದ ಆ ಕೆರೆಗಳ ಹೂಳನ್ನು ತೆಗೆಸಿ ರಿಪೇರಿ ಮಾಡಿಸಿ ರೈತರಿಗೆ ಏನು ಅವಶ್ಯಕವಾಗಿ ನೀರಿನ ಸೌಕರ್ಯವನ್ನು ಆದಷ್ಟು ಜಾಗ್ರತೆ ಒದಗಿಸಿಕೊಡಬೇಕೆಂದು ಮಾತನಾಡಿದ್ದಾರೆ. ಆದರೆ ಇವತ್ತು ಸರ್ಕಾರದ ಮುಂದಿರತಕ್ಕ ಸಮಸ್ಯೆ ಬಹಳ ದೊಡ್ಡದಾಗಿದೆ. ಹೂಳು ತೆಗೆಸುವ ವಿಚಾರದಲ್ಲಿ ತಾಂತ್ರಿಕ ತಜ್ಞರನ್ನು ಕೇಳಿದರೆ ಈ ಹೂಳನ್ನು ತೆಗೆಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳುತ್ತಾರೆ. ಈ ದೃಷ್ಟಿಯಿಂದ ಈ ಕೆಲಸಗಳನ್ನು ಈಗ ತೆಗೆದುಕೊಂಡಿಲ್ಲ. ಇರಿದ ಕೆರೆಗಳಿಂದ ನೀರನ್ನು ಸ್ಪ್ರಿಂಕ್ಲರ್ ಇರಿಗೇಷನ್ ಮೂಲಕ ಒದಗಿಸುವುದಕ್ಕೆ ಸಾಧ್ಯವಿದೆಯೇ ಎನ್ನುವ ಬಗ್ಗೆ ಪರಿಶೀಲಿಸಬೇಕೆಂದು ಪರಿಣತರನ್ನು ಕೇಳಬೇಕೆಂದು ವಿಚಾರದಲ್ಲಿದೆ. ಮೊದಲು ರೈತರು ತಮ್ಮ ಹೊಲಗಳಿಗೆ ಕೆರೆಗಳಿಂದ ಹೂಳನ್ನು ತೆಗೆದುಕೊಂಡು ಹೋಗಿ ಉಪಯೋಗಿಸಿಕೊಳ್ಳುತ್ತಿದ್ದರು. ಆಗ ಒಂದು ಗಾಡಿಗೆ ಇಂತಿಷ್ಟು ದುಡ್ಡು ಎಂದು ಕೊಡುತ್ತಿದ್ದರು. ಆದರೆ ಈಗ ಈ ಕೆರೆಗಳಲ್ಲಿ ಹೂಳು ತುಂಬಿಕೊಂಡಿದ್ದು ರೈತರು ಯಾರು ಕೆರೆಗಳಿಂದ ಹೂಳನ್ನು ಎತ್ತದೇ ಇರುವುದರಿಂದ ಅವರು ಮೊದಲು ಕೊಡುತ್ತಿದ್ದ ಹಾಗೆ ಒಂದು ಗಾಡಿಗೆ ಇಂತಿಷ್ಟು ಎಂದು ದುಡ್ಡು ಕೊಡುವುದು ಏನೂ ಬೇಡ ಹಾಗೆಯೇ ತುಂಬಿಕೊಂಡು ಹೋಗಿ ಎಂದು ಪ್ರಕಟಣೆ ಹೊರಡಿಸಿದರೂ ಯಾರೂ ಕೂಡ ಮುಂದೆ ಬರುತ್ತಿಲ್ಲ. ಈ ಹೂಳನ್ನು ಇಟ್ಟಿಗೆ ಹಾಕುವವರಿಗೂ ಉಪಯೋಗಿಸಿಕೊಳ್ಳುವುದಕ್ಕೆ ಕೊಡಬೇಕೆಂದು

ಹೇಳಿದ್ದೇವೆ. ಸರ್ಕಾರ ಈ ಬಗ್ಗೆ ೧೫-೧೬ ವರ್ಷಗಳ ಲಾಗಾಯ್ತು ಮಾಡಿದಂತಹ ಕೆಲಸಗಳನ್ನೆಲ್ಲಾ ಈ ರಿಪೋರ್ಟ್‌ನಲ್ಲಿ ಒದಗಿಸಿದ್ದು ಆಗಿದೆ. ಆದುದರಿಂದ ಈ ಬಗ್ಗೆ ನಾನು ಹೆಚ್ಚಿಗೆ ಏನೂ ಹೇಳುವುದು ಅವಶ್ಯಕತೆ ಇಲ್ಲವೆಂದು ಹೇಳಬಯಸುತ್ತೇನೆ. ನನಗೆ ಗೊತ್ತಿರುವಂತೆ ೨೫೬೫ ಟ್ಯಾಂಕುಗಳನ್ನು ಅಬ್ಯಾಂಡನ್ ಮಾಡಬೇಕೆಂದು ಇದೆ. ಅಥವಾ ಇನ್ನೂ ಹೆಚ್ಚು ಕೆರೆಗಳನ್ನು ಮಾಡಬೇಕೋ ಏನೋ ಎಂಬ ಬಗ್ಗೆ ಶಂಕೆ ಇದೆ. ಇದರ ಬಗ್ಗೆ ಸ್ಥಳೀಯ ಅಧಿಕಾರಿಗಳಿಗೆ ಇನ್ನೂ ವಿಶೇಷವಾಗಿ ಪರಿಶೀಲನೆ ಮಾಡಿ ಎಂದು ತಿಳಿಸಿದ್ದೇವೆ. ಮತ್ತು ಎಷ್ಟು ಕೆರೆಗಳನ್ನು ಅಬ್ಯಾಂಡನ್ ಮಾಡುವುದಕ್ಕೆ ಸಾಧ್ಯವಿದೆ ಎನ್ನುವ ಬಗ್ಗೆ ತಮಗೆ ಅಂಕಿಸಂಖ್ಯೆಗಳನ್ನು ತರಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಸನ್ಮಾನ್ಯ ಬಂಗಾರಪ್ಪನವರು ಮಾತನಾಡುತ್ತಾಗ ಕೆಲವು ಕಂಟ್ರಾಕ್ಟರುಗಳ ವಿಷಯವಾಗಿ ಮಾತನಾಡಿದರು. ಮುಖ್ಯವಾಗಿ ಕೆಲವೊಂದು ಸಲಹೆಗಳನ್ನು ಕೊಟ್ಟರು. ದೊಡ್ಡ ದೊಡ್ಡ ಕಂಟ್ರಾಕ್ಟರ್‌ಗಳಿಂದ ಸರಿಯಾಗಿ ಕೆಲಸಗಳಾಗದೆ ಅಪವ್ಯಯವಾಗುವುದರಿಂದ ಇದನ್ನು ತಪ್ಪಿಸಬೇಕೆಂದು ಹೇಳಿದರು. ಬಲಿಷ್ಟವಾದ ಕಂಟ್ರಾಕ್ಟರುಗಳನ್ನು ಅವಲಂಬನೆ ಮಾಡುವುದು ಬೇಡ, ಸ್ಥಳೀಯ ಸಣ್ಣ ಸಣ್ಣ ಕಂಟ್ರಾಕ್ಟರುಗಳಿಗೆ ವಿಶೇಷವಾದ ಸೌಲಭ್ಯಗಳನ್ನು ಕೊಟ್ಟು ಸಣ್ಣ ಸಣ್ಣ ನೀರಾವರಿ ಕಾಮಗಾರಿಗಳ ಕೆಲಸವನ್ನು ಕೈಗೊಳ್ಳಬೇಕೆಂದು ಆದೇಶ ನೀಡಿ, ಪೀಸ್ ಕಾಮಗಾರಿಗಳನ್ನೂ ೨೫ ಸಾವಿರ ರೂಪಾಯಿಗಳವರೆಗೆ ಸ್ಥಳೀಯ ಕಂಟ್ರಾಕ್ಟರ್‌ಗಳಿಗೆ ಕೆಲಸ ಕೊಡಬೇಕೆಂದು ಸರ್ಕಾರದಿಂದ ಆದೇಶ ಕಳುಹಿಸಿ ಎಲ್ಲ ಕಡೆ ಕೆಲಸ ಪ್ರಾರಂಭವಾಗಿದೆ. ಕೆಲವೊಂದು ಕಡೆ ಸಣ್ಣ ಕಂಟ್ರಾಕ್ಟರುಗಳು ಮುಂದೆ ಬಾರದೆ ಇರುವ ಸಂದರ್ಭಗಳು ಉಂಟು. ನಾನು ಸದಸ್ಯರಲ್ಲಿ ಕೇಳಿಕೊಳ್ಳುವುದೇನೆಂದರೆ ಯಾರು ಯಾರು ಸಣ್ಣ ಕಂಟ್ರಾಕ್ಟರುಗಳು ಮುಂದೆ ಬಾರದಿರುವ ಜಾಗದಲ್ಲಿ ಸ್ಪರ್ಧಾತ್ಮಕವಾಗಿ ಸಂತೋಷದಿಂದ ಬೇರೆ ಸಣ್ಣ ಕಂಟ್ರಾಕ್ಟರುಗಳು ಮುಂದೆ ಬಂದಾಗ ಅವರಿಗೆ ಸಣ್ಣ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳುವಂತೆ ಪ್ರೋತ್ಸಾಹ ನೀಡುವಂತ ವಾತಾವರಣವನ್ನು ನಿರ್ಮಾಣ ಮಾಡಬೇಕಾಗುತ್ತದೆ. ಯಾವುದೇ ರೀತಿಯಲ್ಲಿ ಕೆಲಸಕಾರ್ಯಗಳಿಗೆ ತೊಂದರೆಗಳು ಅನಾನುಕೂಲಗಳು ಆಗುವ ಪ್ರಶ್ನೆ ಬಂದಾಗ, ಸರ್ಕಾರದ ಮಟ್ಟದಲ್ಲಿ ವಿಶೇಷವಾದ ಸೌಲಭ್ಯಗಳನ್ನು ಒದಗಿಸುವುದರ ಬಗ್ಗೆ ಹಿಂದುಮುಂದು ನೋಡುವುದಿಲ್ಲ ಎನ್ನುವ ಮಾತನ್ನು ಕೂಡ ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಮಲ್ಲಿಗಳ್ಳಿ ಪ್ರಾಜೆಕ್ಟ್ ಬಹಳ ದಿವಸದಿಂದ ಹಾಗೆಯೇ ಇದೆ. ಇದು ಸಣ್ಣ ನೀರಾವರಿ ಇಲಾಖೆಯಿಂದ ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಹೋಗಿರುತ್ತದೆ. ಮೂರುನಾಲ್ಕು ದಿವಸದಲ್ಲಿಯೇ ಆ ಕೆಲಸಕ್ಕೆ ಮಂಜೂರಾತಿದೊರಕಬಹುದು, ಆ ಮೇಲೆ ದುಡ್ಡಿಗೇನು ಕೊರತೆ ಇರುವುದಿಲ್ಲ. ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟಕೂಡಲೆ ಜಾಗ್ರತೆಯಾಗಿ ಕೆಲಸಮಾಡಿ ಸಂಪನ್ಮೂಲಗಳನ್ನು ವಿಶೇಷವಾಗಿ ಅಭಿವೃದ್ಧಿ ಮಾಡಿಕೊಂಡು ದೇಶಕ್ಕೆ ಬಂದಿರುವ ಕೊರತೆಯನ್ನು ಪೂರೈಸಬೇಕೆಂಬುದೇ ಸರ್ಕಾರದ ಉದ್ದೇಶವಾಗಿರುತ್ತದೆ. ಅದಕ್ಕೆ ಅನುಗುಣವಾಗಿ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟ ತಕ್ಷಣ ಕೆಲಸಗಳನ್ನು ಜಾಗ್ರತೆಯಾಗಿ ಶುರುಮಾಡಬೇಕು ಎನ್ನುವ ಬಗ್ಗೆ ಎಲ್ಲ ಅಧಿಕಾರಿಗಳಿಗೂ ಆದೇಶ ಹೋಗಿರುತ್ತದೆ. ಶ್ರೀ ಸಿದ್ದಮಾದಯ್ಯನವರು ಒಂದು ಮಾತು ಹೇಳಿದರು ಒಂದೆರಡು ಕೆರೆಗಳು ಅಂದರೆ ಹೊಸಹಳ್ಳಿ, ಗೌಡರಹಳ್ಳಿ ಕೆರೆಗಳ ಕೆಲಸ ಇನ್ನೂ ಶುರುಮಾಡಿಲ್ಲ, ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಆಗಿದ್ದರೂ ಕೂಡ ಇನ್ನೂ ಕಾರ್ಯಾರಂಭ ಮಾಡದಿರುವುದರ ಬಗ್ಗೆ ಹೇಳಿರುತ್ತಾರೆ. ಅದನ್ನು ವಿಚಾರಿಸುವುದಾಗಿ ಈ ಸಂಧರ್ಭದಲ್ಲಿ ಹೇಳುತ್ತೇನೆ. ಶ್ರೀಮಾನ್ ಕೊಡಗಿಯವರು ಸೌತ್ ಕೆನರಾ ಕಡೆ ಬಹಳ ಅನ್ಯಾಯವಾಗಿರುತ್ತದೆ. ಅಲ್ಲಿಗೆ ಕೊಟ್ಟಿರುವುದು ಒಂದರೆಡು ಲಕ್ಷ ರೂಪಾಯಿಗಳು ಇರಬಹುದೆನ್ನುವ ಅಂಕಿಸಂಖ್ಯೆಗಳನ್ನು ಕೊಟ್ಟು ಹೇಳಿರುತ್ತಾರೆ. ನಾನಾದರೂ ಹೇಳುವುದು ಇಷ್ಟೇ ಯಾವ ತಾಲೂಕಿಗೂ ಯಾವರೀತಿಯಾದ ಅನ್ಯಾಯವನ್ನು ಮಾಡಿಲ್ಲ. ಎಲ್ಲೆಲ್ಲಿ ಸಂಪನ್ಮೂಲಗಳು ಇವೆಯೋ ಅವುಗಳನ್ನು ಉಪಯೋಗಿಸಿಕೊಳ್ಳಬೇಕು ಎನ್ನುವ ದೃಷ್ಟಿಯಿಂದಲೇ ೧೪ ಕೋಟಿ ೮೫ ಲಕ್ಷ ರೂಪಾಯಿಗಳ ಗ್ರಾಂಟನ್ನು ಒದಗಿಸಲಾಗಿದೆ. ಈ ಗ್ರಾಂಟನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕೆಂಬುದೇ ಸರ್ಕಾರದ ಉದ್ದೇಶವಾಗಿರುತ್ತದೆ. ಇದರ ಬಗ್ಗೆ ಮೂರು ನಾಲ್ಕು ವರ್ಷಗಳಿಂದ ಬಂದಿರತಕ್ಕ ಅಂಕಿಸಂಖ್ಯೆಗಳನ್ನು ಈ ಮತ್ತಿನ ದಿವಸ ಮಾನ್ಯ ಸಭೆಯ ಮುಂದೆ ಇಡಲು ಪ್ರಯತ್ನ ಮಾಡುತ್ತೇನೆ.

## ACHIEVEMENTS
## 1972-73

1. EXPENDITURE — Plan 302.09
DPAP 65.01

| | | | |
|---|---|---|---|
| | | | Rs. 367.10 lakhs |
| Maintenance | ... | | 310.49 |
| | | | Rs. 677.59 lakhs |

2. WORKS —

| | | | |
|---|---|---|---|
| Workload 1-4-1972 | | | 2,037 works |
| | Rs. 3768,35 lakhs | | |
| Works on completed — Plan | 220 | | |
| DPAP | 172 | | |
| | | | 392 works |
| Balance (Spills over on 1-4-1973) | | | 1645 works |

3. AREA BENEFITED.—

| | |
|---|---|
| Old achkat stabilised | 25,405 acres |
| New achkat created | 57,824 acres. |

## ACHIEVEMENTS
## 1973-74

1. EXPENDITURE

| | | | | |
|---|---|---|---|---|
| plan | 269-21 | | | |
| DPAP | 130-00 | | | |
| | | Rs. | 399-21 | lakhs |
| Maintenance | ...... | Rs. | 292-56 | |
| Total | | | 691-77 | lakhs |

2. WORKS

| | | |
|---|---|---|
| Workload as on | 1-4-1973 | 1645 works |
| Add : Fresh works | | 248 works |
| | | 1893 wroks |

Less : works completed

| | | |
|---|---|---|
| Plan | 78 | |
| DPAP | 289 | |
| | | 367 works |
| Balance (Spillover on 1-4-1974) | | 1526 works |

3 AREA BENEFITTED :

| | | |
|---|---|---|
| Old and New achkat | — | 53,793 acres |

1974-75

1. EXPENDITURE

| | | | |
|---|---|---|---|
| Plan | Rs. 617-98 | | |
| DPAP | 48-87 | | |
| | ... | Rs. | 666-85 lakhs |
| Maintenance | ... | Rs. | 325-61 lakhs |
| Total | | Rs. | 992-46 lakhs |

WORKS

| | | |
|---|---|---|
| Workload on 1-4-1974 | | 1526 works |
| Add fresh works Appd. | | 325 works |
| | | 1851 works |

Less: works completed——

| | | |
|---|---|---|
| Plan Sch | 229 | |
| DPAP | 270 | |
| | | 499 works |
| Balance (Spillover on 1-4-1975) | | 1352 works |

3. AREA BENEFITTED :

| | |
|---|---|
| Old stablished | 61,936 acres |
| New achk.t created | 82,280 acres |

1975-76

1. FUNDS ALLOTTED

| | | |
|---|---|---|
| Plan Schemes | Rs. 640-00 | |
| DPAP | Rs. 185-00 | |
| | | Rs. 825-00 lakhs |

2. WORKS

| | |
|---|---|
| Workload on 1-4-1975 | 1,352 works |
| No. of works expected to be completed by 31-3-1976 | 595 works |
| Balance (Spill over on 1-4-1976 approx) | 757 works |

3. AREA BENEFITTED

| | |
|---|---|
| Old Achkat stablised | 40,833 acres |
| New Achkat created | 1,11,734 acres |

ಈ ನಾಲ್ಕು ವರ್ಷದಲ್ಲಿ ಹೊಸ ಕೆಲಸಗಳಿಗೆ ಅಪ್ರೂವಲ್ ತೆಗೆದುಕೊಂಡದ್ದು 756 ಇರುತ್ತದೆ. ಎಲ್ಲೆಲ್ಲಿ ಸ್ಥಗಿತವಾಗಿ ಉಳಿದಿದೆ ಅಲ್ಲಿಗೆ ಟೆಕ್ನಿಕಲ್ ಸ್ಯಾಂಕ್ಷನ್ ಕೊಟ್ಟಿದೆ. ಹೊಸ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟು 1853 ಕೆಲಸ ಕಂಪ್ಲೀಟ್ ಮಾಡಿದೆ. ನಾಲ್ಕು ವರ್ಷದಲ್ಲಿ 2,85,631 ಎಕರೆ ಹೊಸ ಅಚ್ಚುಕಟ್ಟನ್ನು ಇಲ್ಲಿಯವರೆಗೆ ಒದಗಿಸಿದ್ದು ಆಗಿದೆ. ಎಲ್ಲೆಲ್ಲಿ ಕೆರೆಗಳಿವೆ, ಎಷ್ಟು ಕೆರಗಳಿಗೆ ಎಂದು ರಿಪೋರ್ಟ್ ತರಿಸಲಾಗಿದೆ 43,000 ಕೆರೆಗಳಲ್ಲಿ 8 ಸಾವಿರ ಕೆರೆಗಳನ್ನು ಶೀಘ್ರಗತಿಯಿಂದ ರಿಪೇರಿ ಮಾಡಬೇಕು ಎಂದೂ ತಿಳಿದು ಬಂದಿರುತ್ತವೆ ಈ ಮಾಸ್ಟರ್ ಪ್ಲಾನ್ ಪ್ರಕಾರ ಸುಮಾರು 14 ಕೋಟಿ ರೂಪಾಯಿಗಳು ಬೇಕೆಂದು ಸ್ಟೇಟ್‌ಮೆಂಟ್ ಮಾಡಲಾಗಿದೆ. ಸ್ಟೇಟ್ ಪ್ರೋಗ್ರಾಮ್ ಹಾಕಿಕೊಂಡು 3-4 ವರ್ಷಗಳಲ್ಲಿ ರಿಪೇರಿ ಕೆಲಸವನ್ನು ಪೂರ್ತಿ ಮಾಡಿ ಸಂಪನ್ಮೂಲಗಳನ್ನು ಉಪಯೋಗ ಮಾಡಿಕೊಳ್ಳುವ ದೃಷ್ಟಿಯಿಂದ ಯೋಜನೆಯನ್ನು ಮಾಡಬೇಕಾಗಿದೆ. ಈ ದೃಷ್ಟಿಯಿಂದ ಈವರುಷ ಐದು, ಐದುವರೆ ಕೋಟಿ ರೂಪಾಯಿಗಳನ್ನು ಒದಗಿಸಿದೆ. ಮುಂದಿನ 2-3 ವರ್ಷಗಳಲ್ಲಿಯೇ ಯಾವ ಯಾವ ಕೆರೆಯನ್ನು ರಿಪೇರಿ ಮಾಡಬೇಕು ಯಾವ ಯಾವ ಕೆರೆಯ ಏರಿಯನ್ನು ಏರಿಸಬೇಕು. ತೂಬುಗಳ ರಿಪೇರಿ ಮಾಡಬೇಕು, ಚಾನಲ್ ತೆಗೆಯಬೇಕು ಇವೆಲ್ಲವನ್ನು ಸರಿಯಾದ ದೃಷ್ಟಿಯಲ್ಲಿಟ್ಟುಕೊಟ್ಟು ನಮ್ಮ ರೈತರಿಗೆ ಅನುಕೂಲ ಮಾಡಿಕೊಡಬೇಕೆಂಬ ಆಶಯವಿರುತ್ತದೆ

ಶ್ರೀ ಟಿ. ಎಂ. ಮಂಜುನಾಥ್.—ನನ್ನ ಸಲಹೆ ಏನೆಂದು ನೀರು ಇರುವ ಕಡೆ ಕೆರೆ ಕಟ್ಟಿ ಸಂತೋಷ. 25 ಇಂಚು ರೇನ್‌ಫಾಲ್ ಕಡಿಮೆ ಎಲ್ಲಿ ಇದೆ ಅಲ್ಲಿ ವಿಶೇಷವಾದ ರಿಯಾಯತಿ ಕೊಟ್ಟು ರಿಗ್ಸ್ ಸಪ್ಲೈ ಮಾಡಿ ಬಾವಿಗಳನ್ನು ತೋಡಿಸಿಕೊಡಬೇಕು. ಎರಡನೆಯದು ಕೆರೆಯನೀರು ಎಲ್ಲೆಲ್ಲಿ ಹರಿಯುತ್ತದೆ ಅಲ್ಲಿ ಪಿಕಪ್ ಹಾಕುವುದರಿಂದ ವಾಟರ್ ಟೇಬಲ್ ರೈಸ್ ಆಗುತ್ತದೆ, ಇಂಥ ಪಿಕಪ್ ಹಾಕುವ ಬಗ್ಗೆ ಯೋಜನೆಯನ್ನು ಹಾಕಿಕೊಂಡಿಲ್ಲ. ಮೂರನೆಯದು ಸಣ್ಣ ಸಣ್ಣ ನಾಲ್ಕು ಎಕರೆ ಮೂರೆ ಎಕರೆ ಆಗತಕ್ಕ ಕಟ್ಟೆಗಳು ಅನೇಕ ಇವೆ. ಇದರ ಬಗ್ಗೆ ತಾವು ಏನು ಯೋಜನೆ ಹಾಕಿಕೊಂಡಿದ್ದೀರಿ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಯಾವರೀತಿ ಸಹಾಯ ಮಾಡಬೇಕೆಂಬುದರ ಬಗ್ಗೆ ರೈತರ ಸಂಗಡ ಮಾತನಾಡಿ ಆಲೋಚನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?.

ಶ್ರೀ ಎಸ್. ಬಿ. ನಾಗರಾಳ್.—ಈ ಸಾರಿ ನಮಗೆ 1976-77ರಲ್ಲಿ ಕೊಟ್ಟಿರತಕ್ಕ 14,82,50,000 ರೂಪಾಯಿಗಳಲ್ಲಿ ಬೆಂಗಳೂರು ಸರ್ಕಲ್‌ಗೆ ರಿಪೇರಿ ಮಾಡತಕ್ಕಂಥಾದ್ದಕ್ಕೆ ನಾನ್‌ಪ್ಲಾನ್‌ನಲ್ಲಿ 1 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾಗಿದೆ. ಇದಕ್ಕಾಗಿ ಪ್ಲಾನ್‌ನಲ್ಲಿ 1,02,10,000 ರೂಪಾಯಿಗಳನ್ನು ಮತ್ತು ಟೋಟಲ್ 2,02,10,000 ರೂಪಾಯಿಗಳನ್ನು ಕೊಟ್ಟಿದ್ದಾಗಿದೆ. ಮೈಸೂರು ಸರ್ಕಲ್‌ಗೆ ನಾನ್‌ಪ್ಲಾನ್‌ನಲ್ಲಿ 1,02,00,000 ಮತ್ತು ಪ್ಲಾನ್‌ನಲ್ಲಿ 71,41,000, ಟೋಟಲ್ 1,73,41,000

ಕೊಟ್ಟಿದೆ. ಶಿವಮೊಗ್ಗ ಸರ್ಕಲ್‌ಗೆ ನಾನ್‌ಪ್ಲಾನ್‌ನಲ್ಲಿ 92,90,000 ಮತ್ತು ಪ್ಲಾನ್‌ನಲ್ಲಿ 95,95,000 ಮತ್ತು ಟೋಟಲ್ 1,88,85,000 ಕೊಟ್ಟಿದೆ. ಮಂಗಳೂರು ಸರ್ಕಲ್‌ಗೆ ನಾನ್‌ಪ್ಲಾನ್‌ನಲ್ಲಿ 32,00,000 ಮತ್ತು ಪ್ಲಾನ್‌ನಲ್ಲಿ 23,63,000 ಟೋಟಲ್ ಆಗಿ 55,63,000 ಕೊಟ್ಟಿದೆ. ಬೆಳಗಾಂ ಸರ್ಕಲ್‌ಗೆ ನಾನ್ ಪ್ಲಾನ್‌ನಲ್ಲಿ 50,00,000 ಮತ್ತು ಪ್ಲಾನ್‌ನಲ್ಲಿ 1,27,41,000 ಮತ್ತು ಟೋಟಲ್ ಆಗಿ 1,77,41,000 ಕೊಟ್ಟಿದೆ, ಧಾರವಾಡ ಸರ್ಕಲ್‌ಗೆ ನಾನ್‌ಪ್ಲಾನ್‌ನಲ್ಲಿ 60,00,000, ಪ್ಲಾನ್‌ನಲ್ಲಿ 72,60,000 ಮತ್ತು ಟೋಟಲ್ 1,32,60,000 ಕೊಟ್ಟಿದೆ. ಇನ್ನು ಗುಲ್ಬರ್ಗ ಸರ್ಕಲ್‌ಗೆ ನಾನ್ ಪ್ಲಾನ್‌ನಲ್ಲಿ 40,00,000 ಪ್ಲಾನ್‌ನಲ್ಲಿ 1,10,90,000 ಮತ್ತು ಟೋಟಲ್ 1,50,90,000 ರೂಪಾಯಿಗಳನ್ನು ಕೊಟ್ಟಿದ್ದಾಗಿದೆ. ಈ ರೀತಿ ಒದಗಿಸಿರತಕ್ಕಂಥಾದ್ದರ ಬಗ್ಗೆ ಎಸ್ಟಾಬ್ಲಿಷ್‌ಮೆಂಟನ್ನು ಕಳೆದು ಆಗತಕ್ಕಂಥ ಖರ್ಚನ್ನು ತೆಗೆಯಲಾಗಿ ಉಳಿದಿರತಕ್ಕಂಥ ಹಣವನ್ನು ಸರ್ಕಲ್‌ವೈಸ್ ಆಗಿ ವಿಭಾಗ ಮಾಡಿಹಾಕಲಾಗಿದೆ. ಯಾವುದೇ ರೀತಿಯಿಂದ ನಮ್ಮ ಸ್ನೇಹಿತರು, ಶಾಸಕರು ಇದರ ಬಗ್ಗೆ ಒಳ್ಳೆಯ ಸಲಹೆ, ಸೂಚನೆಗಳನ್ನು ಏನಾದರೂ ಕೊಟ್ಟರೆ ಮುಂದೆ ರೀ ಅಪ್ರೋಪ್ರಿಯೇಷನ್ ಮಾಡುವ ಕಾಲದಲ್ಲಿ ಸರಿಪಡಿಸುವ ದಿಶೆಯಲ್ಲಿ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಇಲ್ಲಿ ಹೇಳುತ್ತಿದ್ದೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ನೀರಗಂಟಿಗಳನ್ನು ನೇಮಕ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಇದುವರೆವಿಗೂ ನೇಮಕ ಮಾಡಿಲ್ಲ.

ಶ್ರೀ ಎಸ್. ಬಿ. ನಾಗರಾಳ್.—ಕೆಲವೊಂದು ನೀರಗಂಟಿಗಳ ದಿಶೆಯಲ್ಲಿ ಸಮಸ್ಯೆಗಳು ಸರ್ಕಾರದ ಮುಂಗೆ ಇವೆ. ನೀರಗಂಟಿಗಳನ್ನು ಯಾವರೀತಿಯಾಗಿ ನೇಮಕಮಾಡಬೇಕೆನ್ನುವ ಬಗ್ಗೆ ಒಂದು ಸಮಿತಿಯನ್ನು ನೇಮಿಸಲಾಗಿದೆ. ಆ ಸಮಿತಿಯವರು 100,500 ಎಕರೆ ಇರುವವರಿಗೆ ಒಂದು ಯೂನಿಟ್ ಮಾಡಿ ಯೂನಿಟ್‌ಗೆ ಒಬ್ಬೊಬ್ಬ ನೀರಗಂಟಿಯನ್ನು ನೇಮಕ ಮಾಡಬೇಕೆನ್ನುವ ಬಗ್ಗೆ ವರದಿಯನ್ನು ಕೊಟ್ಟಿದ್ದಾರೆ. ನಾವು 500 ಎಕರೆಗೆ ಒಂದು ಯೂನಿಟ್ ಮಾಡಿದಾಗ 1000,3000,3500 ವರೆಗೆ ನೀರಗಂಟಿಗಳನ್ನು ನೇಮಕ ಮಾಡಬೇಕು. ಇದನ್ನು ಆಲೋಚನೆ ಮಾಡಿ ನೋಡಿದಾಗ ಪ್ರತಿವರ್ಷ 67,68 ಲಕ್ಷ ಎಸ್ಟಾಬ್ಲಿಷ್‌ಮೆಂಟ್ ಖರ್ಚು ಕೊಡಬೇಕಾಗಿರತಕ್ಕದ್ದನ್ನು ನೋಡಿದ್ದೇವೆ. ಇದರ ಬಗ್ಗೆ ಪರಿಣಿತರ ಸಂಗಡ ಮಾತನಾಡಿ ಈ ರೀತಿ ಮಾಡುವುದಕ್ಕಿಂತ 600 ಕ್ಕೆ ಒಂದು ಯೂನಿಟ್ ಇಟ್ಟುಕೊಂಡು, ಹಿಂದೆ ಇದ್ದ ನಿಯಮಗಳ ರೀತಿ ನಾಮಿನಲ್ ಆನರೇರಿಯಂನಲ್ಲಿ 300,400, ಮ್ಯಾಕ್ಸಿಮಮ್ 500 ರೂಪಾಯಿಗಳನ್ನು ಕೊಟ್ಟರೆ ಇನ್ನು ಉಳಿದದ್ದನ್ನು ರೈತರ ಕಡೆಯಿಂದ. ಅವರ ಕಡೆಯಿಂದ ಉಪಯೋಗ ಮಾಡತಕ್ಕ ಸಂದರ್ಭ ಇದ್ದೇ ಇರುತ್ತದೆ. ಆನರೇರಿಯಂ ರೀತಿ ಮಾಡಿಬಿಡೋಣ ಎಂದು ಆಲೋಚನೆ ಮಾಡಿ ಇದರ ಬಗ್ಗೆ ಸ್ಪೆಷಲ್ ಸೆಕ್ರೆಟರಿಯ ಹತ್ತಿರ ಮಾತನಾಡಿ ತೀವ್ರಗತಿಯಿಂದ ಕಾರ್ಯಗತ ಮಾಡುವ ದಿಶೆಯಲ್ಲಿ ಪ್ರಯತ್ನ ಮಾಡುತ್ತೇನೆ. ನೀರಗಂಟಿಗಳು ಇಲ್ಲದೆ ನೀರಿನ ವಿತರಣೆ ಸರಿಯಾಗಿ ಆಗುವುದಿಲ್ಲ. ಪ್ರತಿಯೊಬ್ಬ ರೈತರು ಯಾರು ಯಾರು ಮುಂದೆ ಬಂದಿದ್ದು ಯಾರಿಗೆ ತೂಬು ಇದೆಯೋ ಅವರು ಉಪಯೋಗ ಮಾಡುತ್ತಾರೆ. ಇದು ಸರ್ಕಾರದವರ ಗಮನಕ್ಕೆ ಬಂದಿದೆ. ಇದನ್ನು ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಪರಿಣತರ ಜೊತೆಯಲ್ಲಿ, ರೈತರ ಜೊತೆಯಲ್ಲಿ ಮತ್ತು ತಮ್ಮೆಲ್ಲರ ಜೊತೆಯಲ್ಲಿ ಮಾತನಾಡಿ ಇದನ್ನು ಬೇಗ ಪರಿಹರಿಸುವ ದಿಶೆಯಲ್ಲಿ ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ.—ಮೈನರ್ ಇರಿಗೇಷನ್‌ಗೆ ಕಾಸ್ಟ್ ಪರ್ ಎಕರೆ 2000,2500 ರೂಪಾಯಿ ಇಟ್ಟಿದ್ದಾರೆ. ಇದು ಅನೇಕ ಕಡೆ ಮುಗಿದು ಹೋಗಿ ಒಂದು ಮಿತಿಗೆ ಬರುವುದಿಲ್ಲ. ಇದಕ್ಕೆ ಡಿ.ಪಿ.ಎ.ಪಿ. ಪ್ರೋಗ್ರಾಮ್‌ನಲ್ಲಿ ವಿನಾಯಿತಿ ಕೊಟ್ಟು ಸೀಲಿಂಗ್ ಇಲ್ಲದೇ ಪೆಂಡಿಂಗ್ ಇಲ್ಲದೇ ಪೆಂಡಿಂಗ್ ಇರತಕ್ಕಂಥ ಕೆಲಸಗಳನ್ನು ಮಂಜೂರು ಮಾಡಬೇಕು. ಈ ಡಿ.ಪಿ.ಎ.ಪಿ. ಪ್ರೋಗ್ರಾಂನಲ್ಲಿ 50 ಸಾವಿರಕ್ಕೆ ಮೇಲ್ಪಟ್ಟು ಇರತಕ್ಕಂಥ ಕೆಲಸಗಳನ್ನು ತೆಗೆದುಕೊಂಡು ಸಣ್ಣಪುಟ್ಟ ಕೆರೆಗಳ ಕೆಲಸ ನಿಂತು ಹೋಗಿದೆ. ಈ ಒಂದು ಮಿತಿಯನ್ನು ತೆಗೆದು ಎಲ್ಲಾ ಕೆಲಸಗಳೂ ಡಿ.ಪಿ.ಎ.ಪಿ. ಪ್ರೋಗ್ರಾಮ್‌ನಲ್ಲಿ ಬರುವ ರೀತಿಯಲ್ಲಿ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎಸ್. ಬಿ. ನಾಗರಾಳ್.—ಇದರಲ್ಲಿ ಒಂದು ಪಾಲಿಸಿ ಮ್ಯಾಟರ್ ಇಟ್ಟುಕೊಂಡು ಒಂದು ರೇಷಿಯೋ ಪ್ರಕಾರ ನೀರಿನ ಕರವನ್ನು ವಸೂಲು ಮಾಡುತ್ತಾರೆ. ಇದಕ್ಕೆ ಒಂದು ಸೀಲಿಂಗ್ ಲಿಮಿಟ್ 2000,2500 ರೂಪಾಯಿ ಎಂದು ನಿಗದಿ ಮಾಡಿದ್ದಾರೆ.

ಶ್ರೀ ಸಿ. ಬೈರೇಗೌಡ.—ವರ್ಷೇವರ್ಷೇ ಷೆಡ್ಯೂಲ್ ಬೆಲೆ ಜಾಸ್ತಿಯಾಗುತ್ತಿದೆ.

ಶ್ರೀ ಎಸ್. ಬಿ. ನಾಗರಾಳ್.—ನೀವು ಹೇಳಿರುವುದು ಒಳ್ಳೆಯ ಸಲಹೆ. ಆದರ ಬಗ್ಗೆ ಪ್ರಯತ್ನ ಮಾಡಬೇಕಾಗುತ್ತದೆ. ಕೆಲವೊಂದು ಕಡೆ ಗುಡ್ಡಗಾಡು ಪ್ರದೇಶದಲ್ಲಿ ಅವರ ಒಂದು ಉದಾಹರಣೆಯನ್ನು ಹೇಳಬೇಕಾದರೆ 50-60 ವರ್ಷಗಳಿಂದ ಅಗಲವಿರದೇ ಇದ್ದ ಮಣಿಗಟ್ಟ ಟ್ಯಾಂಕನ್ನು ರಿಲ್ಯಾಕ್ಸ್ ಮಾಡಿ ಕೊಟ್ಟಿದ್ದೇವೆ. ಅಲ್ಲಿಗೆ ಹೋದಾಗ ಇದು ಸಮಂಜಸವಾದುದು ಎನಿಸಿದ್ದರಿಂದ ಅಲ್ಲಿ ಮಾಡಿಕೊಟ್ಟದ್ದಾಗಿದೆ. ಎಲ್ಲಾ ಕಡೆಗೂ ಮಾಡಿದರೆ ಪರಿಸ್ಥಿತಿ ಏನು ಆದೀತು ಎನ್ನುವ ಬಗ್ಗೆ ಆಲೋಚನೆ ಮಾಡತಕ್ಕ ಸಂದರ್ಭ ಇದಾಗಿದೆ.

ಶ್ರೀ ಎ. ಜಿ. ಕೊಡಗಿ.—ಅಧ್ಯಕ್ಷರೇ ಮಾನ್ಯಮಂತ್ರಿಯವರು ಅವರಾಗಿಯೇ ಒಪ್ಪಿದ್ದಾರೆ. ಇಲ್ಲಿಯ ವರೆಗೆ ದಕ್ಷಿಣಕನ್ನಡ ಜಿಲ್ಲೆಗೆ 2½ ಲಕ್ಷ ಮಾತ್ರ ಖರ್ಚು ಮಾಡಿದ್ದಾರೆ. 1976-77ರಲ್ಲಿ ಬೇರೆ ಕಡೆಗಳಿಗೆ ಕೋಟಿಗಟ್ಟಲೆ ಹಣ ಒದಗಿಸಿದ್ದರೂ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಒದಗಿಸಿರುವುದು 55ಲಕ್ಷ ಮಾತ್ರ. ಮಂಗಳೂರು ಸರ್ಕಲ್‌ನಲ್ಲಿ ಮಂಜೂರಿ ಬಂದಿದೆ; ಒಟ್ಟಿಗೆ 55ಲಕ್ಷವನ್ನು ಒದಗಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣನೀರಾವರಿ ಆದ್ಯತೆಯನ್ನು ಕೊಡಬೇಕೆನ್ನುವುದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ದೊಡ್ಡ ದೊಡ್ಡ ಪ್ರಮಾಣದ ನೀರಾವರಿ ಮಧ್ಯಮವರ್ಗದ ನೀರಾವರಿ ಎಂದು ಅನೇಕ ಯೋಜನೆಗಳು ತಮ್ಮ ಮುಂದೆ ಇವೆ. ಎಲ್ಲಕ್ಕೂ ಹಣವನ್ನು ಒದಗಿಸಿಕೊಟ್ಟು ನಮ್ಮ ಕಡೆ ಸಣ್ಣನೀರಾವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವಂತೆ ಭರವಸೆಯನ್ನು ಕೊಡಬೇಕು.

ಶ್ರೀ ಎಸ್. ಬಿ. ನಾಗರಾಳ್.—ಅಧ್ಯಕ್ಷರೇ, ಸಣ್ಣನೀರಾವರಿಗೆ ಕೊಡತಕ್ಕಂಥದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ಅವರಿಗೆ ಸಣ್ಣನೀರಾವರಿಗಾಗಿ 1ಕೋಟಿಯನ್ನು ಕೊಟ್ಟರೂ ಖರ್ಚಾಗತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ. ಅಲ್ಲಿ ಎಷ್ಟು ಬೇಕಾಗಿದೆ ಅಷ್ಟನ್ನು ಕೊಡಬೇಕು ಎನ್ನುವ ಬಗ್ಗೆ, ಕಡಿಮೆ ಕೊಡಬೇಕು ಎನ್ನುವ ಅಭಿಪ್ರಾಯ ನಮ್ಮದಲ್ಲ. ಮಾನ್ಯ ಸದಸ್ಯರ ಸಂಗಡ ಮೀಟಿಂಗ್ ಮಾಡಿದಾಗ ಅಲ್ಲಿಯ ಅಂಕಿಸಂಖ್ಯೆಗಳನ್ನು ನೋಡಿದಾಗ 30-35 ಲಕ್ಷದ ಬೇಡಿಕೆ ಇತ್ತು. ನಾವು 26ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅವರು ಚರ್ಚೆ ಕಾಲದಲ್ಲಿ ಸ್ಪ್ರಿಂಗ್ಸ್ ಏನು ಇವೆ ಅವು ಹೂತು ಹೋಗಿವೆ, ರಿಪೇರಿ ಮಾಡಬೇಕೆಂಬುದಾಗಿ ಅವರು ಸಲಹೆ ಕೊಟ್ಟರು. ಅದನ್ನು ಅಕ್ಸೆಪ್ಟ್ ಮಾಡಿದ್ದೇನೆ. ಈಮುದಗ ಸ್ಪ್ರಿಂಗ್ಸ್ ಇರತಕ್ಕಂಥ ಜಾಗದೊಳಗೆ ಹೂಳು ತೆಗೆಸುವುದು ನಮ್ಮ ಕರ್ತವ್ಯ. ವಿಶೇಷವಾಗಿ ಅವರಿಗೆ ಏನು ಬೇಕುಎನ್ನುವುದರ ಬಗ್ಗೆ ಯಾವರೀತಿಯ ಅನಾದರಣೆ ತೋರದೆ ಒದಗಿಸಿಕೊಡಬೇಕಾಗಿರತಕ್ಕಂಥ ಸೌಲಭ್ಯಗಳನ್ನು ಒದಗಿಸಿಕೊಡುವುದರಲ್ಲಿ ಈಗಾಗಲೇ ಸಾಕಷ್ಟು ಪ್ರಯತ್ನ ಮಾಡಿದ್ದೇವೆ; ಇನ್ನು ಮುಂದೆಯೂ ಪ್ರಯತ್ನ ಮಾಡುತ್ತೇವೆಂದು ಹೇಳುತ್ತಿದ್ದೇನೆ. ಇನ್ನು ಡಿ.ಪಿ.ಎ.ಪಿ. ಪ್ರೋಗ್ರಾಮ್‌ನಲ್ಲಿ 50ಸಾವಿರ ಇರತಕ್ಕಂಥಾದ್ದು ಇದು ಕೇಂದ್ರ ಸರ್ಕಾರದ ಸ್ಕೀಮು 50 ಸಾವಿರ ಒಳಗಡೆ ಸ್ಟೇಟ್ ಪ್ಲಾನ್‌ದೊಳಗೆ ಮಾಡಿ, 50 ಸಾವಿರಕ್ಕೆ ಮೇಲ್ಪಟ್ಟು ಕಾಮಗಾರಿಗಳನ್ನು ಡಿ.ಪಿ.ಎ.ಪಿ. ಕಾರ್ಯಕ್ರಮದಲ್ಲಿ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಈ ಯೋಜನೆ ಕಾರ್ಯಗತವಾಗುತ್ತಾ ಇದೆ. ಇವತ್ತಿನದಿವಸ 50 ಸಾವಿರವನ್ನು ಜಾಸ್ತಿ ಮಾಡಬೇಕೆಂದರೆ ಅದು ನಮ್ಮ ಕಡೆಗೆ ಇಲ್ಲ. ಆದ್ದರಿಂದ ಈ ವಿಷಯವನ್ನು ಪ್ರಸ್ತಾಪ ಮಾಡುವುದು ಬೇಡವೆಂದು ಮಾನ್ಯ ಸದಸ್ಯರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಶ್ರೀಮಾನ್ ಜೆ. ಎಲ್. ಕಬಾಡಿಯವರು ಮಾತನಾಡುತ್ತಾ ಬಿಜಾಪುರದಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮ್ ದೆಸೆಯಿಂದ ಯಾವುದೂ ಸರಿಯಾಗಿ ನಡೆಯುತ್ತಾ ಇಲ್ಲ. ವಿಶೇಷವಾಗಿ ಇದನ್ನು ಆದ್ಯತೆ ಮೇಲೆ ಕೆಲಸ ಮಾಡಿಕೊಡಬೇಕು ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಇವತ್ತಿನದಿವಸ ನನಗೆ ಬಂದಿರತಕ್ಕ ವರದಿಮೇರೆಗೆ ಸಂಕ, ಉಮಾರ್ಜಿ, ಸಿದ್ನಾಳ್, ಗುಳ್ಳಿಯಲ್ಲಿ ಸೀಲಿಂಗ್ ವರ್ಕ್ಸ್ ಕಂಪ್ಲೀಟಾಗಿವೆ. ಇರಿಗೇಷನ್ ಪಂಪ್ಸ್ ದೆಸೆಯಿಂದ ಪ್ರೋಗ್ರೆಸ್ ನಡೆದಿದೆ. ಇದನ್ನು ಮಾರ್ಚ್ 31ರೊಳಗೆ ಮುಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಅಧಿಕಾರಿವಲಯದಿಂದ ರಿಪೋರ್ಟ್ ಬಂದಿದೆ, ವಿಶೇಷವಾಗಿ ಧೂಳ್‌ಖೇಡ್ ಲಿಫ್ಟ್ ಇರಿಗೇಷನ್ ಅನ್ನು ಆದ್ಯತೆ ಮೇಲೆ ಮಾಡಿಕೊಡಬೇಕೆಂದು ಹೇಳಿದರು. ಚೀಫ್ ಇಂಜಿನಿಯರ್ ಅಲ್ಲಿಗೆ ಹೋಗಿ ಇನ್ಸ್‌ಪೆಕ್ಟ್ ಮಾಡಿಕೊಂಡು ಬಂದು ಯಾವರೀತಿ ಮಾಡಬೇಕೆಂಬುದರ ಬಗ್ಗೆ ಸಲಹೆಯನ್ನು ಕೊಟ್ಟಿದ್ದಾರೆ. ಇದನ್ನು ಮಾರ್ಚ್ 30ರೊಳಗೆ ಮುಗಿಯದೇ ಹೋದರೆ ಜೂನ್ ತಿಂಗಳ ಅಂತ್ಯದಲ್ಲಿ ಮುಗಿಸಿಕೊಡಬೇಕೆಂದು ಈ ಯೋಜನೆಯಲ್ಲಿ ಹಾಕಿಕೊಂಡಿದ್ದೇವೆ.

2-00 P. M.

ಲಿಫ್ಟ್ ಇರಿಗೇಷನ್ ಸ್ಕೀಂ ಬಗ್ಗೆ ಹೇಳಬೇಕಾದರೆ 200, 300 ಲಿಫ್ಟ್ ಇರಿಗೇಷನ್ ಮಂಜೂರು ಮಾಡಿದರೂ ನೀರನ್ನು ಉಪಯೋಗ ಮಾಡತಕ್ಕಂಥ ರೈತರು ಕೊಡಬೇಕಾದಂಥ ಮೈಂಟೆನೆಸ್ಸ್ ಚಾರ್ಜಸ್ ಇವತ್ತಿನ ತನಕ ಸರ್ಕಾರಕ್ಕೆ ಕೊಟ್ಟಿಲ್ಲ. ವಿದ್ಯುಚ್ಛಕ್ತಿ ಚಾರ್ಜನ್ನೂ ಕೊಟ್ಟಿಲ್ಲ. ವಿದ್ಯುಚ್ಛಕ್ತಿ ಚಾರ್ಜನ್ನು ಕೊಡದೇ ಹೋದರೆ ಡಿಸ್‌ಕನೆಕ್ಟ್ ಮಾಡಿ ಎಂದು ವಿದ್ಯುಚ್ಛಕ್ತಿ ಮಂತ್ರಿಗಳು ಹೇಳುತ್ತಿದ್ದಾರೆ. ನಾವು ಯಾವ ರೀತಿ ಕೆಲಸ ಮಾಡಬೇಕು ? ಅವರು ಕೊಡುವ ಹಾಗಿಲ್ಲ. ನಾವು ಬಿಡುವ ಹಾಗಿಲ್ಲ ರೈತರಿಗೆ ಅನಾನುಕೂಲ ಆಗಬಾರದು ಎಂಬ ದೃಷ್ಟಿಯಿಂದ 1975-76ರ ವರೆಗೆ 61 ಲಕ್ಷ ರೂಪಾಯಿ ವಿದ್ಯುಚ್ಛಕ್ತಿ ದರವನ್ನು ಸರ್ಕಾರದ ವತಿಯಿಂದ ಜಮಾ ಮಾಡಿದ್ದೇವೆ. ಇದೇ ರೀತಿ ಆದರೆ ಪರಿಹಾರ ಒದಗುವುದಿಲ್ಲ ಎಂಬ ದೃಷ್ಟಿಯಿಂದ ಈ ಇರಿಗೇಷನ್ ಆಕ್ಟಿನಲ್ಲಿ ರೂಲ್ಸ್ ಬದಲಾವಣೆ ಮಾಡಿದ್ದೇವೆ. ಯಾವುದೇ ರೀತಿಯಿಂದ ಕೊಡದೆ ಬಂದಿದ್ದಾದರೆ, ಲ್ಯಾಂಡ್ ರೆವಿನ್ಯೂ ಅರಿಯರ್ಸ್ ರೀತಿ ಟ್ಯಾಕ್ಸ್ ವಸೂಲು ಮಾಡಬಹುದು ಎಂದು ಕಾನೂನು ಮಾರ್ಪಾಡು ಮಾಡಲಾಗಿದೆ. ಮಾನ್ಯ ಸದಸ್ಯರಾದ ಕಬಾಡೆಯವರ ಜಿಲ್ಲೆಯಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಂನಲ್ಲಿ 13, 127 ಎಕರೆಗೆ ನೀರಿನ ಸೌಲಭ್ಯ ಒದಗಿಸಿದ್ದೇವೆ. ದುರ್ದೈವದಿಂದ ಆ ನೀರನ್ನು ಉಪಯೋಗ ಮಾಡಿಕೊಳ್ಳುತ್ತಿಲ್ಲ.

ಶ್ರೀ ಜೆ. ಎಲ್. ಕಬಾಡೆ.—ಅಂಶದಕೆರೆ ಯೋಜನೆ ನೀರನ್ನು ಯಾವರೀತಿ ಕೊಡಬೇಕು ಎಂಬುದು ಈ ಯೋಜನೆ ಕೆಳಗೆ ಏನು ಎಸ್ಟಿಮೇಟ್ ಇದೆ ಆದರ ಪ್ರಕಾರ ನೀರು ಒದಗದೆ ಸ್ಕೀಂ ಫೈಲ್ಯೂರ್ ಆಗಿದೆ.

ಶ್ರೀ ಎಸ್. ಬಿ. ನಾಗರಾಳ್.—ಇವತ್ತು ಬೇಕಾದರೆ ಕರೆದುಕೊಂಡು ಹೋಗುತ್ತೇನೆ. ಟೈಲ್ ಎಂಡ್ ತನಕ ನೀರು ಹೋಗಿಲ್ಲವೆಂದು ಹೇಳಿದರು. ಟೈಲ್‌ಎಂಡ್‌ತನಕ ನೀರುಬಿಡಿಸಿ ನೋಡಿದ್ದೇವೆ. ಬ್ಲಾಕ್‌ಸಾಯಿಲ್ ಇದ್ದುದರಿಂದ ಮುರಂ ಹಾಕಿ ರಿಪೇರಿ ಮಾಡಿಸಿಕೊಟ್ಟಿದ್ದೇವೆ. ಫೀಲ್ಡ್ ಚಾನಲ್ ಮಾಡಿಕೊಟ್ಟಿದ್ದೇವೆ. ಆದರೂ ಜನರು ಮುಂದೆ ಬರುತ್ತಿಲ್ಲ. ಈಗ ಜನರಲ್ಲಿ ಇರತಕ್ಕ ಅಭಿಪ್ರಾಯವೇನೆಂದರೆ ನಾವು ನೀರು ಉಪಯೋಗಿಸಿಕೊಂಡರೆ ಲ್ಯಾಂಡ್ ರಿಫಾರ್ಮ್ಸ ಪ್ರಕಾರ ಇರತಕ್ಕ ಭೂಮಿ ಹೋಗುತ್ತದೆ ಎಂಬ ಅಭಿಪ್ರಾಯ ಅವರಲ್ಲಿ ಇದೆ. ಲ್ಯಾಂಡ್ ರಿಫಾರ್ಮ್ಸ್ ಆಕ್ಟಿನಲ್ಲಿ ನೀರಾವರಿ ಒದಗಿಸಿದರೆ ಎಷ್ಟು ಎಕರೆ ಇರಬೇಕು ಎಂದು ಸ್ಪಷ್ಟವಾಗಿ ಇರುವಾಗ ಅವರು ಆ ರೀತಿ ತಿಳಿದುಕೊಳ್ಳುವುದು ಸರಿಯಲ್ಲ ಎಂದು ವಿಷಾದದಿಂದ ಹೇಳುತ್ತೇನೆ. ಸನ್ಮಾನ್ಯ ಕಬಾಡೆಯವರನ್ನು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಆ ಭಾಗದಲ್ಲಿ ಒದಗಿಸಿರತಕ್ಕ ನೀರನ್ನು ಉಪಯೋಗಿಸಿಕೊಳ್ಳಬೇಕು. ವಿಜಾಪುರ, ಗುಲ್ಬರ್ಗ, ಬೀದರ್, ಬರಗಾಲ ಪೀಡಿತ ಪ್ರದೇಶ ಎಂದು ಹಿಂದೆ ಬರಗಾಲ ಬಂದಾಗ ಬೇಕಾದಷ್ಟು ಸ್ಕೀಂಗಳನ್ನು ಮಂಜೂರು ಮಾಡಿದ್ದೇವೆ. ಒಂದು ಕೋಟಿ ರೂಪಾಯಿ ಆ ಸರ್ಕಲ್‌ಗೆ ಕೊಟ್ಟು ಹಿಂದೆ ಮಾಡಿದ ಕೆಲಸಗಳು ಪೂರ್ತಿ ಮಾಡುವುದು ನನ್ನ ಪಾಲಿಗೆ ಬಂದಿದೆ, ಅಲ್ಲಿರತಕ್ಕ ಸಂಪನ್ಮೂಲಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬೇಕು ಎಂದು ಹೇಳಿ ಮಾಡಿದ್ದೇವೆ.

ಇನ್ನೊಂದು ವಿಷಯ, ಭೀಮಾ ನದಿಗೆ ಮಹಾರಾಷ್ಟ್ರದವರು ಬ್ಯಾರೇಜ್ ಹಾಕುತ್ತಾರೆ. ಇದರಿಂದ ಕೆಳಗೆ ಇರತಕ್ಕವರಿಗೆ ನೀರು ಸಾಕಷ್ಟು ಸಿಗದೆ ಕೊರತೆಯಾಗುತ್ತದೆ ಎಂದು ಹೇಳಿದರು. ನನಗೆ ಬಂದಿರತಕ್ಕ ವರದಿ ಮೇರೆಗೆ ಅಫಜಲ್‌ಪುರ್ ಹತ್ತಿರ ಮೇಜರ್ ಇರಿಗೇಷನ್ ಇನ್‌ವೆಸ್ಟಿಗೇಟ್ ಮಾಡಿ ಸ್ಕೀ ರೆಡಿ ಮಾಡಿದ್ದೇವೆ. ಅದು ಅಕಸ್ಮಾತ್ ಆಯಿತು ಎಂದರೆ ಈ ಪ್ರಶ್ನೆ ಬರುವುದಿಲ್ಲ ಎಂದು ನನ್ನ ಅಭಿಪ್ರಾಯ. ಭೀಮ ನದಿ ಮೇಲೆ ಬ್ಯಾರೇಜ್ ಹಾಕುವ ಉದ್ದೇಶ ಮಹಾರಾಷ್ಟ್ರದವರು ಸೊಲ್ಲಾಪುರಕ್ಕೆ ನೀರು ಒದಗಿಸಬೇಕು ಎಂಬುದು. ಇರಿಗೇಷನ್ ದೆಸೆಯಿಂದ ಉಪಯೋಗ ಆಗಲಿಕ್ಕಿಲ್ಲ ಎಂದು ತಿಳಿದುಕೊಂಡಿದ್ದೇನೆ. ಒಂದು ವೇಳೆ ಮೇಲುಗಡೆ ಇರತಕ್ಕ ಲಿಫ್ಟ್ ಇರಿಗೇಷನ್ ಸ್ಕೀಮಿಗೆ ತೊಂದರೆಯಾಗುವ ಪ್ರಸಂಗ ಬಂದರೆ ಕೆಲವೊಂದು ಬ್ಯಾರೇಜ್ ತೆಗೆದುಕೊಳ್ಳಬೇಕು ಎಂದು ಚೀಫ್ ಇಂಜಿನಿಯರ್ ಹೋದಾಗ ಇಂತಿಂಥ ಬ್ಯಾರೇಜ್ ತೆಗೆದುಕೊಳ್ಳಬೇಕು ಎಂದು ಆದೇಶ ಕೊಟ್ಟಿದ್ದೇವೆ. ಮೇಲುಗಡೆ ಇರತಕ್ಕ ಲಿಫ್ಟ್ ಇರಿಗೇಷನ್ ಸ್ಕೀಮಿಗೆ ನೀರಿನ ಕೊರತೆ ಆಗದಹಾಗೆ ಸರ್ಕಾರ ನೋಡಿಕೊಳ್ಳುತ್ತದೆ. ಲಿಫ್ಟ್ ಇರಿಗೇಷನ್‌ಗೆ

ನೀರನ್ನು ಒದಗಿಸದೆ ನೀರಿನ ಕೊರತೆಯಾದರೆ ಯೋಜನೆ ಸಫಲವಾಗುವುದಿಲ್ಲ ಎಂದು ಸರ್ಕಾರದ ತಿಳುವಳಿಕೆ ಇದೆ. ಆ ರೀತಿಯಾಗಿ ತೊಂದರೆ ಆಗದಂತೆ ನಾನು ನೋಡಿಕೊಳ್ಳುತ್ತೇನೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇಲ್ಲಿ ಸಣ್ಣ ನೀರಾವರಿ ಬಗ್ಗೆ ಒಳ್ಳೆಯ ಮಾತನ್ನು ಆಡಿರ ತಕ್ಕ ಸನ್ಮಾನ್ಯ ಸದಸ್ಯರಿಗೆ ವಂದಿಸುತ್ತೇನೆ.

ಶ್ರೀ ಪಿ. ಎಂ. ಭಂಗಿ —ಹಾಲಹಳ್ಳಿ ರೋಡಿನಲ್ಲಿ ಸವಳಿಗೆ ಕೆರೆ ಮಂಜೂರು ಮಾಡುತ್ತೇವೆ ಎಂದು ಹೇಳಿದ್ದಿರಿ ಅದು ಏನಾಯಿತೋ ಗೊತ್ತಿಲ್ಲ.

ಶ್ರೀ ಎಸ್. ಬಿ. ನಾಗರಾಳ್.—ಈಗ ಮಾಡಬೇಕು ಎಂದು ಸರ್ಕಾರದ ಉದ್ದೇಶ ಇದೆ. ಈ ವೇಳೆಯಲ್ಲಿ ದೊಡ್ಡ ದೊಡ್ಡ ತೋಟ ಮುಳುಗಡೆಯಾಗಿ ಲುಕ್ಸಾನು ಆಗುತ್ತದೆ ಎಂದು ತಜ್ಞರಿಂದ ಸಲಹೆ ಬಂದಿದೆ. ಕೆರೆ ತೆಗೆದುಕೊಂಡರೆ ಅಕ್ವೆಸಿಷನ್ ಷುರು ಮಾಡಬೇಕಾಗುತ್ತದೆ. ಸನ್ಮಾನ್ಯ ಸದಸ್ಯರು ವಿಶೇಷವಾಗಿ ವರ್ಚಸ್ಸನ್ನು ಉಪಯೋಗ ಮಾಡಿ ಭೂಮಿ ಕೊಡಿಸುತ್ತೇವೆ ಎಂದು ಆಶ್ವಾಸನೆ ಕೊಟ್ಟರೆ ಕೆಲಸವನ್ನು ತೆಗೆದುಕೊಳ್ಳುತ್ತೇವೆ ಎಂದು ಈ ಸಭೆಯಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಲೆನಾಡಿನ ಟ್ಯಾಂಕನ್ನೂ ಮೈದಾನದ ಟ್ಯಾಂಕನ್ನೂ ಒಂದು ಮಾಡುವುದಕ್ಕೆ ಹೋಗಬೇಡಿ. ಹಿಂದೆ ಏನು ಅಚ್ಚುಕಟ್ಟು ಇತ್ತು ಎಂದು ಪಟ್ಟಿ ಇದೆ. ಈಗಿರತಕ್ಕ ಟ್ಯಾಂಕ್ ಕೆಪ್ಯಾಸಿಟಿ ಆಧಾರದ ಮೇಲೆ ಪೂರ್ಣವಾಗಿ ಸರ್ವೆ ಮಾಡಿ ಆ ಅಚ್ಚುಕಟ್ಟನ್ನು ರಿವೈಸ್ ಮಾಡಿಸಬೇಕು.

ಅಧ್ಯಕ್ಷರು.—ರೈತರ ಕಡೆಯಿಂದ ಟ್ಯಾಕ್ಸ್ ತೆಗೆದುಕೊಂಡರೆ ಮಾಡಿಸುತ್ತೇವೆ ಎಂದು ಹೇಳಿದ್ದಾರೆ. I will now put the Demands to the vote of the House. The question is :

> "That respective sums not exceeding the amounts be granted to the Government to defray the charges which will come in course of payment during the financial year ending 31st day of March, 1977 in respect of Demand Nos. 18, 19, 27, 54, 55, and and 41."

(The motion is adopted and the Demands are voted).

*As ordered by the Chair, the motion for Demands for Grants adopted by the House are reproduced below :—*

> "That a sum not exceeding Rs, 24.06,99,000 be granted to the Government to defray the charges which will come in course payment during the financial year ending 31st day of March 1977 in respect of Demand No. 18 'Public Works (Excluding Construction)."

> "That a sum not exceeding Rs. 8,60,93,000 be granted to the Government to defray the charges which will come in course of payment during the financial year ending 31st day of March 1977 in respect of Demand No. 19–"Buildings".

"That a sum not exceeding Rs. 9,07,00,000 be granted to the Government to defray the charges which will come in course of payment during the financial year ending 31st day March 1977 in respect of Demand No. 27-"Public Health Engineering".

"That a sum not exceeding 73 63,000 be granted to the Government to defray the charges which will come in course of payment during the financial year ending 31st day of March 1977 in respect of Demand No-54 "Ports Water and Transport Services".

"That a sum not exceeding Rs. 26,83,00,000 be granted to the Government to defray the charges which will come in course of payment during the financial year ending 31st day of March 1977 in respect of Demand No. 55-"Roads and Bridges."

"That a sum not exceeding Rs. 14,82,50,000 be granted to the Government to defray the charges which will come in course of payment during the financial year ending 31st day of March 1977 in respect of Demand No. 41-"Minor Irrigation."

Now the House stands adjourned to meet again on Monday at 1 p. m.

---

*The House adjourned at Eight Minutes Past two of the Clock to meet again at One of the Clock on Monday, the 22nd March, 1976.*

---